ವಾರ್ಷಿಕ ಚಂದಾ ರೂ.25/-

# ಮಾರ್ಚ್ ಜನಪದ

ಸಂಪುಟ-08 • ಸಂಚಿಕೆ-01 • ಅಕ್ಟೋಬರ್ 2024





ಸೆಪ್ಟೆಂಬರ್ 21 ರಂದು ಮೈಸೂರಿನ ತಮ್ಮ ನಿವಾಸದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುತ್ತಿರುವುದು.



ಸೆಪ್ಟೆಂಬರ್ 10 ರಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಮತ್ತು ರಾಜ್ಯ ಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿಗಳು ಮತ್ತು ರೈತ ಮುಖಂಡರಾದ ಕುರುಬೂರು ಶಾಂತಕುಮಾರ್ ಅವರ ನೇತೃತ್ವ ತಂಡದವರ ಬೇಡಿಕೆಗಳ ಬಗ್ಗೆ ಮುಖ್ಯಮಂತ್ರಿ ಅವರು ವಿಧಾನಸೌಧದ ತಮ್ಮ ಕಚೇರಿಯಲ್ಲಿ ಚರ್ಚೆ ನಡೆಸಿದ ಸಂದರ್ಭ.




ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-08 • ಸಂಚಿಕೆ-01 • ಅಕ್ಟೋಬರ್ 2024







06 ಸಂಭ್ರಮದಿಂದ ಜರುಗಿದ ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ
• ರವಿ ಮಿರಸ್ಕರ್

12 ದಶಕದ ಬಳಿಕ ಕಲಬುರಗಿಯಲ್ಲಿ ಸಚಿವ ಸಂಪುಟ ಸಭೆ
• ರವಿ ಮಿರಸ್ಕರ್

17 ಸಮಾನತೆ, ಏಕತೆ ಮತ್ತು ಭ್ರಾತೃತ್ವಕ್ಕಾಗಿ ಐತಿಹಾಸಿಕ ಮಾನವ ಸರಪಳಿ
• ಚಂದ್ರಮುಖಿ

22 ತಾಯಿ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಪ್ರಾಧಿಕಾರದ ಮೊದಲ ಸಭೆ

26 ಶ್ರೀ ಕೃಷ್ಣರಾಜೇಂದ್ರ ಗರಡಿಯಲ್ಲಿ ಮಿಂಚಿದ ಪೈಲ್ವಾನರು
• ವೇಮಗಲ್ ಸೋಮಶೇಖರ್

30 ಇಂದಿರಾ ಮಾಸ್ಟರ್ ಕಿಚನ್‌ಗೆ ಪರಿಸರ ಸ್ನೇಹಿ ಇಂಧನ ಬಳಕೆ
• ಲೋಕೇಶ್ ಜೆ.

31 ಮಹಿಳೆಯರ ಪಾಲಿಗೆ ಸಂಜೀವಿನಿಯಾಗಿರುವ ಗೃಹಲಕ್ಷ್ಮಿ ಯೋಜನೆ
• ರಘುನಾಥ ಡಿ.ಪಿ

34 ಮತ್ತೆ ನೆನಪಾಗುತ್ತಿರುವ ಗಾಂಧಿ

38 ಬದನವಾಳು ಗ್ರಾಮದಲ್ಲಿ ಗಾಂಧಿ ಹೆಜ್ಜೆಗಳು
• ಅಶೋಕ್ ಕುಮಾರ್. ಡಿ

40 ನನ್ನ ಮೇಲೆ ಪ್ರಭಾವ ಬೀರಿದ ಗಾಂಧೀಜಿ ಅವರ ತತ್ವ ಸಿದ್ಧಾಂತಗಳು
• ಡಿ.ಧನುಶ್ರೀ

43 ಗಾಂಧಿಯ ಖಾದಿ ಕರೆಗೆ ಮನಸೋತಿದ್ದ ತುಮಕೂರಿಗರು
• ಲಕ್ಷ್ಮೀಕಾಂತರಾಜು ಎಂ. ಜಿ

44 ಮಂಕಿಪಾಕ್ಸ್ ರೋಗ ತಡೆಗೆ ಮಾರ್ಗೋಪಾಯ
• ಡಾ. ವರಪ್ರಸಾದ್ ರಾವ್ ಪಿ ವಿ.

46 ಸರ್ಕಾರಿ ನೌಕರಿ ತ್ಯಜಿಸಿ ಕೃಷಿಯಲ್ಲಿ ಜೀವನ ಕಂಡುಕೊಂಡ ಶಿವಕುಮಾರ
• ಗಣಪತಿ ಹಾಸ್ಪುರ

48 ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾ ಪ್ರವಾಸಿ ತಾಣಗಳು
• ಎನ್. ಜಗನ್ನಾಥ ಪ್ರಕಾಶ

50 ಪದಬಂಧ-59


**ಪ್ರಧಾನ ಸಂಪಾದಕರು**
ಹೇಮಂತ್ ಎಂ ನಿಂಬಾಳ್ಕರ್, ಐ.ಪಿ.ಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ಸಂಪಾದಕೀಯ ಸಲಹೆ**
ಪಲ್ಲವಿ ಹೊನ್ನಾಪುರ (ಹೆ.ಪ್ರ)
ಜಂಟಿ ನಿರ್ದೇಶಕರು

ಸಹನಾ ಎಂ.
ಉಪ ನಿರ್ದೇಶಕರು

**ಉಪ ಸಂಪಾದಕರು**
ಬಿ. ಜಿ. ಪೂರ್ಣಿಮ

**ಪ್ರಕಾಶಕರು**
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು - 560 001
Ph : 080 22028023
email : varthajanapada@yahoo.co.in
https://dipr.karnataka.gov.in

**ಮುದ್ರಕರು**
ಲಾವಣ್ಯ ಮುದ್ರಣ
# 19, ವಿದ್ಯಾಪೀಠ ವೃತ್ತ,
ಬನಶಂಕರಿ 1ನೇ ಹಂತ, ಬೆಂಗಳೂರು-50

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

# ನಿಮ್ಮ ಅನಿಸಿಕೆ

ನಮ್ಮ ರಾಜ್ಯ ಸರ್ಕಾರವು ದೇಶದಲ್ಲೇ ಪ್ರಪ್ರಥಮ ಬಾರಿಗೆ ಅಂಗನವಾಡಿಗಳಲ್ಲಿ ಮಾಂಟೆಸ್ಸರಿ ಆರಂಭಿಸುತ್ತಿರುವುದು ನಿಜಕ್ಕೂ ಸಂತಸದ ಸಂಗತಿ. ಮಧ್ಯಮ ಮತ್ತು ಬಡ ವರ್ಗದವರು ಲಕ್ಷಾಂತರ ಹಣ ನೀಡಿ ಮಕ್ಕಳನ್ನು ಎಲ್.ಕೆ.ಜಿ ಗೆ ಸೇರಿಸುವುದು ಕಷ್ಟ. ಈಗ ಸರ್ಕಾರವೇ ಅಂಗನವಾಡಿಯಲ್ಲಿ ಎಲ್.ಕೆ.ಜಿ ಮತ್ತು ಯು.ಕೆ.ಜಿಯನ್ನು ಆರಂಭಿಸಿರುವುದರಿಂದ ಪೋಷಕರಿಗೆ ಹಣ ಉಳಿತಾಯವಾಗಲಿದೆ.

ಬಡ ಮತ್ತು ಮಧ್ಯಮ ವರ್ಗದ ಮಕ್ಕಳಿಗೆ ಉತ್ತಮ ಶಿಕ್ಷಣವೆಂಬುದು ಮರೀಚಿಕೆ ಆಗುತ್ತಿರುವುದನ್ನು ಸರ್ಕಾರದ ಈ ಕಾರ್ಯವು ಸಕಾರಗೊಳಿಸಲಿದೆ. ಈ ಮಾಂಟೆಸ್ಸರಿಯಲ್ಲಿ ಕನ್ನಡ ಮತ್ತು ಇಂಗ್ಲೀಷ್ ಎರಡೂ ಮಾಧ್ಯಮಗಳಲ್ಲಿ ಶಿಕ್ಷಣ ನೀಡಲಾಗುವುದು ಎಂದು ತಿಳಿಸಲಾಗಿದೆ. ಆದರೆ ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣ ನೀಡಲು ಸಮರ್ಥ ಶಿಕ್ಷಕರನ್ನು ನೇಮಿಸುವುದು ಸೂಕ್ತ. ಬೆಳೆಯುವ ಪೈರು ಮೊಳಕೆಯಲ್ಲೇ ಎಂಬಂತೆ, ಎಲ್.ಕೆ.ಜಿ ಹಂತದಿಂದಲೇ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕು. ಆಗ ಮಾತ್ರ ಅವರು ಮುಂದಿನ ಹಂತಗಳಲ್ಲಿ ಯಶಸ್ಸು ಹೊಂದಲು ಸಾಧ್ಯವಾಗಲಿದೆ. ಹಾಗಾಗಿ ದಯವಿಟ್ಟು ಸಮರ್ಥ ಶಿಕ್ಷಕರನ್ನು ಸರ್ಕಾರ ನೇಮಕಾತಿ ಮಾಡಬೇಕು ಎಂದು ಈ ಮೂಲಕ ಸರ್ಕಾರವನ್ನು ಕೋರುತ್ತೇನೆ.

**–ಗಿರೀಶ್, ಕೃಷ್ಣರಾಜ ನಗರ**

* * *

ಸೆಪ್ಟೆಂಬರ್ ಸಂಚಿಕೆಯ ವಾರ್ತಾ ಜನಪದದಲ್ಲಿ ಬಾಲ್ಯವಿವಾಹ ಕಾಯಿದೆ ಕುರಿತು ಪ್ರಕಟಿಸಲಾಗಿರುವ ಲೇಖನದಲ್ಲಿ ಕಳೆದ ಮೂರು ವರ್ಷಗಳಲ್ಲಿ ಬಾಲ್ಯವಿವಾಹ ನಡೆದಿರುವುದರಲ್ಲಿ ನಮ್ಮ ರಾಜ್ಯವು ಎರಡನೇ ಸ್ಥಾನದಲ್ಲಿದೆ ಎಂಬುದನ್ನು ತಿಳಿದು ಆಶ್ಚರ್ಯವಾಯಿತು.




ಗ್ರಾಮೀಣ ಭಾಗದಲ್ಲಿ ತಂದೆ–ತಾಯಂದಿರು ತಮ್ಮ ಜವಾಬ್ದಾರಿಯನ್ನು ಬೇಗ ಮುಗಿಸಿಕೊಳ್ಳಬೇಕು ಎಂದು ಹೆಣ್ಣುಮಕ್ಕಳನ್ನು ಅತ್ಯಂತ ಕಿರಿಯ ವಯಸ್ಸಿನಲ್ಲಿಯೇ ಮದುವೆ ಮಾಡಿಬಿಡುತ್ತಾರೆ.

ಹಾಗಾಗಿ ಗ್ರಾಮೀಣ ಭಾಗದ ಜನರಿಗೆ ಬಾಲ್ಯವಿವಾಹ ಮಾಡಿದರೆ ಏನೆಲ್ಲಾ ಶಿಕ್ಷೆ ನೀಡಲಾಗುವುದು ಹಾಗೂ ಬಾಲ್ಯವಿವಾಹದಿಂದ ಮಕ್ಕಳ ಮೇಲೆ ಆಗುವ ಪರಿಣಾಮಗಳ ಕುರಿತು ಅರಿವು ಮೂಡಿಸಬೇಕಿದೆ. ವಾರ್ತಾ ಜನಪದದಲ್ಲಿ ಬಾಲ್ಯವಿವಾಹದ ಕಾಯಿದೆ ಕುರಿತು ನೀಡಿರುವ ಮಾಹಿತಿಯು ಒಂದಿಷ್ಟು ಜನರ ಕಣ್ಣನ್ನು ತೆರೆಸಲಿ ಎಂದು ಹಾರೈಸುವೆ.

**–ಸಂಗೀತ ವಿಶ್ವನಾಥ್, ಬೆಂಗಳೂರು**

* * *

ಡಾ. ಅನಿಲ್‌ಮಾರ್ ಪಿ. ಗ್ರಾಮಪುರೋಹಿತ್ ಅವರು ಸೆಪ್ಟೆಂಬರ್ ವಾರ್ತಾ ಜನಪದದಲ್ಲಿ ಬರೆದಿರುವ 'ಹೈವೇ ಹಿಪ್ನೋಸಿಸ್‌ಗೆ ಸಮ್ಮೋಹಿತರಾಗದಿರಿ' ಲೇಖನ ಓದಿ ಆಶ್ಚರ್ಯ ಆಯಿತು. ಇಂತಹ ರೋಗವೊಂದಿದೆ ಎಂದು ನನಗೆ ಇಲ್ಲಿಯವರೆಗೆ ತಿಳಿದಿರಲಿಲ್ಲ. ಹೈವೇಯಲ್ಲಿ ಅತ್ಯಂತ ವೇಗವಾಗಿ ವಾಹನ ಚಲಾಯಿಸುವ ಬಹುಪಾಲು ಜನರು ಹೈವೇ ಹಿಪ್ನೋಸಿಸ್‌ಗೆ ಒಳಗಾಗಿರುತ್ತಾರೆ ಎಂದು ನನಗೆ ಈಗ ಅನಿಸುತ್ತಿದೆ. ನಮಗೆ ತಿಳಿದಿರದ ವಿಷಯವನ್ನು ತಿಳಿಸಿ ಕೊಟ್ಟ ಲೇಖಕರಿಗೆ ಮತ್ತು ಪತ್ರಿಕೆಯ ಬಳಗಕ್ಕೆ ಧನ್ಯವಾದಗಳು.

**–ಶಂಕರೇಗೌಡ ಎಂ.ಸಿ, ಮಂಡ್ಯ**

'ದಲ್ಲಾಳಿಗಳನ್ನು ಮಟ್ಟಹಾಕಿ ಅಧಿಕ ಲಾಭಗಳಿಸಿದ ಮಾವು ಬೆಳೆಗಾರ' ಲೇಖನ ಓದಿ ಅತ್ಯಂತ ಸಂತೋಷವಾಯಿತು. ನಾನು ಕೂಡ ಕೃಷಿಕನಾಗಿದ್ದು, ನಾವು ಬೆಳೆದ ಬೆಳೆಗಳ ಹೆಚ್ಚಿನ ಲಾಭವನ್ನು ದಲ್ಲಾಳಿಗಳೇ ತೆಗೆದುಕೊಳ್ಳುತ್ತಾರೆ. ವಿಧಿ ಇಲ್ಲದೆ ನಾವು ದಲ್ಲಾಳಿಗಳಿಗೆ ನಮ್ಮ ಬೆಳೆಗಳನ್ನು ಮಾರಿಬಿಡುತ್ತೇವೆ.

ಬಿರು ಬಿಸಿಲಿನ ನಾಡು ರಾಯಚೂರು ಜಿಲ್ಲೆಯಲ್ಲಿ ಮಾವು ಬೆಳೆದು, ಅದು ದಲ್ಲಾಳಿಗಳಿಗೆ ಅವಕಾಶ ನೀಡದೇ ತಾವೇ ಆನ್‌ಲೈನ್ ಮೂಲಕ ಮಾರ್ಕೆಟಿಂಗ್ ಕೂಡ ಮಾಡಿ ಆಂಜನೇಯ ಅವರು ಅಧಿಕ ಆದಾಯ ಗಳಿಸಿರುವುದು ನನಗೆ ಸ್ಫೂರ್ತಿ ಉಂಟುಮಾಡಿದೆ. ಇನ್ನು ಮುಂದೆ ನಾನು ಕೂಡ ಇವರಂತೆ ದಲ್ಲಾಳಿಗಳನ್ನು ದೂರ ಇಡಬೇಕು ಎಂದು ನಿರ್ಧರಿಸಿದ್ದೇನೆ. ಲೇಖನದಲ್ಲಿ ಅವರ ಫೋನ್ ನಂಬರ್ ನೀಡಿರುವುದರಿಂದ ಅವರೊಂದಿಗೆ ಮಾತನಾಡಿ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಸಾಧ್ಯವಾಯಿತು. ಇಂತಹ ಲೇಖನಗಳು ನಮ್ಮಂತಹ ರೈತರಿಗೆ ಅನುಕೂಲವಾಗಲಿದೆ.

**–ಲೋಕೇಶ, ಹಾಸನ**

* * *

ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರವು ಅಂಗನವಾಡಿಯಲ್ಲಿ ಎಲ್.ಕೆ.ಜಿ ಮತ್ತು ಯು.ಕೆ.ಜಿಯನ್ನು ಆರಂಭಿಸಿರುವುದು ಉತ್ತಮ ಕೆಲಸವೆಂದೇ ಹೇಳಬಹುದು. ಗ್ರಾಮೀಣ ಪ್ರದೇಶಗಳಲ್ಲಿ ಅಷ್ಟು ಚಿಕ್ಕ ಮಕ್ಕಳನ್ನು ದೂರದ ಕಾನ್ವೆಂಟ್ ಶಾಲೆಗಳಿಗೆ ಕಳಿಸುವುದು ಕಷ್ಟವಾಗುತಿತ್ತು. ಇನ್ನು ಮುಂದೆ ಅಂಗನವಾಡಿಯಲ್ಲಿಯೇ ಮಕ್ಕಳಿಗೆ ಆಂಗ್ಲ ಮಾಧ್ಯದಲ್ಲಿಯೇ ಎಲ್.ಕೆ.ಜಿ. ಮತ್ತು ಯು.ಕೆ.ಜಿ ವಿದ್ಯಾಭ್ಯಾಸ ಸಿಗುವಂತ್ತಾಗಿದೆ. ಇದು ನಮ್ಮ ಸರ್ಕಾರಕ್ಕೆ ಗ್ರಾಮೀಣ ಮಕ್ಕಳ ಶಿಕ್ಷಣದ ಮೇಲಿರುವ ಕಾಳಜಿಗೆ ನಿದರ್ಶನವಾಗಿದೆ.

**–ಲಕ್ಷ್ಮೀನರಸಿಂಹ, ಹೆಚ್.ಡಿ.ಕೋಟೆ**

ಖಾಸಗಿ ಸಾರಿಗೆ ವ್ಯವಸ್ಥೆಯಲ್ಲಿ ಕೆಲಸ ಮಾಡುವ ಚಾಲಕರು, ನಿರ್ವಾಹಕರು ಹಾಗೂ ಕ್ಲೀನರ್‌ಗಳಿಗೆ ಅಪಘಾತ ಪರಿಹಾರ ನೀಡುವ ಯೋಜನೆಯನ್ನು ರಾಜ್ಯ ಸರ್ಕಾರವು ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿವತಿಯಿಂದ ಜಾರಿಗೆ ತಂದಿರುವುದು ನಿಜಕ್ಕೂ ಅಭಿನಂದನಾರ್ಹವಾದುದು. ನಮ್ಮ ತಂದೆ ಕೂಡ ಖಾಸಗಿ ಚಾಲಕರಾಗಿದ್ದು, ಈ ಲೇಖನದಿಂದ ನನ್ನ ತಂದೆಯನ್ನು ಈ ಯೋಜನೆಗೆ ಸೇರಿಸುವುದು ಹೇಗೆ ಎಂದು ತಿಳಿಯಿತು.

**–ಪೂಜಾ ಎಂ.ಎಸ್, ಮೈಸೂರು**

'ವಾರ್ತಾ ಜನಪದ' ಮಾಸಿಕ ಈಗ www.kanaja.inನಲ್ಲಿ ಲಭ್ಯ

ವಾರ್ತಾ ಜನಪದ ಮಾಸಿಕಕ್ಕೆ ವಾರ್ಷಿಕ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಪಾವತಿಸಲು ಕಡ್ಡಾಯವಾಗಿ ಸೇವಾಸಿಂಧುವಿನ https://sevasindhu.karnataka.gov.in ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.



# ಸಂಪಾದಕೀಯ...

ಪ್ರಿಯ ಓದುಗ ಮಿತ್ರರೇ,

ಸೆಪ್ಟೆಂಬರ್ 14 ರಂದು ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವದ ಆಚರಣೆಯ ಅಂಗವಾಗಿ ಬೀದರ್ ಬಸವಕಲ್ಯಾಣದಿಂದ ಚಾಮರಾಜನಗರದವರೆಗೆ ಎರಡೂವರೆ ಸಾವಿರ ಕಿ.ಮೀ. ಉದ್ದದ ಮಾನವ ಸರಪಳಿಯನ್ನು ನಿರ್ಮಿಸಲಾಯಿತು. ಪ್ರಜಾಪ್ರಭುತ್ವದ ಮಹತ್ವವನ್ನು ದೇಶದ ಅಖಂಡತೆಯನ್ನು ಎತ್ತಿ ಹಿಡಿಯುವ ಪ್ರಯತ್ನ ಜನರ ಸಕ್ರಿಯ ಭಾಗವಹಿಸುವಿಕೆಯಿಂದ ಯಶಸ್ವಿಯಾಯಿತು. ಪ್ರತಿ ಕಿ.ಮೀ. ವ್ಯಾಪ್ತಿಯಲ್ಲಿ ಒಂದು ಸಾವಿರ ಜನರನ್ನು ಒಳಗೊಂಡ, 25 ಲಕ್ಷಕ್ಕೂ ಅಧಿಕ ಮಂದಿ ಏಕಕಾಲದಲ್ಲಿ ಭಾಗವಹಿಸುವ ಮೂಲಕ ಈ ಮಾನವ ಸರಪಳಿ ವಿಶ್ವ ದಾಖಲೆಯನ್ನು ಮಾಡಿತು.

ಸರ್ಕಾರವು ಸೆಪ್ಟೆಂಬರ್ 17 ರಂದು ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆ–2024 ಹಾಗೂ ಕಲ್ಯಾಣ ಕರ್ನಾಟಕ 371 ಜೆ ಜಾರಿ ದಶಮಾನೋತ್ಸವನ್ನು ಸಂಭ್ರಮದಿಂದ ಕಲಬುರ್ಗಿಯಲ್ಲಿ ಆಚರಿಸಿತಲ್ಲದೆ ಕಲ್ಯಾಣ ಕರ್ನಾಟಕ ಭಾಗದ ಜ್ವಲಂತ  ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಸಲುವಾಗಿ ಮುಖ್ಯಮಂತ್ರಿಗಳು ಅದೇ ದಿನ ಕಲಬುರ್ಗಿಯಲ್ಲಿ ಸಚಿವ ಸಂಪುಟ ಸಭೆಯನ್ನು ಕೂಡ ನಡೆಸಿದರು.

ಈ ಹಿಂದೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಕಲಬುರ್ಗಿಯಲ್ಲಿ ಸಚಿವ ಸಂಪುಟ ಸಭೆಯನ್ನು ನಡೆಸಲಾಗಿತ್ತು. ಇದೀಗ ದಶಮಾನದ ನಂತರ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿಯೇ ಸಂಪುಟ ಸಭೆಯು ಜರುಗಿತು. ಈ ಸಚಿವ ಸಂಪುಟದಲ್ಲಿ ಚರ್ಚೆಗೆ ಬಂದ ಒಟ್ಟು 56 ವಿಷಯಗಳಲ್ಲಿ 46 ವಿಷಯಗಳು ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೇ ಸಂಬಂಧಿಸಲ್ಪಟ್ಟಿದ್ದು, ಅನುಮೋದನೆ ನೀಡಲಾದ 12,692 ಕೋಟಿ ರೂ. ಗಳ ಪೈಕಿ 11,770 ಕೋಟಿ ರೂ.ಗಳು ಕಲ್ಯಾಣ ಕರ್ನಾಟಕ ಪ್ರದೇಶಕ್ಕೇ ಸೀಮಿತವಾಗಿತ್ತು ಎಂಬುದು ಗಮನಾರ್ಹ. ಇದು ಸರ್ಕಾರಕ್ಕೆ ಕಲ್ಯಾಣ ಕರ್ನಾಟಕ ಭಾಗದ ಮೇಲೆ ಇರುವ ಕಾಳಜಿಯನ್ನು ತೋರಿಸುತ್ತದೆ.

ಕಲ್ಯಾಣ ಕರ್ನಾಟಕ ಭಾಗದ ಜನರ ಆರೋಗ್ಯವನ್ನು ಕಾಪಾಡುವ ನಿಟ್ಟಿನಲ್ಲಿ 45 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು, 31 ಸಮುದಾಯ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲು ಹಾಗೂ 9 ತಾಲೂಕು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು ಮತ್ತು 2 ತಾಲೂಕು ಆಸ್ಪತ್ರೆಗಳನ್ನು ಜಿಲ್ಲಾ ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸುವ ಯೋಜನೆಗೆ 890 ಕೋಟಿ ರೂಗಳನ್ನು ಒದಗಿಸಲು ಸಚಿವ ಸಂಪುಟದಲ್ಲಿ ಒಪ್ಪಿಗೆ ನೀಡಲಾಗಿದೆ. ಅಲ್ಲದೆ ಸಚಿವ ಸಂಪುಟವು ಕಲ್ಯಾಣ ಕರ್ನಾಟಕಕ್ಕೆ ಪ್ರತ್ಯೇಕ ಸಚಿವಾಲಯ ರಚಿಸಲು ತೀರ್ಮಾನ ಮಾಡಿರುವುದರಿಂದ ಈ ಭಾಗದ ಅಭಿವೃದ್ಧಿಯ ವೇಗ ಹೆಚ್ಚಲಿದೆ.

ಬೀದರ್ ಮತ್ತು ರಾಯಚೂರು ಪಟ್ಟಣಗಳನ್ನು ನಗರಪಾಲಿಕೆಯಾಗಿ ಮಾಡುವ ಹಾಗೂ ಬೀದರ್ ಮತ್ತು ಕಲಬುರಗಿಯ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರು ಒದಗಿಸುವ ಯೋಜನೆಗಾಗಿ 7200 ಕೋಟಿ ರೂಗಳನ್ನು ಒದಗಿಸಲು ಅನುಮತಿ ನೀಡಿರುವುದರಿಂದ ಆ ಭಾಗದ ಜನರು ಸಂತಸಗೊಂಡಿದ್ದಾರೆ.

ಅಕ್ಟೋಬರ್ ಸಂಚಿಕೆಯ ವಾರ್ತಾ ಜನಪದದಲ್ಲಿ ಈ ಮೇಲ್ಕಂಡ ಎಲ್ಲಾ ವಿಷಯಗಳ ಜೊತೆಗೆ ಮಹಾತ್ಮ ಗಾಂಧೀಜಿ ಜಯಂತಿ ಅಂಗವಾಗಿ ಅವರ ಕುರಿತ ಲೇಖನಗಳು ಸೇರಿದಂತೆ ಮತ್ತಿತರ ವಿಷಯಗಳನ್ನು ಪ್ರಕಟಿಸಲಾಗಿದೆ. ಈ ಬಾರಿಯ ದಸರಾ ಉತ್ಸವವನ್ನು ಸರ್ಕಾರವು ಅದ್ದೂರಿಯಿಂದ ಆಚರಿಸಲು ತೀರ್ಮಾನಿಸಿದ್ದು, ದಸರಾ ಉದ್ಘಾಟನೆಗೆ ಮುಖ್ಯಮಂತ್ರಿ ಅವರು ಖ್ಯಾತ ಸಾಹಿತಿ ಹಂಪ ನಾಗರಾಜಯ್ಯ ಅವರನ್ನು ಆಯ್ಕೆ ಮಾಡಿರುವುಕ್ಕೆ ರಾಜ್ಯದ ಜನರು ಉತ್ತಮ ಆಯ್ಕೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಸಮಾಜ ಘಾತುಕರು ಏನೂ ಅರಿಯದ ಮಕ್ಕಳನ್ನು ಮಾದಕ ವ್ಯಸನಿಗರನ್ನಾಗಿ ಮಾಡುತ್ತಿದ್ದಾರೆ. ನಮ್ಮ ಸರ್ಕಾರ ಮಾದಕ ವ್ಯಸನದ ವಿರುದ್ಧ ಸಮರ ಸಾರಿದೆ. ನಮ್ಮ ಮಕ್ಕಳನ್ನು ಇದರಿಂದ ರಕ್ಷಿಸಲು ಮತ್ತು  ಮಾದಕವಸ್ತು ಮುಕ್ತ ಸಮಾಜವನ್ನು ನಿರ್ಮಾಣ ಮಾಡಲು ಸಾರ್ವಜನಿಕರು ಸರ್ಕಾರದೊಂದಿಗೆ ಕೈಜೋಡಿಸಬೇಕು. ಮಾದಕ ವಸ್ತು ಮಾರಾಟ ಮತ್ತು ಸೇವನೆ ಕಂಡುಬಂದರೆ ಸಮೀಪದ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು. ಮಾಹಿತಿ ನೀಡಿದವರ ಹೆಸರನ್ನು ಸರ್ಕಾರ ಗೌಪ್ಯವಾಗಿಡಲಿದೆ.

ಓದುಗರೆಲ್ಲರಿಗೂ ಮಹಾತ್ಮ ಗಾಂಧಿ ಜಯಂತಿ ಹಾಗೂ ದಸರಾ ಹಬ್ಬದ ಹಾರ್ದಿಕ ಶುಭಾಶಯಗಳು.

**ಹೇಮಂತ್ ಎಂ ನಿಂಬಾಳ್ಕರ್, ಐಪಿಎಸ್**
**ಪ್ರಧಾನ ಸಂಪಾದಕರು**

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.    email : feedbackjanapada@gmail.com



# ಸಂಭ್ರಮದಿಂದ ಜರುಗಿದ ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ

ರವಿ ಮಿರಸ್ಕರ್

**ಉತ್ಸವದಲ್ಲಿ ಸ್ಥಳೀಯ ಕಲೆ-ಸಂಸ್ಕೃತಿ ಅನಾವರಣಗೊಳ್ಳುವ ಜೊತೆಗೆ ಪ್ರದೇಶದ ಅಭ್ಯುದಯಕ್ಕೆ ಸಾವಿರಾರು ಕೋಟಿ ರೂ. ಕಾಮಗಾರಿಗಳಿಗೆ ಹಸಿರು ನಿಶಾನೆ ದೊರಕಿದೆ.**

ಕಲ್ಯಾಣ ಕರ್ನಾಟಕ ಕೇಂದ್ರಸ್ಥಾನ ಕಲಬುರಗಿಯಲ್ಲಿ ಕಳೆದ ಸೆಪ್ಟೆಂಬರ್ 17 ರಂದು ಜರುಗಿದ 77ನೇ ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ-2024 ಕಾರ್ಯಕ್ರಮ ಅತ್ಯಂತ ಸಡಗರ ಸಂಭ್ರಮದಿಂದ ಜರುಗಿತಲ್ಲದೆ ಸಚಿವ ಸಂಪುಟದ ಬಹುತೇಕ ಸಚಿವರು ಐತಿಹಾಸಿಕ ಕಲ್ಯಾಣ ಕರ್ನಾಟಕ ಉತ್ಸವದಲ್ಲಿ ಇದೇ ಪ್ರಪ್ರಥಮ ಬಾರಿಗೆ ಭಾಗವಹಿಸುವ ಮೂಲಕ ಹಿಂದುಳಿದ ಪ್ರದೇಶದ ಅಭಿವೃದ್ಧಿಗೆ ತಮ್ಮ ಸರ್ಕಾರ ಸದಾ ಬದ್ಧವಾಗಿದೆ ಎಂದು ನಿರೂಪಿಸಿದರು.

ಒಂದೆಡೆ ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆಯಾದರೆ, ಇನ್ನೊಂದೆಡೆ 371 ಜೆ ಕಾಯ್ದೆಯ ದಶಮಾನೋತ್ಸವದ ಈ ಸಂದರ್ಭದಲ್ಲಿ ಪ್ರದೇಶದ ಸಾವಿರಾರು ಕೋಟಿ ರೂ. ಗಳ ಅಭಿವೃದ್ಧಿ ಕಾರ್ಯಗಳ ಲೋಕಾರ್ಪಣೆಗೂ ಕಾರ್ಯಕ್ರಮ ಸಾಕ್ಷಿಯಾಯಿತು.

ಕಲಬುರಗಿ ನಗರದ ಪೊಲೀಸ್ ಪರೇಡ್ ಮೈದಾನದಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಷ್ಟ್ರ ಧ್ವಜಾರೋಹಣ ಮಾಡಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದರು. ಎ.ಸಿ.ಪಿ. ಬಿಂದು ರಾಣಿ ನೇತೃತ್ವದಲ್ಲಿ 24 ತುಕಡಿಗಳು ಆಕರ್ಷಕ ಪಥಸಂಚಲನ ನಡೆಸಿ ಮುಖ್ಯಮಂತ್ರಿಗಳಿಗೆ ಗೌರವ ವಂದನೆ ಸಲ್ಲಿಸಿದರು. ಇದೇ ಸಂದರ್ಭದಲ್ಲಿ ಕಲಾವಿದರು, ಶಾಲಾ ಮಕ್ಕಳಿಂದ ಪ್ರದೇಶದ ಕಲೆ, ಸಂಸ್ಕೃತಿ ಸಾರುವ ಆಕರ್ಷಕ ನೃತ್ಯ ಸಭಿಕರ ಮನಸೂರೆಗೊಳಿಸಿತು. ಪಂಚ ಗ್ಯಾರಂಟಿ ಯೋಜನೆಗಳು ಸೇರಿದಂತೆ ವಿವಿಧ ಇಲಾಖೆಗಳ ಪ್ರಗತಿ ಬಿಂಬಿಸುವ ಸ್ತಬ್ಧಚಿತ್ರಗಳು ಪ್ರದರ್ಶನಗೊಂಡವು. ಸರ್ಕಾರಿ ಸೌಲಭ್ಯ ಪಡೆದ ಫಲಾನುಭವಿಗಳ ಮುಖದಲ್ಲಿ ಮಂದಹಾಸ ಮೂಡಿತ್ತು.

ಇದಕ್ಕು ಮುನ್ನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಗರದ ಎಸ್.ವಿ.ಪಿ. ವೃತ್ತದಲ್ಲಿರುವ ಹೈದ್ರಾಬಾದ್ ಕರ್ನಾಟಕ ವಿಮೋಚನೆಯ ಹರಿಕಾರ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಪ್ರತಿಮೆಗೆ ಸಂಪುಟದ

ಸಹದ್ಯೋಗಿಗಳೊಂದಿಗೆ ಮಾಲಾರ್ಪಣೆ ಮಾಡಿ ಗೌರವ ನಮನ ಅರ್ಪಿಸಿದರು.

ರಾಜ್ಯದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಸಚಿವರಾದ ಡಾ. ಜಿ.ಪರಮೇಶ್ವರ್, ಹೆಚ್.ಕೆ.ಪಾಟೀಲ, ಡಾ. ಹೆಚ್.ಸಿ.ಮಹಾದೇವಪ್ಪ, ಕೆ.ಎಚ್.ಮುನಿಯಪ್ಪ, ರಾಮಲಿಂಗಾರೆಡ್ಡಿ, ಕೆ.ಜೆ.ಜಾರ್ಜ್, ಡಿ.ಸುಧಾಕರ್, ಪ್ರಿಯಾಂಕ್ ಖರ್ಗೆ, ಭೈರತಿ ಸುರೇಶ, ಮಂಕಾಳ ಎಸ್. ವೈದ್ಯ, ಮುಖ್ಯಮಂತ್ರಿಗಳ ಕಾರ್ಯಕ್ರಮ ಮತ್ತು ನೀತಿ ಸಲಹೆಗಾರರಾದ ಬಿ.ಆರ್.ಪಾಟೀಲ, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್, ಕೆ.ಕೆ.ಆರ್.ಡಿ.ಬಿ. ಅಧ್ಯಕ್ಷರಾದ ಡಾ.ಅಜಯ್ ಸಿಂಗ್, ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ ಅಧ್ಯಕ್ಷೆ ಹಾಗೂ ಶಾಸಕರಾದ ಕನೀಜ್ ಫಾತಿಮಾ, ಸಂಸದರಾದ ರಾಧಾಕೃಷ್ಣ ದೊಡ್ಡಮನಿ, ಶಾಸಕರಾದ ಅಲ್ಲಮಪ್ರಭು ಪಾಟೀಲ್, ಎಂ.ವೈ.ಪಾಟೀಲ, ಬಸವರಾಜ ಮತ್ತಿಮೂಡ್, ಅವಿನಾಶ ಜಾಧವ, ವಿಧಾನ ಪರಿಷತ್ ಶಾಸಕರಾದ ಶಶೀಲ್ ನಮೋಶಿ, ಬಿ.ಜಿ.ಪಾಟೀಲ, ತಿಪ್ಪಣ್ಣಪ್ಪ ಕಮಕನೂರು, ಜಗದೇವ ಗುತ್ತೇದಾರ, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ದೇವೇಂದ್ರಪ್ಪ ಮರತೂರು, ಕಾಡಾ ಅಧ್ಯಕ್ಷರಾದ ಡಾ. ಅಬ್ದುಲ್ ರಶೀದ್, ಕಲಬುರಗಿ ಮಹಾನಗರ ಪಾಲಿಕೆ ಮೇಯರ್ ಯಲ್ಲಪ್ಪ ನಾಯ್ಕೊಡಿ, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಜಹರ್ ಆಲಂ ಖಾನ್, ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಡಾ. ಶಾಲಿನಿ ರಜನೀಶ್, ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿಗಳಾದ ಎಲ್.ಕೆ.ಅತೀಕ್, ಕೆ.ಪಿ.ಟಿ.ಸಿ.ಎಲ್ ವ್ಯವಸ್ಥಾಪಕ ನಿರ್ದೇಶಕ ಮತ್ತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಪಂಕಜ್ ಕುಮಾರ ಪಾಂಡೆ, ಪ್ರಾದೇಶಿಕ ಆಯುಕ್ತರಾದ ಕೃಷ್ಣ ಭಾಜಪೇಯಿ, ಕೆ.ಕೆ.ಅರ್.ಡಿ.ಬಿ. ಕಾರ್ಯದರ್ಶಿಗಳಾದ ಎಂ.ಸುಂದರೇಶ ಬಾಬು,



ಜಿಲ್ಲಾಧಿಕಾರಿಗಳಾದ ಬಿ. ಫೌಜಿಯಾ ತರನ್ನುಮ್, ಕಲಬುರಗಿ ನಗರ ಪೊಲೀಸ್ ಆಯುಕ್ತರಾದ ಡಾ.ಎಸ್.ಡಿ.ಶರಣಪ್ಪ, ಎಸ್.ಪಿ. ಅಡ್ಡೂರು ಶ್ರೀನಿವಾಸಲು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಭಂವರ್ ಸಿಂಗ್ ಮೀನಾ ಸೇರಿದಂತೆ ವಿವಿಧ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳು, ಹಿರಿಯ ಅಧಿಕಾರಿಗಳು, ಇತರೆ ಚುನಾಯಿತ ಜನಪ್ರತಿನಿಧಿಗಳು, ಸಾರ್ವಜನಿಕರು, ಶಾಲಾ ಮಕ್ಕಳು ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾದರು.

ಏನಿದು ಕಲ್ಯಾಣ ಕನಾಟಕ ಉತ್ಸವ?... 1947ರ ಆಗಸ್ಟ್ 15 ರಂದು ಇಡೀ ಭಾರತಕ್ಕೆ ಸ್ವಾತಂತ್ರ್ಯ ಬಂದರೂ ಹೈದರಾಬಾದ್ ನಿಜಾಮರ ಆಳ್ವಿಕೆಯಲ್ಲಿದ್ದ ಬೀದರ್, ಕಲಬುರಗಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಸ್ವಾತಂತ್ರ್ಯ ಎಂಬುದು ಮರೀಚಿಕೆಯಾಗಿತ್ತು. ಕಾರಣ ಅಂದು ಭಾರತ ಸ್ವಾತಂತ್ರ್ಯ ಪಡೆದಾಗ ಭಾರತದಲ್ಲಿ ಎರಡು ವಿಧದ ರಾಜ್ಯಗಳು ಅಸ್ತಿತ್ವದಲ್ಲಿದ್ದವು. ಒಂದು ಬ್ರಿಟಿಷ್ ಪ್ರಾಂತ್ಯಗಳು, ಇನ್ನೊಂದು ದೇಶೀಯ ಸಂಸ್ಥಾನಗಳು. ದೇಶದಲ್ಲಿನ 560ಕ್ಕೂ ಹೆಚ್ಚು ಸಂಸ್ಥಾನಗಳ ಮಹಾರಾಜರು ಭಾರತದ ಒಕ್ಕೂಟಕ್ಕೆ ಸೇರಿದರು.

ಆದರೆ ಹೈದ್ರಾಬಾದ್ ಪ್ರಾಂತ್ಯದ ನಿಜಾಮ್ ಮೀರ್ ಉಸ್ಮಾನ್ ಅಲಿ ಖಾನ್ ಭಾರತದ ಒಕ್ಕೂಟದಲ್ಲಿ ಸೇರಲು ನಿರಾಕರಿಸಿ ಇಂದಿನ ತೆಲಂಗಾಣ ರಾಜ್ಯದ 8 ಜಿಲ್ಲೆ, ಮಹಾರಾಷ್ಟ್ರದ ಮರಾಠಾವಾಡ ಪ್ರದೇಶದ 5 ಜಿಲ್ಲೆ ಹಾಗೂ ರಾಜ್ಯದ ಈಶಾನ್ಯ ತುದಿಯಲ್ಲಿದ್ದ 3 ಜಿಲ್ಲೆಗಳನ್ನೊಳಗೊಂಡ ಹೈದರಾಬಾದ್ ಸಂಸ್ಥಾನ ಪ್ರದೇಶವನ್ನು ಸ್ಥಳೀಯ ಜನರ ಆಶಯಕ್ಕೆ ವಿರುದ್ಧವಾಗಿ ಸ್ವತಂತ್ರ ಪ್ರಾಂತ್ಯವಾಗಿ ಘೋಷಿಸಿಕೊಂಡಿದ್ದನು.

ನಿಜಾಮರ ಆಳ್ವಿಕೆಯಲ್ಲಿನ ರಜಾಕರ ದುರಾಡಳಿತದಿಂದಾಗಿ ರೋಸಿ ಹೋಗಿದ್ದ ಬೀದರ್, ಕಲಬುರಗಿ ಮತ್ತು ರಾಯಚೂರು ಜಿಲ್ಲೆಗಳ ಜನರು ಸ್ವಾಮಿ ರಮಾನಂದ ತೀರ್ಥರ ನೇತೃತ್ವದಲ್ಲಿ ವಿಮೋಚನೆ ಎಂಬ ಮತ್ತೊಂದು ಸ್ವಾತಂತ್ರ್ಯ ಹೋರಾಟಕ್ಕೆ ಅಣಿಯಾದರು. ರಮಾನಂದ ತೀರ್ಥರೊಂದಿಗೆ ಅಪ್ಪಾರಾವ್ ಪಾಟೀಲ್, ಚಂದ್ರಶೇಖರ್ ಪಾಟೀಲ್ ಸೇರಿಕೊಂಡು ಚಳವಳಿಯನ್ನು ಇನ್ನಷ್ಟು ತೀವ್ರಗೊಳಿಸಿದರು. ಹೈದರಾಬಾದ್ ಕರ್ನಾಟಕ ವಿಮೋಚನೆ ಹೊಂದಬೇಕಾದರೆ ಒಗ್ಗಟ್ಟಿನ ಹೋರಾಟ ಅಗತ್ಯ ಎಂದು ಜನರಿಗೆ ಮನವರಿಕೆ ಮಾಡಿಕೊಡತೊಡಗಿದರು.

ಮುಂದೆ ಸರ್ವಶ್ರೀ ಸರದಾರ ಶರಣಗೌಡ ಇನಾಂದಾರ, ರಾಜಾ ವೆಂಕಟಪ್ಪ ನಾಯಕ, ದತ್ತಾತ್ರೇಯ ಅವರಾದಿ, ಅಳವಂಡಿ ಶಿವಮೂರ್ತಿಸ್ವಾಮಿ, ಮಟಮಾರಿ ನಾಗಪ್ಪಾ, ನಾರಾಯಣರಾವ ಕಾನಿಹಾಳ, ರಾಮಚಂದ್ರ ವೀರಪ್ಪ, ಎ.ವಿ. ಪಾಟೀಲ್,



ಆರ್.ವಿ. ಬಿಡ್ಡಪ್ಪ, ಹಕ್ಕಿಕತರಾವ್ ಚಿಟಗುಪ್ಪಕರ, ಚಂದ್ರಶೇಖರ್ ಪಾಟೀಲ್, ರಾಮಾಚಾರ, ಡಾ.ಚರ್ಚಿಹಾಳ ಮಠ, ಅಮರಸಿಂಹ ರಾಠೋಡ ಸೇರಿದಂತೆ ಇನ್ನೂ ಅನೇಕ ಹೋರಾಟಗಾರರು ನಿಜಾಮನ ವಿರುದ್ಧ ಸೆಡ್ಡು ಹೊಡೆದು ನಿಂತರು.

ತನ್ನ ವಿರುದ್ಧ ಹೋರಾಟ ನಾಲ್ಕು ದಿಕ್ಕಿನಿಂದ ತೀವ್ರಗೊಳ್ಳುತ್ತಿದ್ದಂತೆ ನಿಜಾಮ, ಹೋರಾಟಗಾರರನ್ನು ನಿರ್ದಾಕ್ಷಿಣ್ಯವಾಗಿ ದಮನ ಮಾಡುವಂತೆ ತನ್ನ ಸೈನಿಕರಿಗೆ ಆದೇಶ ನೀಡಿದ. ಆದರೂ ಹೋರಾಟಗಾರರು ರಜಾಕರ ದೌರ್ಜನ್ಯವನ್ನು ಎದುರಿಸಿದರು. ಈ ತಿಕ್ಕಾಟದಲ್ಲಿ ಅಸಂಖ್ಯಾತ ಹೋರಾಟಗಾರರು ಹುತಾತ್ಮರಾದರು.

ರಜಾಕರ ದೌರ್ಜನ್ಯದ ಸುದ್ದಿ ತಿಳಿದ ಅಂದಿನ ಪ್ರಧಾನಿ ಜವಾಹರಲಾಲ್ ನೆಹರು ಹಾಗೂ ಗೃಹ ಸಚಿವರಾಗಿದ್ದ ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಭಾಯಿ ಪಟೇಲ್ ಸಮಾಲೋಚನೆ ನಡೆಸಿ, ನಿಜಾಮನ ವಿರುದ್ಧ ಪೊಲೀಸ್ ಕಾರ್ಯಾಚರಣೆಗೆ ನಿರ್ಧಾರ ಮಾಡುವ ಮೂಲಕ ಅಮಾಯಕ ಜನರ ಜೀವ ರಕ್ಷಣೆಗೆ ಮುಂದಾದರು. ಪರಿಣಾಮ ಸೆಪ್ಟೆಂಬರ್ 13, 1948ರಂದು ಮಹಾರಾಷ್ಟ್ರದ ಸೋಲಾಪುರ ಸೇರಿದಂತೆ ಒಟ್ಟು 5 ಕಡೆಯಿಂದ ಮೇಜರ್ ಜನರಲ್ ಜೆ.ಎನ್.ಚೌಧರಿ ಅವರ ನೇತೃತ್ವದಲ್ಲಿ ನಿಜಾಮನ ವಿರುದ್ಧ "ಆಪರೇಷನ್ ಪೋಲೋ" ಹೆಸರಿನಲ್ಲಿ ಪೊಲೀಸ್ ಕಾರ್ಯಾಚರಣೆ ನಡೆಯಿತು. ಮೊದಮೊದಲು ಪ್ರತಿರೋಧ ತೋರಿದ್ದ ನಿಜಾಮ ರಜಾಕರ ಪಡೆ ಮೂರು ದಿನಗಳ ನಂತರ ಸೋತು ಶರಣಾಯಿತು.




ಕೊನೆಗೆ ಸೆಪ್ಟೆಂಬರ್ 17, 1948 ರಂದು ನಿಜಾಮ್ ಮೀರ್ ಉಸ್ಮಾನ್ ಅಲಿ ಖಾನ್ ಶರಣಾಗಿ ಹೈದರಾಬಾದ್ ಪ್ರಾಂತ್ಯವನ್ನು ಭಾರತದ ಒಕ್ಕೂಟದಲ್ಲಿ ಸೇರಿಸುವ ಒಪ್ಪಂದಕ್ಕೆ ಸಹಿ ಹಾಕಿದನು. ಅಂದಿಗೆ 235 ವರ್ಷಗಳ ನಿಜಾಮರ ಕ್ರೌರ್ಯಯುತ ದುರಾಡಳಿತ ಕೊನೆಗೊಂಡಿತು. ಹೀಗಾಗಿ ಸೆಪ್ಟೆಂಬರ್ 17ರ ದಿನ ಈ ಪ್ರದೇಶದಲ್ಲಿ ಸ್ವಾತಂತ್ರ್ಯ ದಿನಾಚರಣೆಯಷ್ಟೇ ಮಹತ್ವ ಪಡೆದುಕೊಂಡಿದೆ.

**ಪ್ರದೇಶದ ಕೊಡುಗೆ ಸ್ಮರಿಸಿದ ಮುಖ್ಯಮಂತ್ರಿಗಳು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಧ್ವಜಾರೋಹಣ ನಂತರ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡುತ್ತಾ, ಕಲ್ಯಾಣ ಚಾಲುಕ್ಯರು, ಬಹಮನಿ ಸುಲ್ತಾನರು, ರಾಷ್ಟ್ರಕೂಟರ ಆಳ್ವಿಕೆಯ ಭವ್ಯ ಪರಂಪರೆ ಹೊಂದಿದ್ದ ಈ ಪ್ರದೇಶ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ ಮೊದಲಾದ ಕ್ಷೇತ್ರಗಳಿಗೆ ಗಮನಾರ್ಹ ಕೊಡುಗೆ ನೀಡಿದೆ. ಕನ್ನಡದ ಮೊಟ್ಟ ಮೊದಲ ಉಪಲಬ್ಧ ಗ್ರಂಥ "ಕವಿರಾಜ ಮಾರ್ಗ" ನೀಡಿದ ನೃಪತುಂಗನ ನಾಡು ಇದಾಗಿದೆ. ವಿಶ್ವವೇ ನಿಬ್ಬೆರಗಾಗುವಂತಹ ಸಾಮಾಜಿಕ ಕ್ರಾಂತಿಗೆ ಮತ್ತು ಸಂಸದೀಯ ಪ್ರಜಾಪ್ರಭುತ್ವದ ಮಾದರಿ ಆಡಳಿತಕ್ಕೆ ಭದ್ರ ಬುನಾದಿ ಹಾಕಿದ ಪವಿತ್ರ ಭೂಮಿಯಾಗಿದೆ. ಬಸವ ತತ್ವದಲ್ಲಿ ನಂಬಿಕೆ ಇಟ್ಟು ಮುನ್ನಡೆಯುತ್ತಿರುವ ನಮ್ಮ ಸರ್ಕಾರ "ವಿಶ್ವಗುರು ಬಸವಣ್ಣ – ಸಾಂಸ್ಕೃತಿಕ ನಾಯಕರು" ಎಂದು ಘೋಷಿಸಿದೆ ಎಂದರು.

ದೇಶದ ವಿವಿಧ ಪ್ರಾಂತ್ಯಗಳು ಜಾತಿ–ಲಿಂಗ ಅಸಮಾನತೆ, ಊಳಿಗಮಾನ್ಯತೆ ಮುಂತಾದ ಸಮಸ್ಯೆಗಳಲ್ಲಿ ಮುಳುಗಿದ್ದಾಗ ಕಲ್ಯಾಣ ಕರ್ನಾಟಕವು ದೀಪ ಹಚ್ಚಿ ದಾರಿ ತೋರುವ ಕೈಮರದಂತೆ ಕೆಲಸ ಮಾಡಿದೆ. ಒಂದು ಕಾಲಕ್ಕೆ ಬೌದ್ಧ ಧರ್ಮವನ್ನು ಪೋಷಿಸಿದ್ದ ಈ ನೆಲ 12ನೇ ಶತಮಾನದ ಹೊತ್ತಿಗೆ ಇಡೀ ಜಗತ್ತಿನಲ್ಲಿಯ ಅಭೂತ ಪೂರ್ವವಾದ ಪ್ರಜಾಪ್ರಭುತ್ವದ ಆಶಯಗಳನ್ನು ಹುಟ್ಟು ಹಾಕಿತು. ಈ ಭಾಗವು ಹಲವು ಧರ್ಮಗಳ ನೆಲೆವೀಡಾಗಿದೆ. ಎಲ್ಲ ಧರ್ಮಗಳು ಸಾಮರಸ್ಯದಿಂದ ಒಟ್ಟುಗೂಡಿ ಬದುಕುವ ಮೂಲಕ ಇಡೀ ದೇಶಕ್ಕೆ ನಾವು ಮಾದರಿ ಎಂದು ಕಲ್ಯಾಣ ಕರ್ನಾಟಕದ ಜನ ಸಾರಿ ಹೇಳುತ್ತಿದ್ದಾರೆ ಎಂದು ನಾಡಿಗೆ ಪ್ರದೇಶದ ಕೊಡುಗೆಯನ್ನು ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಸ್ಮರಿಸಿದರು.

ಕಲ್ಯಾಣ ಕರ್ನಾಟಕವು 4 ಮಹತ್ವದ ಹೋರಾಟಗಳನ್ನು ಮಾಡಿದೆ. ಭಾರತದ ಸ್ವಾತಂತ್ರ್ಯ ಹೋರಾಟ, ಹೈದರಾಬಾದ್ ಕರ್ನಾಟಕ ವಿಮೋಚನಾ ಹೋರಾಟ,



ಕನ್ನಡ ಭಾಷಿಕರು ಒಗ್ಗೂಡುವ ಭಾಷಾವಾರು ಪ್ರಾಂತ್ಯ ರಚನೆಯ ಹೋರಾಟ ಮತ್ತು ಆರ್ಟಿಕಲ್ 371 ಜೆ ರಚನೆಗಾಗಿ ನಡೆದ ಚಳುವಳಿ. ಇವುಗಳನ್ನು ಹೊಸ ತಲೆಮಾರು ಎಂದಿಗೂ ಮರೆಯಬಾರದು ಎಂದರು.

ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರುವುದರ ಮೂಲಕ ನುಡಿದಂತೆ ನಡೆಯುವ ಗ್ಯಾರಂಟಿ ಸರ್ಕಾರ ನಮ್ಮದು ಎಂದು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಾತಿ–ಧರ್ಮ ಇಲ್ಲದೆ ಪ್ರತಿಯೊಬ್ಬರನ್ನು ಆರ್ಥಿಕವಾಗಿ ಸುಸ್ಥಿರವಾಗಿರಿಸಲು ಹಾಕಿಕೊಂಡಿರುವ ಗ್ಯಾರಂಟಿ ಯೋಜನೆಗಳು ಬಡವರ ಬದುಕನ್ನೇ ಬದಲಿಸುವ ಕರ್ನಾಟಕ ಮಾದರಿ ಯೋಜನೆಗಳಾಗಿ ಪರಿವರ್ತನೆಗೊಂಡಿರುವುದಕ್ಕೆ ಸಂತೃಪ್ತಿ ಭಾವ ನನ್ನಲ್ಲಿ ಮೂಡಿದೆ ಎಂದರು.

**ಅಕ್ಷರ ಆವಿಷ್ಕಾರಕ್ಕೆ 1,250 ಕೋಟಿ ರೂ. ಮೀಸಲು:** ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಅಮೂಲಾಗ್ರ ಬದಲಾವಣೆ ತರಲು ಕೆ.ಕೆ.ಆರ್.ಡಿ.ಬಿ. ಮಂಡಳಿಯು ಈ ವರ್ಷ 1,250 ಕೋಟಿ ರೂ.ಗಳನ್ನು ಮೀಸಲಿಟ್ಟು ಅಕ್ಷರ ಆವಿಷ್ಕಾರ ಕಾರ್ಯಕ್ರಮ ರೂಪಿಸಿ ಅನುಷ್ಠಾನಗೊಳಿಸುತ್ತಿರುವುದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂತಸ ವ್ಯಕ್ತಪಡಿಸಿದರಲ್ಲದೆ ಕಾರ್ಯಕ್ರಮದಲ್ಲಿ ಮಂಡಳಿಯಿಂದ ಎಸ್.ಎಸ್.ಎಲ್.ಸಿ. ಫಲಿತಾಂಶ ಸುಧಾರಣೆಗೆ ಪ್ರೌಢ ಶಾಲೆ ವಿದ್ಯಾರ್ಥಿಗಳಿಗೆ ನೀಡಲು ಹೊರತಂದ "ಕಲಿಕಾಸರೆ" ಪುಸ್ತಕ ಬಿಡುಗಡೆ ಮಾಡಿದರು.

**ಅಪೌಷ್ಠಿತೆ ನಿವಾರಣೆಗೆ ಪಣ:** ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿನ ಮಹಿಳೆಯರು ಮತ್ತು ಮಕ್ಕಳಲ್ಲಿ ಅಪೌಷ್ಠಿಕತೆಯ ಸಮಸ್ಯೆ ಹೆಚ್ಚಿರುವುದಕ್ಕೆ ಕಳವಳ ವ್ಯಕ್ತಪಡಿಸುತ್ತಾ, ಆರೋಗ್ಯವಂತ ಜನರು ದೇಶದ ಸಂಪತ್ತು; ಈ ಹಿನ್ನೆಲೆಯಲ್ಲಿ ಜನರ ಆರೋಗ್ಯ ಸುಧಾರಣೆಗಾಗಿ ಆರೋಗ್ಯ–ಆವಿಷ್ಕಾರ ಕಾರ್ಯಕ್ರಮ ರೂಪಿಸಿ ಅಪೌಷ್ಠಿಕತೆ ಮುಕ್ತ ಕರ್ನಾಟಕ ಮಾಡಲು ಪಣ ತೊಟ್ಟಿದ್ದೇವೆ. ಆಸ್ಪತ್ರೆಗಳ ಮೇಲ್ದರ್ಜೆ, ತಾಯಿ ಮತ್ತು ಮಕ್ಕಳ ಆಸ್ಪತ್ರೆ ಸ್ಥಾಪನೆ ಸೇರಿ ಇನ್ನಿತರ ಆರೋಗ್ಯ ಸೇವೆಗಳಿಗಾಗಿ ಆರೋಗ್ಯ ಇಲಾಖೆಯ ಸಹಭಾಗಿತ್ವದೊಂದಿಗೆ 220 ಕೋಟಿ ರೂ.ಗಳ ವಿಶೇಷ ಅನುದಾನವನ್ನು ಮಂಡಳಿ ಒದಗಿಸುತ್ತಿದೆ ಎಂದು ಘೋಷಿಸಿ, ಈ ವರ್ಷ ಸಹ ಆರೋಗ್ಯ ಆವಿಷ್ಕಾರ ಕಾರ್ಯಕ್ರಮ ಮುಂದುವರೆಯಲಿದೆ ಎಂದು ಹೇಳಿದರು.

**ರಿಜಿನಲ್ ಮೆಡಿಕಲ್ ಹಬ್:** ಕಲಬುರಗಿಯಲ್ಲಿ ಜಯದೇವ ಹೃದ್ರೋಗ



ಮತ್ತು ವಿಜ್ಞಾನ ಸಂಸ್ಥೆ ಆಸ್ಪತ್ರೆಯ ಶಾಖಾ ಕಟ್ಟಡ ಕಾಮಗಾರಿ ಪೂರ್ಣಗೊಳಿಸಲು 262 ಕೋಟಿ ರೂ. ವೆಚ್ಚದ ಪರಿಷ್ಕೃತ ಅಂದಾಜಿಗೆ ಇತ್ತೀಚೆಗೆ ಅನುಮೋದನೆ ನೀಡಲಾಗಿದ್ದು, ಶೀಘ್ರದಲ್ಲಿಯೇ ಆಸ್ಪತ್ರೆ ಲೋಕಾರ್ಪಣೆ ಮಾಡಲಾಗುವುದು. 221.52 ಕೋಟಿ ರೂ. ವೆಚ್ಚದಲ್ಲಿ 150 ಹಾಸಿಗೆಯ ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ಘಟಕ ಸ್ಥಾಪಿಸಲಾಗುತ್ತಿದೆ. ಜಿಮ್ಸ್ ಆಸ್ಪತ್ರೆಯ ಆವರಣದಲ್ಲಿಯೇ 90 ಕೋಟಿ ರೂ. ವೆಚ್ಚದ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಮತ್ತು 72 ಕೋಟಿ ರೂ. ವೆಚ್ಚದಲ್ಲಿ 150 ಹಾಸಿಗೆಯ ಕ್ಯಾನ್ಸರ್ ಆಸ್ಪತ್ರೆಯ ವಿಸ್ತೀರ್ಣ ಕಟ್ಟಡ ನಿರ್ಮಿಸಲಾಗುತ್ತಿದೆ.

ಹಿಂದೆ ನಮ್ಮ ಸರ್ಕಾರದ ಅವಧಿಯಲ್ಲಿಯೆ ಕಲಬುರಗಿಯಲ್ಲಿ ಜಿಮ್ಸ್ ವೈದ್ಯಕೀಯ ಕಾಲೇಜು, ಜಯದೇವ ಆಸ್ಪತ್ರೆಯಲ್ಲಿ ಇತ್ತೀಚೆಗೆ ಟ್ರಾಮಾ ಸೆಂಟರ್ ಸ್ಥಾಪಿಸಿ ಸಾರ್ವಜನಿಕರ ಸೇವೆಗೆ ಸಮರ್ಪಿಸಿದೆ. ಪ್ರಗತಿಯಲ್ಲಿರುವ 162.80 ಕೋಟಿ ರೂ. ವೆಚ್ಚದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಶೀಘ್ರ ಸಾರ್ವಜನಿಕರ ಸೇವೆ ಬಳಕೆಗೆ ಬರಲಿದೆ. 30.14 ಕೋಟಿ ರೂ. ವೆಚ್ಚದಲ್ಲಿ 50 ಹಾಸಿಗೆ ಸಾಮರ್ಥ್ಯದ ತೀವ್ರ ನಿಗಾ ಘಟಕ ಮತ್ತು 15.57 ಕೋಟಿ ರೂ. ವೆಚ್ಚದಲ್ಲಿ 30 ಹಾಸಿಗೆ ಸಾಮರ್ಥ್ಯದ ಸುಟ್ಟ ಗಾಯಗಳ ಘಟಕಕ್ಕೆ ಅಡಿಗಲ್ಲು ಹಾಕಲಾಗಿದೆ.

ಈ ಎಲ್ಲಾ ಆರೋಗ್ಯ ಸೇವೆಗಳಿಂದ ಪ್ರದೇಶದ ಜನತೆಗೆ ಗುಣಮಟ್ಟದ ಆರೋಗ್ಯ ಸೇವೆ ಜೊತೆಗೆ ವೈದ್ಯಕೀಯ ಸವಲತ್ತು ಮತ್ತಷ್ಟು ಹತ್ತಿರವಾಗಲಿದೆ ಎಂದು ಹೇಳಿದ ಮುಖ್ಯಮಂತ್ರಿಗಳು, ಡಾ.ಮಲ್ಲಿಕಾರ್ಜುನ ಖರ್ಗೆ ಅವರ ಆಶಯದಂತೆ ಕಲಬುರಗಿಯನ್ನು ರಿಜಿನಲ್ ಮೆಡಿಕಲ್ ಹಬ್ ಮಾಡುವತ್ತ ನಮ್ಮ ಸರ್ಕಾರ ದೃಢ ಹೆಜ್ಜೆ ಇಟ್ಟಿದೆ ಎಂದರು.

**ಉನ್ನತಾಧಿಕಾರ ಸಮಿತಿ ರಚನೆ:** ಡಾ.ಡಿ.ಎಂ. ನಂಜುಂಡಪ್ಪ ವರದಿ 2002ರಲ್ಲಿ ಸಲ್ಲಿಸಲಾಗಿದ್ದು, ಕಳೆದ 22 ವರ್ಷಗಳಲ್ಲಿ ಈ ವರದಿಯ ಆಧಾರದ ಮೇಲೆ ಹಿಂದುಳಿದ ಪ್ರದೇಶಗಳಲ್ಲಿ ಅಸಮತೋಲನೆಯನ್ನು ನಿವಾರಿಸಲು ಬಹಳಷ್ಟು ಯೋಜನೆಗಳನ್ನು ಮತ್ತು ಬಂಡವಾಳ ಹೂಡಿಕೆಯನ್ನು ಮಾಡಲಾಗಿದೆ. ಇದರಿಂದ ಆಗಿರುವ ಬದಲಾವಣೆಗಳು ಮತ್ತು ಪರಿಣಾಮಗಳನ್ನು ಅಧ್ಯಯನ ಮಾಡಲು ಪ್ರೊ. ಗೋವಿಂದರಾವ್ ಅವರ ಅಧ್ಯಕ್ಷತೆಯಲ್ಲಿ ಉನ್ನತಾಧಿಕಾರ ಸಮಿತಿ ರಚಿಸಲಾಗಿದ್ದು, ಸಮಿತಿಯ ವರದಿ ಮೇರೆಗೆ ಪ್ರಾದೇಶಿಕ ಅಸಮಾನತೆಯ ಆಧಾರದ ಮೇಲೆ ಜಿಲ್ಲೆ ಮತ್ತು ತಾಲ್ಲೂಕುಗಳನ್ನು ವರ್ಗೀಕರಿಸಿ ಹೊಸ ಅಭಿವೃದ್ಧಿ ಸೂಚ್ಯಂಕಗಳನ್ನು ತಯಾರಿಸಲಾಗುವುದು ಎಂದು ಮುಖ್ಯಮಂತ್ರಿಗಳು ಸಮಾರಂಭದಲ್ಲಿ ಘೋಷಿಸಿದರು.

**10 ವರ್ಷದ ರಿಪೋರ್ಟ್ ಕಾರ್ಡ್ ಬಿಚಿಟ್ಟ ಸಿ.ಎಂ:** ಸುಮಾರು 4 ದಶಕಗಳ ಸ್ಥಳೀಯರ ತೀವ್ರ ಹೋರಾಟ ಹಾಗೂ ಈ ಭಾಗದ ಹಿರಿಯ ರಾಜಕಾರಣಿಗಳಾದ ರಾಜ್ಯಸಭೆಯ ವಿರೋಧ ಪಕ್ಷದ ನಾಯಕರಾಗಿರುವ ಡಾ. ಮಲ್ಲಿಕಾರ್ಜುನ್ ಖರ್ಗೆ ಹಾಗೂ ಮಾಜಿ ಮುಖ್ಯಮಂತ್ರಿಗಳಾಗಿದ್ದ ದಿವಂಗತ ಎನ್. ಧರ್ಮಸಿಂಗ್ ಅವರ ಅವಿರತ ಪ್ರಯತ್ನದಿಂದಾಗಿ ದಿ. 01-01-2013 ರಂದು ಘನತೆವೆತ್ತ ರಾಷ್ಟ್ರಪತಿಗಳ ಅಂಕಿತ ಪಡೆದು ದಿ.06-11-2023ರ ಸರ್ಕಾರಿ ಆದೇಶದ ಮೂಲಕ 371ಜೆ ಕಾಯ್ದೆ ಜಾರಿಗೆ ಬಂದು ದಶಮಾನೋತ್ಸವ ಆಚರಿಸಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಕಳೆದ 10 ವರ್ಷದ ಅವಧಿಯಲ್ಲಿ ಪ್ರದೇಶದಲ್ಲಾದ ಪ್ರಗತಿಯ ರಿಪೋರ್ಟ್ ಕಾರ್ಡ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿಚ್ಚಿಟ್ಟರು.

2013-14 ರಿಂದ 2024-25ನೇ ಸಾಲಿನ ವರೆಗೆ ಸರ್ಕಾರವು ಕೆ.ಕೆಆರ್.ಡಿ.ಬಿ. ಮಂಡಳಿಗೆ 19,778.33 ಕೋಟಿ ರೂ. ಅನುದಾನ ಹಂಚಿಕೆ ಮಾಡಿ 13,228.80 ಕೋಟಿ ರೂ. ಬಿಡುಗಡೆ ಮಾಡಿದ್ದು, ಇದರಲ್ಲಿ ಇದೂವರೆಗೆ 11,174.27 ಕೋಟಿ ರೂ. ಖರ್ಚು ಮಾಡಲಾಗಿದೆ. ಬಿಡುಗಡೆಯಾದ ಅನುದಾನಕ್ಕೆ ಶೇ.85ರಷ್ಟು ಆರ್ಥಿಕ ಪ್ರಗತಿ ಸಾಧಿಸಲಾಗಿದೆ. ಒಟ್ಟಾರೆ 35,885 ಕಾಮಗಾರಿಗಳು ಕೈಗೆತ್ತಿಕೊಂಡಿದ್ದು, 27,264 ಕಾಮಗಾರಿಗಳನ್ನು ಪೂರ್ಣಗೊಳಿಸಿದೆ. 8,621 ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿವೆ. ಈ ಅಂಕಿಸಂಖ್ಯೆಗಳೇ ಪ್ರದೇಶದ ಅಭಿವೃದ್ಧಿಯನ್ನು ಸಾರಿ ಹೇಳುತ್ತಿವೆ.

ಈ ಭಾಗದವರಿಗೆ ನೇರ ನೇಮಕಾತಿಗೆ 1,09,416 ಹುದ್ದೆ ಗುರುತಿಸಿದ್ದು, 79,985 ಹುದ್ದೆ ಭರ್ತಿಯಾಗಿವೆ. ಮುಂಬಡ್ತಿ ಮೀಸಲಿಗೆ ಗುರುತಿಸಿದ 38,705 ಹುದ್ದೆಗಳ ಪೈಕಿ 29,793 ಜನರಿಗೆ ಮುಂಬಡ್ತಿ ಭಾಗ್ಯ

ನೀಡಲಾಗಿದೆ. ಉನ್ನತ ಶಿಕ್ಷಣ ಮೀಸಲಾತಿಯಿಂದ ವೈದ್ಯಕೀಯ–7,758, ದಂತ ವೈದ್ಯಕೀಯ–1,559, ಎಂಜಿನಿಯರಿಂಗ್–25,712, ಕೃಷಿ ಸಂಬಂಧಿತ–4,205, ಆಯೂಷ್–ಹೋಮಿಯೋಪತಿ 3,710, ಬಿ–ಫಾರ್ಮ್ 1,721 ಸೇರಿ ಒಟ್ಟಾರೆ 44,665 ಸ್ಥಳೀಯ ಅಭ್ಯರ್ಥಿಗಳು ಪ್ರವೇಶ ಪಡೆದಿದ್ದಾರೆ.

**1,819.20 ಕೋಟಿ ರೂ. ಕಾಮಗಾರಿಗೆ ಚಾಲನೆ:** ಉತ್ಸವ ದಿನಾಚರಣೆ ಸಮಾರಂಭದಲ್ಲಿ ಕಲಬುರಗಿ ಜಿಲ್ಲೆಯ 1,541.33 ಕೋಟಿ ರೂ. ಸೇರಿದಂತೆ ಕಲ್ಯಾಣ ಕರ್ನಾಟಕ ವಿಭಾಗದ 1,819.20 ಕೋಟಿ ರೂ. ಬೃಹತ್ ಮೊತ್ತದ ಅಭಿವೃದ್ಧಿ ಕಾಮಗಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಲನೆ ನೀಡಿದರು.

**ಸಿ.ಎಂ. ಭಾಷಣದ ಮುಖ್ಯಾಂಶಗಳು:**

- ಕೆ.ಕೆ.ಆರ್.ಡಿ.ಬಿ. ಮಂಡಳಿಗೆ ಪ್ರಸಕ್ತ 2024–25ನೇ ಸಾಲಿನ ಆಯವ್ಯಯದಲ್ಲಿ ದಾಖಲೆ ಪ್ರಮಾಣದಲ್ಲಿ ಹಂಚಿಕೆ ಮಾಡಿದ 5,000 ಕೋಟಿ ರೂ. ಮೊತ್ತದ ಕ್ರಿಯಾ ಯೋಜನೆಗೆ ಸರ್ಕಾರ ಅನುಮೋದನೆ ನೀಡಿದ್ದರಿಂದ ಪ್ರದೇಶದಲ್ಲಿ ಅಭಿವೃದ್ಧಿಯ ಹೊಸ ಕ್ರಾಂತಿ ನಿರೀಕ್ಷಿಸಲಾಗಿದೆ
- ರಾಜ್ಯ ಸರ್ಕಾರದಿಂದಲೇ 1,685 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಕಲಬುರಗಿ ನಗರವನ್ನು ಸ್ಮಾರ್ಟ್ ಸಿಟಿಯನ್ನಾಗಿ ಅಭಿವೃದ್ಧಿ ಪಡಿಸಲಾಗುವುದು
- ರಾಯಚೂರಿನಲ್ಲಿ ಪ್ರತಿಷ್ಠಿತ ಏಮ್ಸ್ ಸ್ಥಾಪನೆಗೆ ಎಲ್ಲಾ ರೀತಿಯ ನೆರವು ನೀಡಲು ರಾಜ್ಯ ಸರ್ಕಾರ ಸಿದ್ಧವಿದೆ. ಕೇಂದ್ರ ಸರ್ಕಾರವು ಕೂಡಲೆ ಏಮ್ಸ್ ಸಂಸ್ಥೆ ಪ್ರಾರಂಭಿಸಲು ಅನುಮತಿ ನೀಡಬೇಕಿದೆ
- ಕಲಬುರಗಿಯಲ್ಲಿ ಐ.ಟಿ–ಬಿ.ಟಿ ಇಲಾಖೆಯಿಂದ ಹೊಸ ಫ್ಲಾಟ್–ಫ್ಲೋರ್ ಫ್ಯಾಕ್ಟರಿ ಸ್ಥಾಪಿಸಲಾಗುವುದು. ಇದರಿಂದ ಹೊಸ ಉದ್ಯೋಗಗಳನ್ನು ಸೃಷ್ಟಿಸುವ ಜೊತೆಗೆ ಕರ್ನಾಟಕವನ್ನು ಭಾರತದಲ್ಲಿ ಎಲೆಕ್ಟ್ರಾನಿಕ್ಸ್ ಉತ್ಪಾದನೆಯಲ್ಲಿ ಅಗ್ರಸ್ಥಾನವಾಗಿಸಲು ಸಹಾಯವಾಗಲಿದೆ
- ಕಲಬುರಗಿಯಲ್ಲಿ ಕಲಬುರಗಿ ಟ್ರಸ್ಟ್ ಮತ್ತು ಕೆ–ಟೆಕ್ ಮೂಲಕ ನವೋದ್ಯಮಗಳನ್ನು ಪೋಷಿಸಲು ಮತ್ತು ಕೈಗಾರಿಕೆಗಳಲ್ಲಿ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ನುರಿತ ಉದ್ಯೋಗಿಗಳನ್ನು ಸೃಷ್ಟಿಸುವ ಗುರಿಯೊಂದಿಗೆ ಅತ್ಯಾಧುನಿಕ ಇನ್‌ಕ್ಯುಬೇಶನ್ ಮತ್ತು ಕೌಶಲ್ಯ ಕೇಂದ್ರ ಪ್ರಾರಂಭಿಸಲಾಗುತ್ತಿದೆ
- “ಕಲ್ಯಾಣ ಪಥ” ಯೋಜನೆಯಡಿ ಪ್ರದೇಶದ 38 ಗ್ರಾಮೀಣ ವಿಧಾನಸಭಾ ಕ್ಷೇತ್ರಗಳಲ್ಲಿ 1,000 ಕೋಟಿ ರೂ. ವೆಚ್ಚದಲ್ಲಿ 1,150 ಕಿ.ಮೀ. ರಸ್ತೆ ನಿರ್ಮಾಣ
- ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯಡಿ ಹೊಸ ವಸತಿ ನಿಲಯ ಮತ್ತು ಶಾಲೆಗಳ ನಿರ್ಮಾಣ ಮಾಡಲು ತಲಾ 180 ಕೋಟಿ ರೂ. ಅನುದಾನ
- ಪ್ರದೇಶದ 7 ಜಿಲ್ಲೆಗಳ 18 ಹೊಸ ತಾಲೂಕುಗಳಲ್ಲಿ ಕಂದಾಯ ಇಲಾಖೆ ಸಹಭಾಗಿತ್ವದಲ್ಲಿ “ತಾಲೂಕಾ ಆಡಳಿತ ಭವನ” ನಿರ್ಮಾಣ
- ಪ್ರದೇಶದಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪನೆ, ಆಸ್ಪತ್ರೆ ಮೇಲ್ದರ್ಜೆಗೇರಿಸುವುದು ಸೇರಿದಂತೆ ವಿವಿಧ ಹಂತದ ಆಸ್ಪತ್ರೆಗಳ ಕಾಮಗಾರಿಗಳನ್ನು ಆರೋಗ್ಯ ಇಲಾಖೆಯ ಸಹಭಾಗಿತ್ವದೊಂದಿಗೆ ಅನುಷ್ಠಾನಕ್ಕಾಗಿ ಪ್ರಸಕ್ತ ಸಾಲಿನಲ್ಲಿ 110 ಕೋಟಿ ರೂ. ಅನುದಾನ ಮಂಡಳಿಯಿಂದ ಮೀಸಲು
- ಬಸವಣ್ಣ ಹಾಗೂ ಇತರ ಶರಣರ ವಚನಗಳನ್ನು ವಿಶ್ವಕ್ಕೆ ಪರಿಚಯಿಸುವ ವಚನ ಸಂಗ್ರಹಾಲಯ/ವಚನ ಮಂಟಪವನ್ನು ಕಲಬುರಗಿಯಲ್ಲಿ ಸ್ಥಾಪಿಸಲಾಗುವುದು
- ಮಹಾತ್ಮಾ ಗಾಂಧಿ ನಗರ ವಿಕಾಸ ಯೋಜನೆ 2.0 ಅಡಿ ಕಲಬುರಗಿ ಮತ್ತು ಬಳ್ಳಾರಿ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ತಲಾ 200 ಕೋಟಿ ರೂ. ಗಳ ವೆಚ್ಚದಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲಾಗುವುದು
- ಬೀದರ್–ಬೆಂಗಳೂರು ನಡುವೆ ಆರ್ಥಿಕ ಕಾರಿಡಾರ್ ಅಭಿವೃದ್ಧಿ ಪಡಿಸುವ ಮೂಲಕ ಪ್ರದೇಶದ ಆರ್ಥಿಕ ಅಭಿವೃದ್ಧಿ ಚುರುಕುಗೊಳಿಸಲು ಕ್ರಮ
- ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಚಿಕ್ಕಲಪರ್ವಿ ಹತ್ತಿರ ತುಂಗಭದ್ರಾ ನದಿಗೆ ಅಡ್ಡಲಾಗಿ ಬ್ರಿಡ್ಜ್–ಕಂ–ಬ್ಯಾರೇಜ್ 397 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ
- 140 ಕೋಟಿ ರೂ. ವೆಚ್ಚದ ಕಲಬುರಗಿ ಜಿಲ್ಲೆಯ ಸೇಡಂ ತಾಲೂಕಿನ ಯಡ್ಡಳ್ಳಿ–ಕಾಚೂರು ಏತ ನೀರಾವರಿ ಯೋಜನೆಗೆ ಶೀಘ್ರದಲ್ಲಿಯೆ ಅಡಿಗಲ್ಲು ಹಾಕಲಾಗುವುದು
- ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ರಾಯಚೂರು ಮತ್ತು ಯಾದಗಿರಿಯಲ್ಲಿ ವಿಜ್ಞಾನ ಕೇಂದ್ರ/ ತಾರಾಲಯಗಳನ್ನು ಹೊಸದಾಗಿ ಸ್ಥಾಪಿಸಲಾಗುವುದು.
- ಪ್ರಸಕ್ತ ಸಾಲಿನಲ್ಲಿ ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ತಾಯಿ ಎದೆಹಾಲಿನ ಬ್ಯಾಂಕ್ ಹೊಸ ಘಟಕಗಳನ್ನು ಸ್ಥಾಪಿಸಲಾಗುವುದು
- ಬಳ್ಳಾರಿಯಲ್ಲಿ ಅಸಂಘಟಿತವಾಗಿರುವ ಜೀನ್ಸ್ ಉದ್ದಿಮೆಗಳನ್ನು ಸಂಘಟಿಸಿ, ವಿಶ್ವದರ್ಜೆಗೆ ಉನ್ನತೀಕರಿಸಲು ಮೂಲ ಸೌಕರ್ಯಗಳನ್ನು ಒಳಗೊಂಡಂತೆ ಜೀನ್ಸ್ ಅಪಾರೆಲ್ ಪಾರ್ಕ್ ಹಾಗೂ ಸಾಮಾನ್ಯ ಸೌಲಭ್ಯ ಕೇಂದ್ರವನ್ನು ಅಭಿವೃದ್ಧಿ ಪಡಿಸಲಾಗುವುದು
- ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ರಾಯಚೂರಿನಲ್ಲಿ ನೂತನ ಜವಳಿ ಪಾರ್ಕ್ ಪ್ರಾರಂಭಿಸಲಾಗುವುದು
- ಬೀದರ್‌ನಲ್ಲಿರುವ ಶ್ರೀ ಗುರು ನಾನಕ್ ಝೀರಾ ಸಾಹೇಬ್ ಗುರುದ್ವಾರದ ಅಭಿವೃದ್ಧಿಗಾಗಿ 1 ಕೋಟಿ ರೂ. ಅನುದಾನ ನೀಡಲಾಗುವುದು

# ದಶಕದ ಬಳಿಕ ಕಲಬುರಗಿಯಲ್ಲಿ ಸಚಿವ ಸಂಪುಟ ಸಭೆ

**ಸಂಪುಟ ಸಭೆಯಲ್ಲಿ ಐತಿಹಾಸಿಕ ನಿರ್ಣಯಗಳನ್ನು ತೆಗೆದುಕೊಳ್ಳುವ ಮೂಲಕ ಪ್ರದೇಶದ ಜನರ ಆಶೋತ್ತರಗಳಿಗೆ ಸ್ಪಂದಿಸಿದ ಸರ್ಕಾರ**

ರವಿ ಮಿರಾಸ್ಕರ್

ಕಲ್ಯಾಣ ಕರ್ನಾಟಕ ಉತ್ಸವ ದಿನವಾದ ಸೆಪ್ಟೆಂಬರ್ 17 ರಂದೇ ಕಲಬುರಗಿಯಲ್ಲಿ ದಶಕದ ಬಳಿಕ ರಾಜ್ಯ ಸಚಿವ ಸಂಪುಟ ಸಭೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಪ್ರದೇಶದ ಅಭಿವೃದ್ಧಿಗೆ ಐತಿಹಾಸಿಕ ತೀರ್ಮಾನಗಳನ್ನು ತೆಗೆದುಕೊಳ್ಳುವ ಮೂಲಕ ಜನರ ಆಶೋತ್ತರಗಳಿಗೆ ಸ್ಪಂದಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದರು.

ಸಂಪುಟ ಸಭೆಯಲ್ಲಿ ಚರ್ಚೆಗೆ ಬಂದ 56 ವಿಷಯಗಳಲ್ಲಿ 46 ವಿಷಯಗಳು ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಸಂಬಂಧಿಸಿರುವುದು ಎನ್ನುವುದು ಇಲ್ಲಿ ಗಮನಾರ್ಹ ಅಂಶ. ಇನ್ನು ಈ ಸಚಿವ ಸಂಪುಟ ಸಭೆಯಲ್ಲಿ ರಾಜ್ಯದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಅನುಮೋದನೆ ನೀಡಿದ 12,692 ಕೋಟಿ ರೂ. ಗಳ ಪೈಕಿ 11,770 ಕೋಟಿ ರೂ.ಗಳ ಯೋಜನೆಗಳು ಪ್ರದೇಶಕ್ಕೆ ಸಂಬಂಧಿಸಿದ್ದಾಗಿದೆ. ಹೀಗಾಗಿ ಕಲಬುರಗಿ ಸಚಿವ ಸಂಪುಟ ಸಭೆ ಪ್ರದೇಶದ ಸಮಗ್ರ ಅಭಿವೃದ್ಧಿಗೆ ಅನೇಕ ತೀರ್ಮಾನಕ್ಕೆ ವೇದಿಕೆಯಾಗಿ ಪರಿಣಮಿಸಿತ್ತು.



ಕಳೆದ 2014ರ ನವೆಂಬರ್ 28 ರಂದು 371 ಜೆ ಕಾಯ್ದೆ ಜಾರಿ ಬಳಿಕ ಅಂದು ಅಧಿಕಾರದಲ್ಲಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅಧ್ಯಕ್ಷತೆಯಲ್ಲಿಯೇ ಸಚಿವ ಸಂಪುಟ ಸಭೆ ನಡೆದಿದ್ದು ಕೊನೆಯದಾಗಿತ್ತು. ಅಂದು ಪ್ರದೇಶದಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಕ್ರಾಂತಿಕಾರಿ ನಿರ್ಣಯ ಕೈಗೊಳ್ಳಲಾಗಿತ್ತು. ಪರಿಣಾಮ ಕಳೆದ 10 ವರ್ಷದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸ್ಥಳೀಯರು ಸರ್ಕಾರಿ ನೌಕರಿ ಪಡೆಯುವ ಮೂಲಕ ಮೀಸಲಾತಿಯ ಸವಿ ಕಂಡಿದ್ದಾರೆ.




ಮಾಜಿ ಮುಖ್ಯಮಂತ್ರಿ ದಿವಂಗತ ಎನ್. ಧರ್ಮಸಿಂಗ್ ಅವರು ರಾಜ್ಯದಲ್ಲಿಯೇ ಅತ್ಯಂತವಾಗಿ ಹೈದ್ರಾಬಾದ್ ಕರ್ನಾಟಕ ಪ್ರದೇಶ ಶೈಕ್ಷಣಿಕ, ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದಿದೆ ಎಂಬ ವರದಿ ನೀಡಿದ ಆಧಾರದ ಮೇಲೆ 1982ರಲ್ಲಿ ಅಂದಿನ ಮುಖ್ಯಮಂತ್ರಿ ಆರ್. ಗುಂಡುರಾವ್ ಅವರ ಅಧ್ಯಕ್ಷತೆಯಲ್ಲಿ ಮೊದಲ ಬಾರಿಗೆ ಕಲಬುರಗಿಯಲ್ಲಿ ಸಚಿವ ಸಂಪುಟ ಸಭೆ ನಡೆದಿತ್ತು.

ಮತ್ತೆ ಸಚಿವ ಸಂಪುಟ ಸಭೆಗೆ ಕಲಬುರಗಿ ವೇದಿಕೆಯಾಗಿದ್ದು ಬರೋಬ್ಬರಿ 26 ವರ್ಷಗಳ ನಂತರ ಅಂದರೆ ದಿ.26–09–2008 ರಂದು ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಸರ್ಕಾರದ ಅವಧಿಯಲ್ಲಿ. ತದನಂತರ ದಿ.27–08–2009 ಮತ್ತು ದಿ.04–10–2010 ರಂದು ಸತತವಾಗಿ ಅಂದಿನ ಮುಖ್ಯಮಂತಿಬಿ.ಎಸ್. ಯಡಿಯೂರಪ್ಪ ಅವರ ಕಾಲದಲ್ಲಿ ಸಚಿವ ಸಂಪುಟ ಸಭೆಗಳು ಜರುಗಿದವು. ಮುಂದೆ ದಿ.18–10–2012 ರಂದು ಅಂದಿನ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಅವರ ಅಧ್ಯಕ್ಷತೆಯಲ್ಲಿ ಇಲ್ಲಿನ ಪ್ರಾದೇಶಿಕ ಕಚೇರಿ ಸಭಾಂಗಣವು ಐದನೇ ಬಾರಿಗೆ ಸಚಿವ ಸಂಪುಟ ಸಭೆಗೆ ಸಾಕ್ಷಿಯಾಗಿತ್ತು.

ಹಿಂದುಳಿದ ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಪ್ರದೇಶದ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡು ನಿಜ ಅರ್ಥದಲ್ಲಿ ಕಲ್ಯಾಣ ಮಾಡಲು ಪಣ ತೊಟ್ಟಿರುವ ಸರ್ಕಾರ ಇದೀಗ ಇಲ್ಲಿಯೇ ಸಚಿವ ಸಂಪುಟ ನಡೆಸುವ ಮೂಲಕ ಪ್ರದೇಶದ ಅಭಿವೃದ್ಧಿಗಿರುವ ತನ್ನ ಇಚ್ಛಾಶಕ್ತಿಯನ್ನು ಪ್ರದರ್ಶಿಸಿತ್ತು.

371 ಜೆ ಕಾಯ್ದೆ ಬಂದು ಪ್ರದೇಶ ದಶಮಾನೋತ್ಸವ ಆಚರಿಸಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಕಲಬುರಗಿಯಲ್ಲಿ ಸಚಿವ ಸಂಪುಟ ಸಭೆ ನಡೆಸಿ ಕಲ್ಯಾಣ ಕರ್ನಾಟಕ ಜನರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕೆಂಬ ಅಭಿಲಾಷೆಯಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಐ.ಟಿ–ಬಿ.ಟಿ. ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಹಾಗೂ ಇಡೀ ಸಚಿವ ಸಂಪುಟ ಸಹೋದ್ಯೋಗಿಗಳ ಮನವೊಲಿಸಿದ ಪರಿಣಾಮ ಕಲಬುರಗಿಯಲ್ಲಿ ಸಚಿವ ಸಂಪುಟ ಸಭೆ ನಡೆಸಲು ಸರ್ಕಾರ ತೀರ್ಮಾನಿಸಿತ್ತು.



ಸಚಿವ ಸಂಪುಟ ಸಭೆ ದಿನಾಂಕ ಘೋಷಿಸಿದ ಕೂಡಲೇ ಸಹಜವಾಗಿಯೇ ಇಲ್ಲಿನ ಜನರ ನಿರೀಕ್ಷೆ ಹೆಚ್ಚಾದವು. ಇಡೀ ಸರ್ಕಾರವೇ ಕಲಬುರಗಿಗೆ ಬರುತ್ತಿರುವುದರಿಂದ ಪ್ರದೇಶದ ಅಭಿವೃದ್ಧಿಗೆ ಹೆಚ್ಚಿನ ಹಣ ಹರಿದು ಬರುವ ಲೆಕ್ಕಾಚಾರ ಸಾರ್ವಜನಿಕರದ್ದಾಗಿತ್ತು.




ಇತ್ತ ಕಲಬುರಗಿ ಜಿಲ್ಲಾಡಳಿತವು ಸಚಿವ ಸಂಪುಟ ಸಭೆ ಆತಿಥ್ಯ ವಹಿಸಲು ಒಂದು ವಾರದಿಂದಲೇ ತಯಾರಿಯಲ್ಲಿ ಮುಳುಗಿತ್ತು. ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರ ಮಾರ್ಗದರ್ಶನದಲ್ಲಿ ಸ್ವಾಗತ, ಸಾರಿಗೆ, ಆಹಾರ, ಆರೋಗ್ಯ, ಪ್ರಸ್ತಾವನೆ ತಯಾರಿಕೆ, ಪ್ರಚಾರ ಮಾಧ್ಯಮ, ಭದ್ರತಾ, ವಸತಿ, ಸಮನ್ವಯ ಹೀಗೆ 13 ವಿವಿಧ ಸಮಿತಿಗಳನ್ನು ರಚಿಸಿ ವಿವಿಧ ಇಲಾಖೆಯ ಅಧಿಕಾರಿಗಳಿಗೆ ಸಂಪುಟ ಸಭೆ ಯಶಸ್ಸಿಗೆ ಶ್ರಮಿಸುವಂತೆ ಕೆಲಸ ಕಾರ್ಯಗಳನ್ನು ಹಂಚಿಕೆ ಮಾಡಲಾಗಿತ್ತು.

ಅದರಂತೆ ಪ್ರಾದೇಶಿಕ ಆಯುಕ್ತರಾದ ಕೃಷ್ಣ ಭಾಜಪೇಯಿ, ಜಿಲ್ಲಾಧಿಕಾರಿಗಳಾದ ಬಿ.ಫೌಜಿಯಾ ತರನ್ನುಮ್, ಕಲಬುರಗಿ ನಗರ ಪೋಲಿಸ್ ಆಯುಕ್ತರಾದ ಡಾ.ಎಸ್.ಡಿ.ಶರಣಪ್ಪ, ಎಸ್.ಪಿ. ಅಡ್ಡೂರು ಶ್ರೀನಿವಾಸಲು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಭಂವರ್ ಸಿಂಗ್ ಮೀನಾ, ಕಲಬುರಗಿ ಮಹಾನಗರ ಪಾಲಿಕೆ ಆಯುಕ್ತರಾದ ಭುವನೇಶ ಪಾಟೀಲ ದೇವಿದಾಸ್, ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತರಾದ ಡಾ.ಆಕಾಶ ಶಂಕರ್, ಜೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಾದ ರವೀಂದ್ರ, ಕೆ.ಕೆ.ಆರ್.ಟಿ.ಸಿ. ವ್ಯವಸ್ಥಾಪಕ ನಿರ್ದೇಶಕರಾದ ರಾಚಪ್ಪ ಎಂ. ಸೇರಿದಂತೆ ಕಲಬುರಗಿ ಜಿಲ್ಲಾಡಳಿತದ ಇಡೀ ತಂಡವು ಸಂಪುಟ ಸಭೆಗೆ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಸಚಿವರು, ಮುಖ್ಯ ಕಾರ್ಯದರ್ಶಿಗಳು ಸೇರಿದಂತೆ ಸರ್ಕಾರದ ಇಲಾಖಾ ಕಾರ್ಯದರ್ಶಿಗಳು ಮತ್ತು ಮುಖ್ಯಸ್ಥರ ಆಗಮನ ಹಿನ್ನೆಲೆಯಲ್ಲಿ ಅವರೆಲ್ಲರಿಗೂ ಶಿಷ್ಟಾಚಾರದಂತೆ ವಸತಿ, ಸಾರಿಗೆ, ಊಟೋಪಚಾರ ಮಾಡಲು ಹಗಲಿರುಳು ಎನ್ನದೆ ಕೆಲಸ ಮಾಡಿ ಎಲ್ಲಿಯೂ ಲೋಪಕ್ಕೆ ಅವಕಾಶ ನೀಡದೆ ಸಭೆಯ ಯಶಸ್ಸಿಗೆ ಶ್ರಮಿಸಿದರು.

**ವಿದ್ಯುತ್ ದೀಪಾಲಂಕಾರದಲ್ಲಿ ಝಗಮಗಿಸಿದ ಕಲಬುರಗಿ:** ಸಚಿವ ಸಂಪುಟ ಸಭೆಯ ಆತಿಥ್ಯ ಪಡೆದ ಕಲಬುರಗಿ ಸೆ.15 ರಿಂದ 17ರ ವರೆಗೆ ಮೂರು ದಿನಗಳ ಕಾಲ ತನ್ನ ಸೌಂದರ್ಯ ಹೆಚ್ಚಿಸಿಕೊಂಡಿತ್ತು. ನಗರದ ಪ್ರಮುಖ ರಸ್ತೆ, ವೃತ್ತಗಳು, ರಾಷ್ಟ್ರ ನಾಯಕರ ಪ್ರತಿಮೆಗಳು ಸೇರಿದಂತೆ ಸಭೆ ನಡೆಯುವ ಕಲಬುರಗಿ ಮಿನಿ ವಿಧಾನಸೌಧ, ಐವಾನ್–ಎ–ಶಾಹಿ ಅತಿಥಿಗೃಹ ವಿದ್ಯುತ್ ದೀಪಾಲಂಕಾರದಲ್ಲಿ ಝಗಮಗಿಸಿದವು. ಎಲ್ಲೆಡೆ ಸ್ವಚ್ಛತೆ, ನೈರ್ಮಲ್ಯ ಕಂಡುಬಂತು. ಒಂದೆಡೆ ಉತ್ಸವ, ಇನ್ನೊಂದೆಡೆ ಸಂಪುಟ ಸಭೆ. ಹೀಗಾಗಿ ಕಲಬುರಗಿ ನಗರದಲ್ಲಿ ಹಬ್ಬದ ವಾತಾವರಣ ಕಂಡು ಬಂದಿತ್ತು.

ಇನ್ನು ಈ ಐತಿಹಾಸಿಕ ಸಚಿವ ಸಂಪುಟ ಸಭೆಗೆ ರಾಜ್ಯದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಡಾ.ಜಿ.ಪರಮೇಶ್ವರ, ಹೆಚ್.ಕೆ.ಪಾಟೀಲ, ಕೆ.ಎಚ್.ಮುನಿಯಪ್ಪ, ಡಾ.ಹೆಚ್.ಸಿ.ಮಹಾದೇವಪ್ಪ, ರಾಮಲಿಂಗಾರೆಡ್ಡಿ, ಕೆ.ಜೆ.ಜಾರ್ಜ್, ಎಂ.ಬಿ.ಪಾಟೀಲ, ಡಾ.ಶರಣಪ್ರಕಾಶ ಪಾಟೀಲ, ಶರಣಬಸಪ್ಪ ದರ್ಶನಾಪುರ, ಪ್ರಿಯಾಂಕ್ ಖರ್ಗೆ, ಈಶ್ವರ ಖಂಡ್ರೆ, ರಹೀಮ್ ಖಾನ್, ಎನ್. ಚೆಲುವರಾಯಸ್ವಾಮಿ, ಶಿವಾನಂದ ಪಾಟೀಲ, ಎಸ್.ಎಸ್.ಮಲ್ಲಿಕಾರ್ಜುನ, ಆರ್.ಬಿ.ತಿಮ್ಮಾಪೂರ, ದಿನೇಶ್ ಗುಂಡೂರಾವ್, ಕೃಷ್ಣ ಬೈರೇಗೌಡ, ಬಿ.ಜೆಡ್ ಝಮೀರ್ ಅಹ್ಮದ್ ಖಾನ್, ಶಿವರಾಜ ತಂಗಡಗಿ, ಕೆ.ಎನ್.ರಾಜಣ್ಣ, ಡಿ.ಸುಧಾಕರ್, ಎನ್.ಎಸ್.ಭೋಸರಾಜ, ಕೆ.ವೆಂಕಟೇಶ, ಭೈರತಿ ಸುರೇಶ, ಲಕ್ಷ್ಮೀ ಹೆಬ್ಬಾಳ್ಕರ್, ಮಂಕಾಳ ಎಸ್.ವೈದ್ಯ, ಮಧು ಬಂಗಾರಪ್ಪ ಅವರು ಭಾಗಿಯಾಗಿದ್ದರು.

**ಸಚಿವ ಸಂಪುಟದ ಪ್ರಮುಖ ತೀರ್ಮಾನಗಳು:**

- ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ 50–50 ಅನುದಾನದಿಂದ ಬೀದರ ಮತ್ತು ಕಲಬುರಗಿ ಜಿಲ್ಲೆಯ ಹಳ್ಳಿಗಳಿಗೆ ಶುದ್ಧ ಕುಡಿಯುವ ನೀರು ಪೂರೈಕೆಗೆ 7,600 ಕೋಟಿ ರೂ. ಮೊತ್ತದ ಯೋಜನೆಗೆ ಸಂಪುಟ ಅಸ್ತು

- 371 ಜೆ ಮೀಸಲಾತಿಯಡಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಹಂತ ಹಂತವಾಗಿ ಕ್ರಮ
- ನಿರುದ್ಯೋಗಿ ಅಭ್ಯರ್ಥಿಗಳಿಗೆ ಉದ್ಯೋಗ ಆಧಾರಿತ ಕೌಶಲ್ಯ ನೀಡಲು ಕಲಬುರಗಿ ಮತ್ತು ಕೊಪ್ಪಳದ ತಳಕಲ್‌ನಲ್ಲಿ ತಲಾ 53.25 ಕೋಟಿ ರೂ. ವೆಚ್ಚದಲ್ಲಿ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರ ಸ್ಥಾಪನೆಗೆ ಆಡಳಿತಾತ್ಮಕ ಅನುಮೋದನೆ
- ಬೀದರ್ ಹಾಗೂ ರಾಯಚೂರು ನಗರ ಸಭೆಯನ್ನು ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿಸಲು ತೀರ್ಮಾನ
- ಕಲ್ಯಾಣ ಕರ್ನಾಟಕದ ಪ್ರಗತಿಗೆ ರಾಜ್ಯ ಸರ್ಕಾರ ಪ್ರಸಕ್ತ 2024–25ನೇ ಸಾಲಿಗೆ ಕೆ.ಕೆ.ಆರ್.ಡಿ.ಬಿ ಮಂಡಳಿಗೆ 5,000 ಕೋಟಿ ರೂ. ಅನುದಾನ ನೀಡಿದೆ. ಅದೇ ರೀತಿ ಕೇಂದ್ರ ಸರ್ಕಾರ ಸಹ ಇದೇ ಮೊತ್ತದ ಮ್ಯಾಚಿಂಗ್ ಗ್ರ್ಯಾಂಟ್ ನೀಡುವಂತೆ ಸಭೆಯಲ್ಲಿ ಒಮ್ಮತ್ತದ ನಿರ್ಣಯ
- ಕಲ್ಯಾಣ ಕರ್ನಾಟಕ ಭಾಗದಲ್ಲಿ 890 ಕೋಟಿ ರೂ. ಗಳ ವೆಚ್ಚದಲ್ಲಿ 45 ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು 31 ಸಮುದಾಯ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ ಒಪ್ಪಿಗೆ. 9 ಸಮುದಾಯ ಆರೋಗ್ಯ ಕೇಂದ್ರಗಳನ್ನು ತಾಲ್ಲೂಕು ಆಸ್ಪತ್ರೆಗಳನ್ನಾಗಿ ಹಾಗೂ 2 ತಾಲ್ಲೂಕು ಆಸ್ಪತ್ರೆಗಳನ್ನು ಜಿಲ್ಲಾ ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸಲು ನಿರ್ಧಾರ
- ಹಟ್ಟಿ ಚಿನ್ನದ ಗಣಿ ಕಂಪನಿಯ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ವಸತಿ ಸಮುಚ್ಚಯ ನಿರ್ಮಾಣ ಮಾಡಲು ಉದ್ದೇಶಿಸಿರುವ ಸಮಗ್ರ ಟೌನ್‌ಶಿಪ್ ಯೋಜನೆಯ ಅಂದಾಜು ವೆಚ್ಚ ರೂ.998 ಕೋಟಿ ರೂ. ಗಳಿಗೆ ಆಡಳಿತಾತ್ಮಕ ಅನುಮೋದನೆ
- ಗದಗ, ಕೊಪ್ಪಳ ಮತ್ತು ಚಾಮರಾಜನಗರದಲ್ಲಿನ 450 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಗಳಿಗೆ ಅವಶ್ಯವಿರುವ ವೈದ್ಯಕೀಯ ಉಪಕರಣ ಮತ್ತು ಪೀಠೋಪಕರಣಗಳನ್ನು ಖರೀದಿಸಲು 149 ಕೋಟಿ ರೂ. ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ
- ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಮೂಲಕ ಕಲ್ಯಾಣ ಕರ್ನಾಟಕ ಪ್ರದೇಶ ಒಳಗೊಂಡಂತೆ ರಾಜ್ಯದಾದ್ಯಂತ 15 ಮಹಿಳಾ ಪದವಿ ಪೂರ್ವ ಕಾಲೇಜು ಕಟ್ಟಡ ನಿರ್ಮಾಣ ಕಾಮಗಾರಿಯನ್ನು ರೂ.447 ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ
- ಆರ್ಥಿಕ ಇಲಾಖೆಯು ವಿಧಿಸಿರುವ ಷರತ್ತಿಗೊಳಪಟ್ಟು ಯಾದಗಿರಿ ಜಿಲ್ಲೆಯ ಶಹಾಪೂರ ನಗರಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಯೋಜನೆ 292.98 ಕೋಟಿ ರೂ. ಅಂದಾಜು ಪಟ್ಟಿಗೆ (5 ವರ್ಷಗಳ ನಿರ್ವಹಣೆ ಮತ್ತು ದುರಸ್ತಿ ಸೇರಿ) ಅನುಮೋದನೆ
- ಕಲ್ಯಾಣ ಕರ್ನಾಟಕ ವ್ಯಾಪ್ತಿಯ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ಕ್ರೈಸ್ ಸಂಘದ 12 ಪರಿಶಿಷ್ಟ ಜಾತಿ ಮತ್ತು ಒಂದು ಪರಿಶಿಷ್ಟ ವರ್ಗಗಳ ಒಟ್ಟು 13 ವಸತಿ ಶಾಲೆಗಳಿಗೆ ಅಂದಾಜು ವೆಚ್ಚ ರೂ.286 ಕೋಟಿಗಳಲ್ಲಿ (ಪ.ಜಾತಿ–ರೂ.264.00 ಕೋಟಿ ಪ.ವರ್ಗ–22 ಕೋಟಿ) ಸ್ವಂತ ಕಟ್ಟಡ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ, ಕೆ.ಕೆ.ಆರ್.ಡಿ.ಬಿ. ಮಂಡಳಿಯ ಎಸ್.ಸಿ.ಪಿ–ಟಿ.ಎಸ್.ಪಿ. ಯೋಜನೆಯಡಿ ಅನುದಾನ ಭರಿಸಲಾಗುವುದು
- ಪಿಎಂ–ಮಿತ್ರ ಮೆಗಾ ಜವಳಿ ಪಾರ್ಕ್ ನೀರು ಸರಬರಾಜು ಮಾಡಲು ಪೈಪಲೈನ್ ಮತ್ತು ಇತರೆ ಕಾಮಗಾರಿಗಳಿಗೆ 116 ಕೋಟಿ ರೂ., ಭೀಮಾ ನದಿಗೆ ಅಡ್ಡಲಾಗಿ ಆಣೆಕಟ್ಟು ನಿರ್ಮಾಣಕ್ಕೆ 35 ಕೋಟಿ ರೂ., ವಿದ್ಯುತ್ ಪವರ್ ಸ್ಟೇಷನ್ ಸ್ಥಾಪನೆಗೆ 229.28 ಕೋಟಿ



ರೂ. ಹಾಗೂ ರಸ್ತೆ ನಿರ್ಮಾಣಕ್ಕೆ 9.98 ಕೋಟಿ ರೂ ಹೀಗೆ ಒಟ್ಟಾರೆ 39.26 ಕೋಟಿ ರೂ. ರಾಜ್ಯ ಸರ್ಕಾರದಿಂದ ನೀಡಲು ತೀರ್ಮಾನ

- ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನ ಕೆರೆ ತುಂಬಿಸುವ ಕಾಮಗಾರಿಯನ್ನು ರೂ. 135 ಕೋಟಿ ಮತ್ತು ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಕುರ್ಡಿ ಕೆರೆ ತುಂಬಿಸುವ ಯೋಜನೆ ಕಾಮಗಾರಿಯನ್ನು ರೂ.132 ಕೋಟಿಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ
- ರಾಜ್ಯವ್ಯಾಪ್ತಿ ತಾಲೂಕಾ ಆಡಳಿತ ಸೌಧ, ಮಿನಿ ವಿಧಾನ ಸೌಧಗಳನ್ನು ಇನ್ನು ಮುಂದೆ "ಪ್ರಜಾ ಸೌಧ" ಎಂದು ನಾಮಾಂಕಿತಗೊಳಿಸಲು ನಿರ್ಧಾರ
- ಕಲ್ಯಾಣ ಕರ್ನಾಟಕ ಪ್ರದೇಶದ ನೂತನ ತಾಲೂಕಿನಲ್ಲಿ ತಾಲೂಕಾ ಕಚೇರಿಗಳು ಒಂದೇ ಸೂರಿನಡಿ ತರುವ ಉದ್ದೇಶದಿಂದ ಮೊದಲನೇ ಹಂತದಲ್ಲಿ ಕಾಳಗಿ, ಯಡ್ರಾಮಿ, ಕಮಲನಗರ, ಹುಣಸಗಿ, ಮಸ್ಕಿ, ಸಿರವಾರ, ಕನಕಗಿರಿ, ಕುಕನೂರು ಹಾಗೂ ಕೊಟ್ಟೂರು ಮತ್ತು ಎರಡನೇ ಹಂತದಲ್ಲಿ ಕಮಲಾಪೂರ, ಶಹಾಬಾದ, ಚಿಟಗುಪ್ಪ, ಹುಲಸೂರು, ವಡಗೇರಾ, ಗುರುಮಿಠಕಲ್ ಹಾಗೂ ಕಾರಟಗಿ ತಾಲ್ಲೂಕುಗಳಲ್ಲಿ ಹೊಸದಾಗಿ 16 ತಾಲ್ಲೂಕು ಆಡಳಿತ ಸೌಧ ಕಟ್ಟಡಗಳನ್ನು ಕೆ.ಕೆ.ಆರ್.ಡಿ.ಬಿ. ಮಂಡಳಿ ಸಹಯೋಗದೊಂದಿಗೆ ತಲಾ 8.60 ಕೋಟಿ ರೂ. ವೆಚ್ಚದಲ್ಲಿ ಸರ್ಕಾರವು ನಿಗಧಿಪಡಿಸಿರುವ ಮಾದರಿಯಲ್ಲಿ ನಿರ್ಮಿಸುವ ಪ್ರಸ್ತಾವನೆಯ ಒಟ್ಟು ವೆಚ್ಚ 137.6 ಕೋಟಿ ರೂ. ಗಳಿಗೆ ಆಡಳಿತಾತ್ಮಕ ಅನುಮೋದನೆ
- ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಹರವಾಳ ಗ್ರಾಮದ ಹತ್ತಿರ ಭೀಮಾ ನದಿಗೆ ಅಡ್ಡಲಾಗಿ ಬಾಂದಾರು ಸಹಿತ ಸೇತುವೆ ನಿರ್ಮಾಣ ಕಾಮಗಾರಿಯನ್ನು 130 ಕೋಟಿ ರೂ. ಅಂದಾಜು ಮೊತ್ತದೊಂದಿಗೆ ಕೈಗೊಳ್ಳಲು ಸಂಪುಟ ಒಪ್ಪಿಗೆ
- ಅನುಭವ ಮಂಟಪದಿಂದ ಅಂಜನಾದ್ರಿ ಬೆಟ್ಟದವರೆಗೆ ಎಲ್ಲಾ ಪ್ರವಾಸೋದ್ಯಮ, ಐತಿಹಾಸಿಕ ಸ್ಮಾರಕ ರಕ್ಷಣೆಗೆ ಒತ್ತು, ವಿವಿಧ ಪ್ರವಾಸಿ ಮೂಲಭೂತ ಸೌಕರ್ಯ ಕಲ್ಪಿಸಲು ಕ್ರಮ; ಕೊಪ್ಪಳ ಜಿಲ್ಲೆ ಅಂಜನಾದ್ರಿ ಬೆಟ್ಟ 100 ಕೋಟಿ ರೂ. ವೆಚ್ಚದಲ್ಲಿ, ಚಿತ್ತಾಪುರ ತಾಲೂಕಿನ ನಾಗಾವಿ ಪಾರಂಪರಿಕ ಕ್ಷೇತ್ರ 68 ಕೋಟಿ ರೂ. ವೆಚ್ಚದಲ್ಲಿ, ಯಾದಗಿರಿ ಕೋಟೆ 95 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ.
- ಅಂಜನಾದ್ರಿ ಬೆಟ್ಟ, ಬಳ್ಳಾರಿ ಕೋಟೆ, ಯಾದಗಿರಿ ಜಿಲ್ಲೆಯ ಮೈಲಾಪೂರದ ಶ್ರೀ ಮೈಲಾರಲಿಂಗೇಶ್ವರ ದೇವಸ್ಥಾನಕ್ಕೆ ಖಾಸಗಿ ಸಹಭಾಗಿತ್ವದೊಂದಿಗೆ ರೋಪ್ ವೇ ಅಭಿವೃದ್ಧಿ ಪಡಿಸಲು ತಾತ್ವಿಕ ಅನುಮೋದನೆ
- 15–16 ಶತಮಾನದಲ್ಲಿ ಬಹಮನಿ ಸುಲ್ತಾನ ಅಹಮದ್ ಷಾ ಆಳ್ವಿಕೆಯಲ್ಲಿ ಬೀದರ ನಗರದಲ್ಲಿ ನಿರ್ಮಿಸಿದ ಪ್ರಾಚೀನ ಭೂ ಅಂತರ್ಗತ ನೀರು ಪೂರೈಕೆ ವ್ಯವಸ್ಥೆ ಕರೇಜ್ ಸಂರಕ್ಷಣೆ ಮತ್ತು ಅಭಿವೃದ್ಧಿ ಕಾಮಗಾರಿಗೆ 95 ಕೋಟಿ ರೂ. ನೀಡಲು ನಿರ್ಧಾರ
- ವೈದ್ಯಕೀಯ ಶಿಕ್ಷಣ ಇಲಾಖೆಯಡಿ ಬರುವ ವೈದ್ಯಕೀಯ ಕಾಲೇಜುಗಳ ಆಸ್ಪತ್ರೆಗಳು ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಿಗೆ ಎಂಆರ್ಐ ಯಂತ್ರಗಳನ್ನು 85.60 ಕೋಟಿ ರೂ. ವೆಚ್ಚದಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ
- ಬೀದರ್ ಜಿಲ್ಲೆಯ ಕಛೇರಿಗಳ ಸಂಕೀರ್ಣ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಎಲ್ಲ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ (ಫುಲ್ಲಿ ಫರ್ನಿಶ್ಡ್) ಪರಿಷ್ಕೃತ ಅಂದಾಜು ಮೊತ್ತ 59.80 ಕೋಟಿ ರೂ. ಗಳಿಗೆ ಆಡಳಿತಾತ್ಮಕ ಅನುಮೋದನೆ
- ರಾಯಚೂರು ಜಿಲ್ಲೆಯ ಸಿಂಧನೂರು ಪಟ್ಟಣಕ್ಕೆ ಕುಡಿಯುವ ನೀರನ್ನು ಸರಬರಾಜು ಮಾಡಲು ಸಿಂಧನೂರು ನಗರಸಭೆಯ ಬಳಿ ಲಭ್ಯವಿರುವ 119.11 ಎಕರೆ ಜಮೀನಿನಲ್ಲಿ ಕೆರೆ ನಿರ್ಮಾಣಕ್ಕೆ ಮೊದಲನೇ ಹಂತದಲ್ಲಿ 29.80 ಕೋಟಿ ರೂ. ವೆಚ್ಚ ಮಾಡಲು ಆಡಳಿತಾತ್ಮಕ ಅನುಮೋದನೆ
- ಕಲಬುರಗಿ ಜಿಲ್ಲೆಯ ಚಿತ್ತಾಪೂರ ಪಟ್ಟಣದಲ್ಲಿ 12 ಕೋಟಿ ರೂ. ವೆಚ್ಚದಲ್ಲಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಾಣ ಮಾಡಲು, ಕ್ರೈಸ್ ಸಂಸ್ಥೆಯಿಂದ ಚಿತ್ತಾಪೂರ ತಾಲೂಕಿನ ಗುಂಡಗುರ್ತಿ, ವಾಡಿ ಹಾಗೂ ನಾಲವಾರದಲ್ಲಿರುವ ಒಟ್ಟು 7 ಪರಿಶಿಷ್ಟ ಜಾತಿಯ ವಸತಿ ಶಾಲೆಗಳಿಗೆ ಕಂಪ್ಯೂಟರ್ ಲ್ಯಾಬ್, ವಿಜ್ಞಾನ ಪ್ರಯೋಗಾಲಯ ಹಾಗೂ ಕಿಚನ್ ಮಾಡ್ಯೂಲರ್ ಸೌಕರ್ಯಗಳನ್ನು ಒದಗಿಸಲು ಅಂದಾಜು ವೆಚ್ಚ ರೂ.18.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ
- 2024–25ನೇ ಸಾಲಿಗೆ ಬೀದರ್ ತಾಲ್ಲೂಕಿನ ಶಹಾಪೂರ ಮೀಸಲು ಅರಣ್ಯ ಪ್ರದೇಶಲ್ಲಿನ  ದೇವ ವನ ಟ್ರೀ–ಪಾರ್ಕ್‌ನಲ್ಲಿ ಪರಿಸರ ಪ್ರವಾಸೋದ್ಯಮ ಮತ್ತು ಸಂರಕ್ಷಣಾತ್ಮಕ ಕಾಮಗಾರಿಗೆ 16.12 ಕೋಟಿ ಅನುದಾನ ಒದಗಿಸಲು ಆಡಳಿತಾತ್ಮಕ ಅನುಮೋದನೆ
- ಬೀದರ್ ಜಿಲ್ಲೆಯ ಹೊನ್ನಿಕೇರಿ ಮೀಸಲು ಅರಣ್ಯ ಮತ್ತು ಇತರೆ ಜೀವವೈವಿಧ್ಯ ಪ್ರದೇಶಗಳಲ್ಲಿ ಪರಿಸರ ಪ್ರವಾಸೋದ್ಯಮ ಮತ್ತು ಸಂರಕ್ಷಣಾತ್ಮಕ ಕಾಮಗಾರಿಗಳನ್ನು ಕೈಗೊಳ್ಳಲು 15 ಕೋಟಿ ರೂ. ಕೆ.ಕೆ.ಆರ್.ಡಿ.ಬಿ. ಮಂಡಳಿಯಿಂದ ಅನುದಾನ ಹಂಚಿಕೆ ಮಾಡಿ ವೆಚ್ಚ ಭರಿಸಲು ಆಡಳಿತಾತ್ಮಕ ಅನುಮೋದನೆ

■

## ಸಮಾನತೆ, ಏಕತೆ ಮತ್ತು ಭ್ರಾತೃತ್ವಕ್ಕಾಗಿ




# ಐತಿಹಾಸಿಕ ಮಾನವ ಸರಪಳಿ

ಚಂದ್ರಮುಖಿ

ರಾಜ್ಯದ ಈ ತುದಿಯಿಂದ ಆ ಶೃಂಗದ ತನಕ. ಅಂದರೆ ಚಾಮರಾಜನಗರದಿಂದ ಬೀದರ್ ವರೆಗೆ. ಅಂದಾಜು 2500 ಕಿ.ಮೀ. ದೂರ. ನಾಡಿನ ಮುವತ್ತೊಂದೂ ಜಿಲ್ಲೆಗಳ ಅಷ್ಟೂ ಉದ್ದಕ್ಕೆ ಪರಸ್ಪರ ಕೈಕೈ ಹಿಡಿದ ಜನತೆ. ಒಟ್ಟೂ ಭಾಗವಹಿಸಿದ ಜನರ ಸಂಖ್ಯೆ 25 ಲಕ್ಷಕ್ಕೂ ಅಧಿಕ. ಇವರಲ್ಲಿ ನಾಡಿನ ಮುಖ್ಯಮಂತ್ರಿಯಿಂದ ಆರಂಭಿಸಿ ಸಮಾಜದ ಕಟ್ಟಕಡೆಯ ಜನರೂ ಸೇರಿದ್ದರು ಎಂಬುದು ವಿಶೇಷ. ಇವೆಲ್ಲವೂ ಏಕಕಾಲಕ್ಕೆ ಬೆಸೆದುಕೊಂಡ ವಿಶ್ವದ ಅತಿ ಉದ್ದದ ಮಾನವ ಸರಪಳಿ! ಸಮಾನತೆ, ಏಕತೆ ಮತ್ತು ಭ್ರಾತೃತ್ವಕ್ಕಾಗಿ ಹೆಣೆದ ಐತಿಹಾಸಿಕ ಮಾನವ ಕೋಟೆ ಕೂಡ ಹೌದು.

ಇದರ ಮುಖ್ಯ ಉದ್ದೇಶವಿಷ್ಟೇ; ನಾಡಿನ ಉದ್ದಗಲಕ್ಕೂ ವೈವಿಧ್ಯತೆಯನ್ನು ಹೊಂದಿದ ಜನತೆ ಸರ್ವಸಮಾನರು ಎಂಬುದನ್ನು ಸಾಬೀತುಪಡಿಸುವುದು. ನಮ್ಮ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಆಶಯವೇ ಎಲ್ಲರನ್ನೂ ಸಮಾನವಾಗಿ ಕಾಣುವುದು. ಆ ಕಾರಣಕ್ಕೆ ಸರ್ವ ಸಮಾನತೆಯ ಧ್ಯೇಯವನ್ನು ಸಾರುವ ಈ






ಮಾನವ ಸರಪಳಿ ನಿರ್ಮಾಣಗೊಂಡಿದ್ದು ಇದೇ ಸೆಪ್ಟೆಂಬರ್ 15ರಂದು. ಆ ಮೂಲಕ ಕರ್ನಾಟಕದಲ್ಲಿ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಲಾಯಿತು.

ಇಷ್ಟು ಮಾತ್ರವಲ್ಲದೆ ಹೀಗೆ ಮಾನವ ಸರಪಳಿ ಹಾದುಹೋದ ದಾರಿಯ ಉದ್ದಕ್ಕೂ ಹತ್ತು ಲಕ್ಷ ಸಸಿಗಳನ್ನು ನೆಟ್ಟಿದ್ದು ಇನ್ನೊಂದು ವಿಶೇಷ. ಇಂತಹದೊಂದು ಪ್ರಯತ್ನದ ಮೂಲಕ ಪ್ರಜಾಪ್ರಭುತ್ವವನ್ನು ಸದಾ ಹಚ್ಚಹಸಿರಾಗಿಡುವಂತೆ ಮಾಡುವ ಕಳಕಳಿ ಕಾಣಿಸಿತು.

2007 ರಿಂದ ಸೆ.15ನ್ನು ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನವಾಗಿ ಆಚರಿಸಲಾಗುತ್ತಿದೆ. ಜಗತ್ತಿನಾದ್ಯಂತ ಪ್ರಜಾಪ್ರಭುತ್ವದ ಸಿದ್ಧಾಂತಗಳನ್ನು ಉತ್ತೇಜಿಸುವ ದೃಷ್ಟಿಯಿಂದ ವಿಶ್ವಸಂಸ್ಥೆ ಈ ಕ್ರಮವನ್ನು ಕೈಗೊಂಡಿದೆ. ಕಳೆದ ವರ್ಷ ಸಂವಿಧಾನದ ಪೀಠಿಕೆಯನ್ನು ಸಾಮೂಹಿಕವಾಗಿ ಓದುವ ಮೂಲಕ ಈ ದಿನವನ್ನು ಸರ್ಕಾರ ಆಚರಿಸಿತ್ತು. ಈ ವರ್ಷ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಬೃಹತ್ ಮಾನವ ಸರಪಳಿ ನಿರ್ಮಿಸುವಂತಹ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.



"ಏಕತೆಯ ಹೆಸರು ಹೇಳಿಕೊಂಡು ಬಹುತ್ವವನ್ನು ನಾಶಮಾಡುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿವೆ. ಪ್ರಜಾಪ್ರಭುತ್ವವೂ ಕೂಡ ಬಹುತ್ವವನ್ನು ಪ್ರತಿಪಾದಿಸುತ್ತದೆ. ಹಾಗಾಗಿ ಬಹುತ್ವವನ್ನು ನಾವೆಲ್ಲರೂ ರಕ್ಷಣೆ ಮಾಡಿದರೆ ಪ್ರಜಾಪ್ರಭುತ್ವವನ್ನೂ ರಕ್ಷಣೆ ಮಾಡಿದಂತೆ"

–ಸಿದ್ದರಾಮಯ್ಯ, ಮುಖ್ಯಮಂತ್ರಿಗಳು

'ಸಾಮಾಜಿಕ ಸಮಾನತೆ ಸಾಧ್ಯವಾದಾಗ ಮಾತ್ರ ಮಹಿಳೆಯರು, ಹಿಂದುಳಿದವರು, ದಲಿತರಿಗೆ ಸಮಾನ ಅವಕಾಶ ಸಿಗುತ್ತದೆ. ರಾಜಕೀಯ ಸ್ವಾತಂತ್ರ್ಯಕ್ಕೂ ಅರ್ಥ ಬರುತ್ತದೆ' ಎಂಬ ಸಂವಿಧಾನ ಶಿಲ್ಪಿ ಬಿ.ಆರ್.ಅಂಬೇಡ್ಕರ್ ಅವರ ಘೋಷವಾಕ್ಯವನ್ನು ಅಕ್ಷರಶಃ ಜಾರಿಗೆ ತರುವ ಕಳಕಳಿ ಕಾರ್ಯಕ್ರಮದ ಉದ್ದಕ್ಕೂ ಕಾಣಿಸಿದ್ದು ಸುಳ್ಳಲ್ಲ.

ವಿಧಾನಸೌಧದ ಮುಂಭಾಗದಲ್ಲಿ ಏರ್ಪಡಿಸಲಾದ ಪ್ರಧಾನ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು

# ನೋಂದಣಿಗೆ ಜನರ ಹುಮ್ಮಸ್ಸು

ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಪ್ರಯುಕ್ತ ರಾಜ್ಯಾದ್ಯಂತ ಮಾನವ ಸರಪಳಿ ನಿರ್ಮಿಸುವ ಉದ್ದೇಶದಿಂದ ಆನ್‌ಲೈನ್‌ನಲ್ಲಿಯೇ ನೋಂದಣಿ ಮಾಡಿಕೊಳ್ಳುವಂತೆ ಜನರಿಗೆ ಮುಂಚಿತವಾಗಿಯೇ ಸರ್ಕಾರ ಕರೆ ನೀಡಿತ್ತು. ಇದಕ್ಕೆ ರಾಜ್ಯದ ಎಲ್ಲಾ 31 ಜಿಲ್ಲೆಗಳಿಂದ ಅಭೂತಪೂರ್ವ ಪ್ರತಿಕ್ರಿಯೆ ವ್ಯಕ್ತವಾಗಿರುವುದು ವಿಶೇಷ. ಮಾನವ ಸರಪಳಿಯಲ್ಲಿ ಭಾಗವಹಿಸುವ ಎಲ್ಲರಿಗೂ ಅವರ ಭಾವಚಿತ್ರ ಹೊಂದಿರುವ ಪ್ರಮಾಣಪತ್ರವನ್ನು ನೀಡುವ ವ್ಯವಸ್ಥೆ ಮಾಡಲಾಗಿತ್ತು. ಹಾಗಾಗಿ ಜನರು ಸಹಜವಾಗಿ ಹುಮ್ಮಸ್ಸಿನಿಂದ ಪಾಲ್ಗೊಂಡರು ಎನ್ನುತ್ತಾರೆ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು.

ಹೀಗೆ ನೋಂದಣಿ ಮಾಡಿಕೊಂಡವರ ಸಂಖ್ಯೆ 25 ಲಕ್ಷ ಗಡಿ ದಾಟಿತ್ತು. ಆ ಪೈಕಿ ಧಾರವಾಡ ಜಿಲ್ಲೆ ಅಗ್ರ ಸ್ಥಾನವನ್ನು ಪಡೆಯಿತು. ಜಿಲ್ಲೆಯಲ್ಲಿ ಮೂರೂವರೆ ಲಕ್ಷಕ್ಕೂ ಅಧಿಕ ಸಂಖ್ಯೆಯ ಜನ ನೋಂದಣಿ ಮಾಡಿಕೊಂಡಿದ್ದರು.

ಎಲ್ಲ ಜಿಲ್ಲೆಗಳಲ್ಲೂ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಂವಿಧಾನ ಪೀಠಿಕೆ ಓದಿ ಮಾನವ ಸರಪಳಿ ನಿರ್ಮಾಣ ಮಾಡಲಾಯಿತು. ಇದರಲ್ಲಿ ಸಚಿವರು, ಜನಪ್ರತಿನಿಧಿಗಳು, ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದು, ಜೊತೆಗೆ ಪ್ರತಿ ತಾಲೂಕುಗಳಲ್ಲಿಯೂ ಕಾರ್ಯಕ್ರಮಗಳು ನಡೆದವು. ದಕ್ಷಿಣ ಕನ್ನಡದ ಜನರು ಸಮುದ್ರ ತೀರದಲ್ಲೇ ನಿಂತು ಮಾನವ ಸರಪಳಿ ನಿರ್ಮಿಸಿದ್ದು ವಿಶೇಷ.





ಬೃಹತ್ ಮಾನವ ಸರಪಳಿಗೆ ಕೊಂಡಿಯನ್ನು ಬೆಸೆದರು. ಅವರೊಂದಿಗೆ ಮುಖ್ಯ ವೇದಿಕೆಯಲ್ಲಿ ಕೈಜೋಡಿಸಿದವರು ಪೌರಕಾರ್ಮಿಕ ಮಹಿಳೆ ನಾಗಲಕ್ಷ್ಮಿ, ಮಂಜುಳಾ, ಲೈಂಗಿಕ ಅಲ್ಪಸಂಖ್ಯಾತ ಮಹಿಳೆ ಪ್ರಿಯಾಂಕಾ. ಕಾರ್ಯಕ್ರಮದ ರಾಯಭಾರಿಯಾಗಿ ನಿಂತವರು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಹರೇಕಳ ಹಾಜಬ್ಬ. ಎಲ್ಲರೂ ಏಕಕಾಲದಲ್ಲಿ 'ಜೈಹಿಂದ್, ಜೈ ಕರ್ನಾಟಕ, ಜೈ ಪ್ರಜಾಪ್ರಭುತ್ವ' ಎಂಬ ಘೋಷಣೆಯ ಮೂಲಕ ನೆರೆದಿದ್ದ ಅಷ್ಟೂ ಜನರಲ್ಲಿ ಉತ್ಸಾಹ ಮುಗಿಲುಮುಟ್ಟುವಂತೆ ಮಾಡಿದರು. ಇದೇ ಸಂದರ್ಭದಲ್ಲಿ ಸಂವಿಧಾನದ ಪ್ರಸ್ತಾವನೆಯನ್ನು ಓದಿ ಪ್ರತಿಜ್ಞಾವಿಧಿಯನ್ನು ಸ್ವೀಕರಿಸಲಾಯಿತು.




### ಐದು ವಿಭಾಗಗಳಲ್ಲಿ ಪ್ರಶಸ್ತಿ

ಪ್ರಜಾಪ್ರಭುತ್ವ ದಿನಾಚರಣೆಯ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡ ಕಲಾವಿದರನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಐದು ವಿಭಾಗಗಳಲ್ಲಿ ತಲಾ ಮೂರು ಪ್ರಶಸ್ತಿಗಳನ್ನು ನೀಡಲಾಯಿತು. ವೇಷ-ಭೂಷಣ ಮತ್ತು ವಿಶೇಷ ಸಂದೇಶ ಸಾರುವ ವಿಭಿನ್ನ ಪ್ರಯತ್ನ ಮಾಡಿದವರಿಗೆ ಈ ಪ್ರಶಸ್ತಿಗಳು ಸಂದಿತು.



ಈ ಇಡೀ ಕಾರ್ಯಕ್ರಮಕ್ಕೆ ಸಾಕ್ಷಿಯಾದವರು ರಾಜ್ಯ ಸರ್ಕಾರದ ಹಿರಿಯ ಅಧಿಕಾರಿಗಳು, ಶಾಲಾ ವಿದ್ಯಾರ್ಥಿಗಳು, ಕಲಾವಿದರು, ಆಟೋ ಚಾಲಕರು, ಲೈಂಗಿಕ ಅಲ್ಪಸಂಖ್ಯಾತರು, ಎಲ್ಲ ಇಲಾಖೆಗಳ ನೌಕರರು, ಪೌರ ಕಾರ್ಮಿಕರು ಮತ್ತು ಸಮಾಜದ ನಾನಾ ವಿಭಾಗಗಳಿಂದ ಬಂದ ಇನ್ನೂ ಅನೇಕ ಮಂದಿ. ಇಂತಹದೊಂದು ಅಭೂತಪೂರ್ವ ಕಾರ್ಯಕ್ರಮವನ್ನು ಆಯೋಜಿಸಿದ್ದು ರಾಜ್ಯದ ಸಮಾಜ ಕಲ್ಯಾಣ ಇಲಾಖೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆ ರಾಜ್ಯಾದ್ಯಂತ ಮಾನವ ಸರಪಳಿಗಾಗಿ ಸಮಾಜದ ವಿವಿಧಸ್ತರಗಳಿಂದ ಜನರನ್ನು ಒಗ್ಗೂಡಿಸುವಲ್ಲಿ ಮುಂಚೂಣಿಯಲ್ಲಿ ನಿಂತಿದ್ದವು.

"ನಮ್ಮ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಕಣ್ಣಿನಲ್ಲಿ ಪ್ರತಿಯೊಬ್ಬರೂ ಸಮಾನರು. ಅಂದರೆ ಈ ದೇಶದ ರಾಷ್ಟ್ರಪತಿಗೂ ಒಂದೇ ಮತ, ನನ್ನ ಜೊತೆಗೆ ನಿಂತಿರುವ ಈ ಪೌರಕಾರ್ಮಿಕ ಮಹಿಳೆಗೂ ಒಂದೇ ಮತ. ಪ್ರಜಾಪ್ರಭುತ್ವದ ಸೌಂದರ್ಯ ಅಡಗಿರುವುದೇ ಅಲ್ಲಿ. ಈ ವೇದಿಕೆಯಲ್ಲಿ ನಾವೆಲ್ಲರೂ ಸಮಾನರಂತೆ ನಿಲ್ಲಲು ಸಾಧ್ಯವಾಗುವಂತೆ ಮಾಡಿರುವುದು ಸಂವಿಧಾನ" ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದ ಮಾತು ಮಾರ್ಮಿಕವಾಗಿತ್ತು.

"ನಮ್ಮ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೂಲ ತತ್ವವೇ ವೈವಿಧ್ಯತೆಯಲ್ಲಿ ಏಕತೆ. ನಮ್ಮ ನಡುವಿನ ವೈವಿಧ್ಯತೆಯನ್ನು ನಾಶಮಾಡಿ ಏಕತೆಯನ್ನು ಸ್ಥಾಪಿಸಲು ಸಾಧ್ಯವಿಲ್ಲ. ಅಂತಹ ಅಜೆಂಡಾ ಹೊಂದಿದವರನ್ನು ಮೊದಲು ನಾವು ಸೋಲಿಸಬೇಕು. ಸಾಮಾಜಿಕ ನ್ಯಾಯ, ಸಮಾನತೆಯನ್ನು ವಿರೋಧಿಸುವವರ ಬಾಯಿಯಲ್ಲಿ ಏಕತೆಯ ಬಣ್ಣದ ಮಾತುಗಳು ಬರುತ್ತಿವೆ. ನಮ್ಮ ಹೋರಾಟವೇನಿದ್ದರೂ ಅಂತಹ ಶಕ್ತಿಗಳ ವಿರುದ್ಧ. ಆ ಕೆಲಸವನ್ನು ನಾವು ನಿರಂತರವಾಗಿ ಮಾಡುತ್ತೇವೆ," ಎಂದು ಮುಖ್ಯಮಂತ್ರಿಗಳು ಘೋಷಿಸಿದರು.

"ಇದೊಂದು ವಿಶ್ವಮಟ್ಟದ ಕಾರ್ಯಕ್ರಮವಾಗಿ ಮಾಡುವ ಕಾರ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯೂ ಸೇರಿದಂತೆ 30ಕ್ಕೂ ಹೆಚ್ಚು ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಯಶಸ್ವಿಯಾಗಿದ್ದಾರೆ. ಈ ಬೃಹತ್ ಮಾನವ ಸರಪಳಿಯ ಮೂಲಕ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಸಂದೇಶವನ್ನು ಜಗತ್ತಿಗೆ ಸಾರುವ ಕೆಲಸವನ್ನು ನಾವು ವಿಶಿಷ್ಟ ರೀತಿಯಲ್ಲಿ ಮಾಡಿದ್ದೇವೆ."

**–ಡಾ. ಎಚ್.ಸಿ.ಮಹದೇವಪ್ಪ**
ಸಮಾಜ ಕಲ್ಯಾಣ ಸಚಿವರು








**ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್:**

ಎರಡೂವರೆ ಸಾವಿರ ಕಿ.ಮೀ. ಉದ್ದದ, ಪ್ರತಿ ಕಿ.ಮೀ. ವ್ಯಾಪ್ತಿಯಲ್ಲಿ ಒಂದು ಸಾವಿರ ಜನರನ್ನು ಒಳಗೊಂಡ, 25 ಲಕ್ಷಕ್ಕೂ ಅಧಿಕ ಮಂದಿ ಏಕಕಾಲದಲ್ಲಿ ಭಾಗವಹಿಸಿದ ಈ ಮಾನವ ಸರಪಳಿ ಒಂದು ವಿಶ್ವ ದಾಖಲೆ. ಅದನ್ನು ಪರಿಶೀಲಿಸಲೆಂದೇ ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್ ದಾಖಲೆಯನ್ನು ಪರಿಶೀಲಿಸುವ ತಂಡ ಲಂಡನ್‌ನಿಂದ ಬೆಂಗಳೂರಿಗೆ ಆಗಮಿಸಿತ್ತು. ಮಾನವ ಸರಪಳಿಯ ಸಮಗ್ರ ವೀಕ್ಷಣೆಯ ದೃಷ್ಟಿಯಿಂದ ರಾಜ್ಯ ಸರ್ಕಾರವು ವಿಶ್ವ ಸುಧಾರಿತ ತಂತ್ರಜ್ಞಾನವನ್ನು ಬಳಸಿತ್ತು.

ಇದನ್ನೂ ಬಳಸಿಕೊಂಡು ವಿಶ್ವ ದಾಖಲೆ ತಂಡದ ಸದಸ್ಯರು ನಾನಾ ಹಂತಗಳಲ್ಲಿ ಪರಿಶೀಲನೆ ನಡೆಸಿ, ಈ ಮಾನವ ಸರಪಳಿಗೆ ಲಂಡನ್‌ನ ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್‌ಗೆ ಸೇರಿಸಿತು. ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್, ಸಮಾಜ ಕಲ್ಯಾಣ ಇಲಾಖೆ ಸಚಿವರಾದ ಡಾ.ಎಚ್.ಸಿ.ಮಹದೇವಪ್ಪ, ಗ್ರಾಮೀಣಾಭಿವೃದ್ಧಿ ಸಚಿವರಾದ ಪ್ರಿಯಾಂಕ ಖರ್ಗೆ, ಶಾಲಾ ಶಿಕ್ಷಣ ಸಚಿವರಾದ ಮಧು ಬಂಗಾರಪ್ಪ ಅವರಿಗೆ ವಿಶ್ವ ದಾಖಲೆ ಪ್ರಮಾಣಪತ್ರ ದೊರಕಿದೆ.

"ಶಾಲೆ–ಕಾಲೇಜುಗಳಲ್ಲಿ ಸಂವಿಧಾನದ ಪ್ರಸ್ತಾವನೆಗಳನ್ನು ಓದುವ ಕಾರ್ಯಕ್ರಮವನ್ನು ನಾವು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದೇವೆ. ಇದಕ್ಕೆ ಮುಖ್ಯ ಕಾರಣ ಜನರಲ್ಲಿ, ಅದರಲ್ಲೂ ಮುಖ್ಯವಾಗಿ ನಮ್ಮ ಮುಂದಿನ ತಲೆಮಾರಿನಲ್ಲಿ ಜಾತ್ಯತೀತ ಮನೋಭಾವ ಬೆಳೆಯಲಿ ಎಂಬುದು" ಎಂದು ಸಿದ್ದರಾಮಯ್ಯ ತಿಳಿಸಿದರು.

ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವಿಧಾನಸಭೆಯ ಉಪಾಧ್ಯಕ್ಷ ರುದ್ರಪ್ಪ ಲಮಾಣಿ, ಸಚಿವರಾದ ಪ್ರಿಯಾಂಕ ಖರ್ಗೆ, ಡಾ. ಎಚ್.ಸಿ.ಮಹದೇವಪ್ಪ, ಕೆ.ಜೆ.ಜಾರ್ಜ್, ದಿನೇಶ್ ಗುಂಡೂರಾವ್ ಮೊದಲಾದವರು ಮಾನವ ಸರಪಳಿಯನ್ನು ಕಟ್ಟುವಲ್ಲಿ ಮುಂಚೂಣಿಯಲ್ಲಿ ನಿಂತಿದ್ದರು. ಜೊತೆಗೆ ರಾಜ್ಯ ಸರ್ಕಾರದ 32 ಇಲಾಖೆಗಳ ಎಂಟು ಲಕ್ಷಕ್ಕೂ ಅಧಿಕ ಸಿಬ್ಬಂದಿ ಮಾನವ ಸರಪಳಿಯನ್ನು ಯಶಸ್ವಿಯಾಗಿಸಲು ಶ್ರಮಿಸಿದ್ದರು. ■




# ತಾಯಿ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಪ್ರಾಧಿಕಾರದ ಮೊದಲ ಸಭೆ...



ಮೈಸೂರು ದಸರಾ ಆಚರಣೆ ಸಮೀಪಿಸುತ್ತಿರುವ ಹೊತ್ತಿನಲ್ಲೇ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಮೊದಲ ಸಭೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಾಯಿ ಚಾಮುಂಡೇಶ್ವರಿ ಸನ್ನಿಧಿಯಲ್ಲೇ ನಡೆಸಿದ್ದಾರೆ.

ಚಾಮುಂಡಿ ಬೆಟ್ಟಕ್ಕೆ ಪ್ರವಾಸಿಗರು ಯಥೇಚ್ಛವಾಗಿ ಆಗಮಿಸುತ್ತಿರುವುದರಿಂದ ಕ್ಷೇತ್ರವನ್ನು ಮತ್ತಷ್ಟು ಮೂಲಭೂತ ಸೌಲಭ್ಯಗಳಿಂದ ಅಭಿವೃದ್ಧಿ ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಶ್ರೀ ಕ್ಷೇತ್ರದ ಅಭಿವೃದ್ಧಿಗಾಗಿ ಮತ್ತು ಬೆಟ್ಟದಲ್ಲಿರುವ ನ್ಯೂನತೆಗಳನ್ನು ಸರಿಪಡಿಸಲು ಪ್ರಾಧಿಕಾರವನ್ನು ಸರ್ಕಾರ ರಚನೆ ಮಾಡಿದೆ. ಸರ್ಕಾರವು ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಿರುವುದಕ್ಕೆ ವಿರೋಧ ಪಕ್ಷದ ನಾಯಕರುಗಳು ಕೂಡ ಒಳ್ಳೆಯ ಕೆಲಸ ಎಂದು ಶ್ಲಾಘಿಸಿದ್ದಾರೆ.

ಸರ್ಕಾರ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಿರುವುದಕ್ಕೆ ರಾಜಮಾತೆ ಪ್ರಮೋದಾದೇವಿಯವರು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದರು. ಆಗಸ್ಟ್ 22 ರಂದು ನ್ಯಾಯಾಲವು ತಡೆಯಾಜ್ಞೆಯನ್ನು ತೆರವುಗೊಳಿಸಿದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಮೊದಲ ಸಭೆಯನ್ನು ಸೆಪ್ಟೆಂಬರ್ 3 ರಂದು ನಡೆಸಿದರು.



ಸಮಯಕ್ಕೆ ಸರಿಯಾಗಿ ಕೆಲಸ ಮಾಡದಿದ್ದರೆ ನಾನು ಮುಲಾಜಿಲ್ಲದೆ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಎಚ್ಚರಿಸಿದರು.

ತಾಯಿ, ಶಕ್ತಿ ದೇವತೆ ಚಾಮುಂಡಿ ದೇವಿ ಬಗ್ಗೆ ಕೋಟ್ಯಂತರ ಮಂದಿಗೆ ಅಪಾರ ಭಕ್ತಿ, ಶ್ರದ್ಧೆ, ನಂಬಿಕೆ ಇದೆ. ದೇಶದ ಮೂಲೆ ಮೂಲೆಗಳಿಂದ ಭಕ್ತರು ಬರುತ್ತಾರೆ. ಇವರೆಲ್ಲರಿಗೂ ಅಗತ್ಯ ಸವಲತ್ತುಗಳನ್ನು ಒದಗಿಸಬೇಕು ಎಂದು ಸ್ಪಷ್ಟ ಸೂಚನೆ ನೀಡಿದರು. ಹಾಗೆಯೇ ಕೊಪ್ಪಳ ಹುಲಿಗಮ್ಮ ದೇವಸ್ಥಾನ ಮತ್ತು ಘಾಟಿ ಸುಬ್ರಹ್ಮಣ್ಯ ದೇವಸ್ಥಾನಗಳ ಹೆಚ್ಚಿನ ಅಭಿವೃದ್ಧಿಗಾಗಿ ಪ್ರಾಧಿಕಾರ ರಚನೆ ಬಗ್ಗೆಯೂ ಬೇಡಿಕೆ ಬಂದಿದ್ದು, ಈ ಬಗ್ಗೆಯೂ ಸರ್ಕಾರ ತೀರ್ಮಾನ ತೆಗೆದುಕೊಳ್ಳಲಿದೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವರಾದ ಹೆಚ್.ಸಿ.ಮಹದೇವಪ್ಪ, ಪ್ರವಾಸೋದ್ಯಮ ಸಚಿವರಾದ ಎಚ್.ಕೆ.ಪಾಟೀಲ್, ಪಶು ಸಂಗೋಪನಾ ಸಚಿವರಾದ ಕೆ.ವೆಂಕಟೇಶ್, ಮುಜರಾಯಿ ಸಚಿವರಾದ ರಾಮಲಿಂಗಾರೆಡ್ಡಿ, ಶಾಸಕರಾದ ಯತೀಂದ್ರ ಸಿದ್ದರಾಮಯ್ಯ, ರವಿಶಂಕರ್, ಡಾ.ತಿಮ್ಮಯ್ಯ, ಹರೀಶ್ ಗೌಡ, ಜಿ.ಟಿ.ದೇವೇಗೌಡ, ವಿವೇಕಾನಂದ ಸೇರಿ ಹಲವು ಗಣ್ಯರು ಉಪಸ್ಥಿತರಿದ್ದರು.

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಪ್ರಥಮ ಸಭೆಯ ನಂತರ

ಈ ಪ್ರಾಧಿಕಾರದ ಮೊದಲ ಸಭೆಯನ್ನು ನಡೆಸಿದ ಮುಖ್ಯಮಂತ್ರಿ ಅವರು ಹಲವು ನಿರ್ಣಯಗಳನ್ನು ತೆಗೆದುಕೊಂಡರಲ್ಲದೆ, ಮೊದಲ ಸಭೆಯ ನಿರ್ಣಯಗಳನ್ನು ಚಾಚೂ ತಪ್ಪದೆ, ಗುಣಮಟ್ಟದಿಂದ ನಿರ್ವಹಿಸುವಂತೆ ಸೂಚನೆ ನೀಡಿದರು. ಹಾಗೆಯೇ ತಾಯಿ ಸನ್ನಿಧಿಯಲ್ಲಿ ಗುಣಮಟ್ಟದ ವ್ಯವಸ್ಥೆ ಕಲ್ಪಿಸದಿದ್ದರೆ ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂಬ ಎಚ್ಚರಿಕೆಯನ್ನು ನೀಡಿದರು.

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಮೊದಲ ಸಭೆಯನ್ನು ತಾಯಿ ಸನ್ನಿಧಿಯಲ್ಲೇ ನಡೆಸಿ ಪ್ರಸ್ತಾವಿಕವಾಗಿ ಮಾತನಾಡಿದ ಅವರು ಹಿಂದೆಯೂ ಸಮಿತಿ ಇತ್ತು. ಆದರೆ ಪ್ರಾಧಿಕಾರ ರಚನೆಯಿಂದಾಗಿ ಅಭಿವೃದ್ಧಿಗೆ ಹೆಚ್ಚಿನ ಅಧಿಕಾರ ಮತ್ತು ಅವಕಾಶ ಒದಗಿದಂತಾಗಿದೆ ಎಂದು ಅಭಿಪ್ರಾಯಪಟ್ಟರು. ಇಲ್ಲಿಗೆ ಬರುವ ಭಕ್ತರಿಗೆ ಹೆಚ್ಚಿನ ಮತ್ತು ಉನ್ನತ ಮಟ್ಟದ ಆರೋಗ್ಯಕರ ಸವಲತ್ತು ಹಾಗೂ ಸೌಲಭ್ಯಗಳನ್ನು ಒದಗಿಸುವುದು ನಮ್ಮ ಗುರಿಯಾಗಿದೆ. ಶ್ರೀ ಕ್ಷೇತ್ರ ಹಾಗೂ ದೇವಸ್ಥಾನದ ಸಂಪ್ರದಾಯ, ಚರಿತ್ರೆ ಮತ್ತು ಘನತೆಯನ್ನು ಕಾಪಾಡುವ ಜೊತೆಗೆ ಕ್ಷೇತ್ರವನ್ನು ಉನ್ನತೀಕರಿಸಬೇಕು ಎಂದರು.

ಪ್ರಾಧಿಕಾರ ವ್ಯವಸ್ಥಿತವಾಗಿ ನಡೆಯಬೇಕು. ಕಾಲ ಕಾಲಕ್ಕೆ ಸಭೆಗಳು ನಡೆದು ಹೆಚ್ಚಿನ ಶ್ರಮ ಶುಚಿತ್ವಕ್ಕೆ ಹಾಕಬೇಕು. ಕಸವನ್ನು ಆಗ್ಗಿಂದಾಗೇ ತೆರವುಗೊಳಿಸಬೇಕು. ವಾಹನಗಳ ಸಂಖ್ಯೆಯೂ ಹೆಚ್ಚಾಗಿದೆ. ವಾಹನ ನಿಲುಗಡೆಗೆ ಇನ್ನಷ್ಟು ಸುಸಜ್ಜಿತ ವ್ಯವಸ್ಥೆ ಕಲ್ಪಿಸಬೇಕಿದೆ ಎಂಬ ಸಲಹೆ ನೀಡಿದರು. ಶ್ರೀ ಕ್ಷೇತ್ರದ ಅಭಿವೃದ್ಧಿಗೆ ಹಣದ ತೊಂದರೆ ಇಲ್ಲ. ಕೇಳಿದಾಗಲೆಲ್ಲಾ ಹಣವನ್ನು ಒದಗಿಸಲಾಗುತ್ತಿದ್ದರೂ ಕೆಲಸಗಳು ಮಾತ್ರ ನಿರೀಕ್ಷಿತ ವೇಗದಲ್ಲಿ ನಡೆಯುತ್ತಿಲ್ಲ. ಇದನ್ನು ನಾನು ಸಹಿಸಲ್ಲ.






ನಡೆಸಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಅವರು ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಆಗಬೇಕಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಮಾಸ್ಟರ್ ಪ್ಲಾನ್ ರೂಪಿಸುವಂತೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಚಾಮುಂಡೇಶ್ವರಿ ಪ್ರಾಧಿಕಾರವನ್ನು ಸರ್ಕಾರ ರಚಿಸಿದ್ದು, ಹಿಂದೆ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯಡಿ ಕಾರ್ಯನಿರ್ವಾಹಕ ಅಧಿಕಾರಿಗಳು ದೇವಸ್ಥಾನದ ಅಭಿವೃದ್ಧಿ ಮತ್ತು ಭಕ್ತಾದಿಗಳಿಗೆ ಸೌಲಭ್ಯಗಳನ್ನು ಒದಗಿಸುವ ಕಾರ್ಯ ಮಾಡುತ್ತಿದ್ದರು. ಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರವೂ ರಚನೆಯಾಗಿದೆ. ಹುಲಿಗೆಮ್ಮ ದೇವಸ್ಥಾನ, ಮಹದೇಶ್ವರ ದೇವಸ್ಥಾನ, ಸವದತ್ತಿಯ ಎಲ್ಲಮ್ಮ, ಘಾಟಿ ಸುಬ್ರಹ್ಮಣ್ಯ ದೇವಸ್ಥಾನಕ್ಕೂ ಪ್ರಾಧಿಕಾರವನ್ನು ಸರ್ಕಾರ ರಚಿಸಿದೆ. ವಿಶ್ವವಿಖ್ಯಾತ ದಸರಾ ಹಬ್ಬದ ಜೊತೆಗೆ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಸಾವಿರಾರು ಜನ ಭಕ್ತಾದಿಗಳು ಶುಕ್ರವಾರ, ಶನಿವಾರ ಭಾನುವಾರಗಳಂದು ಭೇಟಿ ನೀಡುತ್ತಾರೆ. ಶ್ರೀಕ್ಷೇತ್ರದಲ್ಲಿ ಬಹಳಷ್ಟು ಅಭಿವೃದ್ಧಿ ಕಾರ್ಯಗಳಾಗಿವೆ. ಅವುಗಳ ಪೈಕಿ ಕೆಲವು ಪೂರ್ಣಗೊಂಡಿದ್ದರೆ ಕೆಲವು ಪೂರ್ಣಗೊಂಡಿಲ್ಲ ಎಂದರು.

**ಚಾಮುಂಡಿ ಕ್ಷೇತ್ರ ಮತ್ತು ಬೆಟ್ಟಕ್ಕೆ ಸೇರಿದ 23 ದೇವಾಲಯಗಳ ಅಭಿವೃದ್ಧಿ**

ಪ್ರಾಧಿಕಾರವು ಚಾಮುಂಡಿ ಕ್ಷೇತ್ರ ಮತ್ತು ಬೆಟ್ಟಕ್ಕೆ ಸೇರಿದ 23 ದೇವಾಲಯಗಳ ಅಭಿವೃದ್ಧಿ, ಹಾಗೂ ಭಕ್ತಾದಿಗಳಿಗೆ ಸೌಲಭ್ಯಗಳನ್ನು ಒದಗಿಸಿಕೊಡಬೇಕು ಎಂಬ ಉದ್ದೇಶದಿಂದ ಪ್ರಾಧಿಕಾರ ರಚನೆಯಾಗಿದೆ. ಹಿಂದೆ ಬಸ್ ನಿಲ್ದಾಣ, ವಾಹನ ನಿಲುಗಡೆ ಮತ್ತು ಮಳಿಗೆಗಳ ನಿರ್ಮಾಣವಾಗಿದೆ. ಹಿಂದೆ ಕೈಗೆತ್ತಿಕೊಂಡಿರುವ ಕಾರ್ಯಕ್ರಮಗಳನ್ನು ಕೂಡಲೇ ಪೂರ್ಣಗೊಳಿಸಲು ಸೂಚನೆ ನೀಡಲಾಗಿದೆ. 2018 ರಲ್ಲಿ ಕುಡಿಯುವ ನೀರಿನ ಕಾಮಗಾರಿ ಮಂಜೂರಾಗಿದ್ದರೂ ಇನ್ನೂ ಪೂರ್ಣವಾಗಿಲ್ಲ. ಅದನ್ನು ಕೂಡಲೇ ಪೂರ್ಣಗೊಳಿಸಲು ನಗರಾಭಿವೃದ್ಧಿ ಪ್ರಾಧಿಕಾರದವರಿಗೆ ಸೂಚನೆ ನೀಡಲಾಗಿದೆ. ಕಸ ವಿಲೇವಾರಿ ಕಾಮಗಾರಿಯ ಸಿವಿಲ್ ಕಾಮಗಾರಿಗಳು ಪೂರ್ಣವಾಗಿದ್ದು, ಈ ತಿಂಗಳೊಳಗೆ ವಿದ್ಯುದ್ದೀಕರಣಗೊಳಿಸಿ ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಬೇಕು. ಸ್ವಚ್ಛತೆಗೆ ಗಮನ ಹರಿಸಬೇಕೆಂದು ಸೂಚಿಸಲಾಗಿದೆ. ಚಾಮುಂಡಿ ದೇವಸ್ಥಾನ ಮಾತ್ರವಲ್ಲದೇ ಎಲ್ಲಾ ದೇವಸ್ಥಾನಗಳಲ್ಲಿಯೂ ಸ್ವಚ್ಛತೆಯನ್ನು ಕಾಪಾಡಲು ತಿಳಿಸಲಾಗಿದೆ ಎಂದರು.

**ಪ್ರತಿ ವರ್ಷ ದೇವಾಲಯಯದ ಆದಾಯ ಹೆಚ್ಚಳ**

ಪ್ರಾಧಿಕಾರದಲ್ಲಿ ಒಟ್ಟು 169.22 ಕೋಟಿ ಲಭ್ಯವಿದ್ದು, ದೇವಾಲಯದ ಉಳಿತಾಯ ಖಾತೆಯಲ್ಲಿ 20.24 ಕೋಟಿ ರೂ.ಗಳು ಲಭ್ಯವಿದೆ.
2023-24 ರಲ್ಲಿ 49.64 ಕೋಟಿ ರೂ.ಗಳ ಆದಾಯ 28.18 ಕೋಟಿ ನಿವ್ವಳ ಆದಾಯ ಬಂದಿದೆ. ಜುಲೈ ಕೊನೆಯವರೆಗೆ 17.4 ಕೋಟಿ ಆದಾಯ



ಬಂದಿದ್ದು, 6.97 ಕೋಟಿ ವೆಚ್ಚವಾಗಿದೆ. ಪ್ರತಿ ವರ್ಷ ಆದಾಯ ಹೆಚ್ಚಾಗುತ್ತಿದೆ. ಅಂದರೆ ಭೇಟಿ ನೀಡುವ ಭಕ್ತಾದಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಚಾಮುಂಡಿ ಬೆಟ್ಟದಲ್ಲಿರುವ ದೇವಿಕೆರೆ, ನಂದಿ ಪ್ರತಿಮೆ ಅಭಿವೃದ್ಧಿಗೆ ತೀರ್ಮಾನ ಮಾಡಲಾಗಿದೆ. ಶಾಸಕರು ಹಾಗೂ ಸಚಿವರು ವ್ಯಕ್ತ ಮಾಡಿರುವ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ಪ್ರಾಧಿಕಾರ ಕೆಲಸ ಮಾಡುತ್ತದೆ ಎಂದು ತಿಳಿಸಿದರು.

ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿ ರೋಪ್ ವೇ ಬಗ್ಗೆ ಇಂದಿನ ಸಭೆಯಲ್ಲಿ ಚರ್ಚೆಯಾಗಿಲ್ಲ. ಪರಿಸರವಾದಿಗಳು ಈ ಬಗ್ಗೆ ವಿರೋಧ ವ್ಯಕ್ತಪಡಿಸಿದ್ದರಿಂದ ಅದನ್ನು ಹಿಂದೆಯೇ ಸ್ಥಗಿತಗೊಳಿಸಲಾಗಿದೆ ಎಂದರು.

### ವಸ್ತ್ರ ಸಂಹಿತೆ ಇಲ್ಲ

ಬೆಟ್ಟಕ್ಕೆ ಬರುವ ಮೆಟ್ಟಿಲುಗಳನ್ನು ಅಭಿವೃದ್ಧಿ ಪಡಿಸಲಾಗುವುದು ಎಂದ ಮುಖ್ಯಮಂತ್ರಿಗಳು ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡುವವರಿಗೆ ಯಾವುದೇ ವಸ್ತ್ರ ಸಂಹಿತೆಯನ್ನು ಜಾರಿ ಮಾಡಿಲ್ಲ. ಎಲ್ಲಾ ಜಾತಿ, ಧರ್ಮದವರು ದೇವಸ್ಥಾನಕ್ಕೆ ಬರಬಹುದು ಎಂದರು.

### ಚಾಮುಂಡಿಬೆಟ್ಟ ಪ್ರದೇಶದಲ್ಲಿ ಅಪರಾಧ ತಡೆಗೆ ಟಾಸ್ಕ್ ಫೋರ್ಸ್ ರಚನೆ

ದೇವಾಲಯಗಳಲ್ಲಿ ಅಗತ್ಯವಿರುವೆಡೆ ಸಿಸಿಟಿವಿ ಅಳವಡಿಸಬೇಕೆಂದು ತೀರ್ಮಾನಿಸಿ, ಯೂನಿಯನ್ ಬ್ಯಾಂಕ್‌ನವರು ಸಿಎಸ್‌ಆರ್ ನಿಧಿಯಿಂದ ಸಿಸಿಟಿವಿಗಳ ಅಳವಡಿಕೆಗೆ ಸಹಕಾರ ನೀಡಲಿದ್ದಾರೆ. ದೇವಸ್ಥಾನದ ಸುತ್ತಮುತ್ತಲಿನ ದೀಪದ ವ್ಯವಸ್ಥೆ ಜೊತೆಗೆ ಈ ಪ್ರದೇಶದಲ್ಲಿ ಅಪರಾಧಗಳನ್ನು ನಿಗ್ರಹಿಸಲು ಒಂದು ಟಾಸ್ಕ್ ಫೋರ್ಸ್ ಅನ್ನು ರಚನೆ ಮಾಡಲಾಗುವುದು ಎಂದರು.

### ಚಾಮುಂಡಿ ಬೆಟ್ಟವನ್ನು ಪ್ಲಾಸ್ಟಿಕ್ ಮುಕ್ತಗೊಳಿಸಲು ಕ್ರಮ

ಚಾಮುಂಡಿ ಬೆಟ್ಟದ ಮೇಲೆ ಧೂಮಪಾನ, ಮದ್ಯಪಾನ, ಗುಟ್ಕಾ, ಪಾನ್‌ಗಳನ್ನು ಸಂಪೂರ್ಣ ನಿಷೇಧಿಸಲಾಗಿದೆ. ಬೆಟ್ಟದ ಪ್ರದೇಶವನ್ನು ಪ್ಲಾಸ್ಟಿಕ್ ಮುಕ್ತ ಮಾಡಲು ತೀರ್ಮಾನಿಸಲಾಗಿದೆ. ಪ್ರಸಾದ ಯೋಜನೆಯನ್ನು ಕೇಂದ್ರ ಸರ್ಕಾರ ಹಾಗೂ ಪ್ರವಾಸೋದ್ಯಮ ಇಲಾಖೆಯಿಂದ ಜಾರಿಗೊಳಿಸಲು ಅನುಮೋದನೆ ನೀಡಲಾಗಿದ್ದು, ಈ ಯೋಜನೆಗೆ ಹೆಚ್ಚುವರಿಯಾಗಿ ಬೇಕಾಗುವ 11 ಕೋಟಿ ರೂ.ಗಳನ್ನು ಚಾಮುಂಡೇಶ್ವರಿ ಅಭಿವೃದ್ಧಿ ಪ್ರಾಧಿಕಾರದಿಂದ ಭರಿಸಲಾಗುವುದು. ದೇವಾಲಯದ ಒಳಗೆ ಛಾಯಾಗ್ರಹಣವನ್ನು ನಿಷೇಧಿಸಲಾಗಿದ್ದು, ಮೊಬೈಲ್‌ಗಳನ್ನು ಬಂದ್ ಮಾಡಿಕೊಳ್ಳುವ ಆದೇಶ ನೀಡಲಾಗುವುದು ಎಂದರು.

### ಐದು ದೇವಾಲಯ ಸಮೂಹದ ಜೀರ್ಣೋದ್ಧಾರ

ಪ್ರಸನ್ನ ಕೃಷ್ಣ ಸ್ವಾಮಿ ದೇವಾಲಯ, ಗಾಯತ್ರಿಯಮ್ಮನವರ ದೇವಾಲಯ, ಭುವನೇಶ್ವರಿ ಅಮ್ಮನವರ ದೇವಾಲಯ, ಕೋಟೆ ಆಂಜನೇಯ ದೇವಾಲಯ, ವರಾಹ ಸ್ವಾಮಿ ದೇವಾಲಯಗಳ ಜೀರ್ಣೋದ್ಧಾರ ಕಾರ್ಯವನ್ನು ಕೈಗೊಳ್ಳಲಾಗುವುದು. ಇಲ್ಲಿ ಕರ್ತವ್ಯ ನಿರ್ವಹಿಸುವ ಖಾಯಂ ಸಿಬ್ಬಂದಿಗಳಿಗೆ ವೈದ್ಯಕೀಯ ಸೌಲಭ್ಯ ಹಾಗೂ ಅವರ ಮಕ್ಕಳಿಗೆ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಲು ತೀರ್ಮಾನಿಸಲಾಗಿದೆ ಎಂದರು.



### ಚಾಮುಂಡೇಶ್ವರಿ ಕ್ಷೇತ್ರವನ್ನು ಆಕರ್ಷಕವಾಗಿಸಿ ಹೆಚ್ಚು ಸವಲತ್ತು ನೀಡಲು ತೀರ್ಮಾನ

ಚಾಮುಂಡಿಬೆಟ್ಟ ಕ್ಷೇತ್ರವನ್ನು ಹೆಚ್ಚು ಆಕರ್ಷಣೀಯವಾಗಿ ಮಾಡುವ ಜೊತೆಗೆ ಹೆಚ್ಚಿನ ಸವಲತ್ತುಗಳನ್ನು ಒದಗಿಸಲು ತೀರ್ಮಾನಿಸಲಾಗಿದೆ. ಇಲ್ಲಿನ ದಾಸೋಹ ಭವನದ ವ್ಯವಸ್ಥೆಗಳನ್ನು ಸುಧಾರಿಸಿ, ಭಕ್ತಾದಿಗಳಿಗೆ ಶುಚಿ ರುಚಿಯಿರುವಂತಹ ಊಟ ವ್ಯವಸ್ಥೆ ಮಾಡಲು ತೀರ್ಮಾನಿಸಲಾಗಿದೆ. ಚಾಮುಂಡಿ ಕ್ಷೇತ್ರದ ಪ್ರಾಧಿಕಾರದಲ್ಲಿ 169 ಕೋಟಿ ಖಾಯಂ ಠೇವಣಿ ಇದ್ದು, ಇದರ ಆದಾಯದಲ್ಲಿ ಈ ಎಲ್ಲ ವೆಚ್ಚಗಳನ್ನು ಭರಿಸಲಾಗುವುದು ಎಂದರು.

### ದೇವಸ್ಥಾನದ ಆಸ್ತಿಗಳ ಸರ್ವೆ

ದೇವಸ್ಥಾನದ ಭೂಮಿ ಒತ್ತುವರಿ ಆಗಿರುವ ಸಾಧ್ಯತೆಯಿರುವುದರಿಂದ, ಅವುಗಳ ಸರ್ವೆ ಮಾಡಲು ತಿಳಿಸಲಾಗಿದ್ದು, ಸರ್ವೆ ನಡೆಸಿದ ವರದಿಯನ್ನು ಪ್ರಾಧಿಕಾರದ ಮುಂದಿನ ಸಭೆಯಲ್ಲಿ ಮಂಡಿಸಲು ಸೂಚಿಸಲಾಗಿದೆ ಎಂದು ತಿಳಿಸಿದರು.

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಈ ಮೊದಲ ಸಭೆಯಲ್ಲಿ ಪ್ರಮುಖವಾಗಿ ಚಾಮುಂಡಿ ಕ್ಷೇತ್ರ ಮತ್ತು ಬೆಟ್ಟಕ್ಕೆ ಸೇರಿದ 23 ದೇವಾಲಯಗಳ ಅಭಿವೃದ್ಧಿ ಜೊತೆಗೆ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಕಾರ್ಯಗಳಿಗೆ ಮಾಸ್ಟರ್ ಪ್ಲಾನ್ ರೂಪಿಸಲು ಆದೇಶ ಸಿಕ್ಕಿರುವುದರಿಂದ ಮುಂದಿನ ದಿನಗಳಲ್ಲಿ ತಾಯಿ ಚಾಮುಂಡೇಶ್ವರಿ ಕ್ಷೇತ್ರವು ಮತ್ತಷ್ಟು ಅಭಿವೃದ್ಧಿ ಹೊಂದುವ ಮೂಲಕ ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರನ್ನು ಆಕರ್ಷಿಸಲಿದೆ.





# ಶ್ರೀ ಕೃಷ್ಣರಾಜೇಂದ್ರ ಗರಡಿಯಲ್ಲಿ ಮಿಂಚಿದ ಪೈಲ್ವಾನರು

ವೇಮಗಲ್ ಸೋಮಶೇಖರ್

**ದಸರಾ ಪ್ರಯುಕ್ತ ಮೈಸೂರಿನ ಪಾರಂಪರಿಕ ಕ್ರೀಡೆಯಾದ ಕುಸ್ತಿ ಕಲೆಯಲ್ಲಿ ತೊಡಗಿದ್ದ ಹಲವು ಪೈಲ್ವಾನರುಗಳನ್ನು ಈ ಲೇಖನದ ಮೂಲಕ ಸ್ಮರಿಸಿಕೊಳ್ಳಲಾಗಿದೆ.**

**ಕು**ಸ್ತಿ, ಗರಡಿ... ಎಂದ ಕೂಡಲೇ ನಮಗೆ ಮೈಸೂರು ರಾಜಮನೆತನ ನೆನಪಾಗುತ್ತದೆ. 'ಜಂಬೂಸವಾರಿ ಮತ್ತು ಕುಸ್ತಿ ಇವೆರೆಡು ಮೈಸೂರು ದಸರಾದ ವಿಶೇಷತೆ. ಮೈಸೂರು ದಸರಾದಲ್ಲಿ ರಾಜ ಪರಂಪರೆಯ ಪ್ರತೀಕವಾದ ಕುಸ್ತಿಗೆ ಹೆಚ್ಚು ಮಹತ್ವವಿದೆ. ಹಾಗಾಗಿ ಇಂದಿಗೂ ಕೂಡ ಮೈಸೂರು ದಸರಾ ಸಂದರ್ಭದಲ್ಲಿ ರಾಜ ಪರಂಪರೆಯ ಕುಸ್ತಿ ಪಂದ್ಯಾವಳಿಯನ್ನು ನಡೆಸಲಾಗುತ್ತದೆ. ಕುಸ್ತಿಯಲ್ಲಿ ಗೆದ್ದವರಿಗೆ ಬೆಳ್ಳಿ ಗದೆಯನ್ನು ನೀಡಿ ಗೌರವಿಸಲಾಗುತ್ತದೆ.

ಕುಸ್ತಿಕಲೆ ಪುರುಷ ಕ್ರೀಡೆಗಳಲ್ಲೇ ಅತ್ಯಂತ ಶ್ರೇಷ್ಠವೆಂದು ಪರಿಗಣಿಸಲ್ಪಟ್ಟಿದೆ. ಕುಸ್ತಿ ಶರೀರದ ಎಲ್ಲಾ ಭಾಗಗಳಿಗೂ ವ್ಯಾಯಾಮ ಒದಗಿಸಿ ದೇಹವನ್ನು ಸಮ ಪ್ರಮಾಣದಲ್ಲಿ ವೃದ್ಧಿಗೊಳಿಸಿ ಅಂದವಾಗಿ ಕಾಣುವಂತೆ ಮೂಡಿಸುತ್ತದೆ. ಜೊತೆಗೆ ಧೈರ್ಯದಿಂದ ಮುನ್ನುಗ್ಗುವ ಶಕ್ತಿಯನ್ನು ಕೊಟ್ಟು ಆತ್ಮ ವಿಶ್ವಾಸವನ್ನು ಬಲಪಡಿಸುತ್ತದೆ. ಯುವಕರು ಮತ್ತು ಆಸಕ್ತರು ಗರಡಿ ಮನೆಗಳಲ್ಲಿ ಕಸರತ್ತು ಮಾಡಿ ಆರೋಗ್ಯದಿಂದ ದೃಢಕಾಯರಾಗಿ ಬ್ರಹ್ಮಚರ್ಯವನ್ನು ಕಾಪಾಡಿಕೊಳ್ಳಲು ಕುಸ್ತಿ ಪಂದ್ಯಗಳ ಮೂಲಕ ಪ್ರೋತ್ಸಾಹ ಕೊಟ್ಟಂತಾಗುವುದೆಂದು ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಕುಸ್ತಿ ಕಲೆ ಬಗ್ಗೆ ಬಹು ಕಾಳಜಿ ವಹಿಸಿದ್ದರು.  ಕುಸ್ತಿಪಟು ಅಖಾಡಕ್ಕೆ ಇಳಿಯುವುದಕ್ಕೆ ಮೊದಲು  ಗುರುವಿನ ಕಾಲಿಗೆ ಬೀಳುವ ಪದ್ಧತಿ ಇಂದಿಗೂ ಗರಡಿಮನೆಗಳಲ್ಲಿ

ರೂಢಿಯಲ್ಲಿದೆ. ಹೀಗೆ ಗುರುಭಕ್ತಿಯನ್ನು ಹೆಚ್ಚಿಸುವ ಕ್ರೀಡೆ ಈ ಕುಸ್ತಿ ಕಲೆ.

ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 25ನೇ ವರ್ಷ ವರ್ಧಂತಿಯ ಸಮಯವಾದ 1908ರ ಜೂನ್ ನಾಲ್ಕರಂದು ಪೊಲೀಸ್ ಇಲಾಖೆಯ ಗರಡಿಯನ್ನು ಆಗಿನ ಪೊಲೀಸ್ ಸೂಪರಿಂಟೆಂಡೆಂಟ್ ಜಹಿರುದ್ದೀನ್ ಮೆಕ್ಕೆ ಅವರು ಜಗನ್ಮೋಹನ ಬಂಗಲೆಯಲ್ಲಿ ಉದ್ಘಾಟಿಸಿದರು. ಇದಕ್ಕೆ 'ಶ್ರೀ ಕೃಷ್ಣರಾಜೇಂದ್ರ ಪೊಲೀಸ್ ಗರಡಿ' ಎಂದು ಹೆಸರಿಟ್ಟರು. ಈ ನಂತರ ಕತ್ತಿವರಸೆ, ದೊಣ್ಣೆವರಸೆ, ಇಂಗ್ಲಿಷ್ ಕಸರತ್ತು, ಬೈಸಿಕಲ್ ಮೇಲೆ ಆಫೀಸರ್‌ಗಳ ಓಟದ ಪಂದ್ಯವೂ ನಡೆಯಿತು. ಕೊನೆಯಲ್ಲಿ ಬಹುಮಾನ ವಿನಿಯೋಗ ಕಾರ್ಯಕ್ರಮ ಕೂಡ ನಡೆಯಿತು.



**ಕುಸ್ತಿ ಪಂದ್ಯಾವಳಿ**

ಕಂಠೀರವ ನರಸರಾಜ ಒಡೆಯರ ಕಾಲದಿಂದಲೂ ಪ್ರೋತ್ಸಾಹ ದೊರೆತು ನಡೆಯುತ್ತಾ ಬಂದಿದ್ದ ಕುಸ್ತಿ ವ್ಯವಸ್ಥೆಯು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಾಲದಲ್ಲಿ ಮತ್ತಷ್ಟು ಬೆಳೆಯಲು ಸಾಧ್ಯವಾಯಿತು. ನಾಲ್ವಡಿಯವರ ಸೋದರ ಮಾವ ಗೋಪಾಲ ರಾಜೇ ಅರಸ್ ಅವರು ಸ್ವತಃ ಮಲ್ಲರಾಗಿದ್ದ ಕಾರಣ ಕುಸ್ತಿ ಪಂದ್ಯಾವಳಿಗೆ ತೀರ್ಪುಗಾರರಾಗಿದ್ದು ಕುಸ್ತಿ ಪಂದ್ಯಗಳನ್ನು ಬಹಳ ಚತುರತೆಯಿಂದ ನಿರ್ವಹಿಸುತ್ತಿದ್ದರು.

ನಾಲ್ವಡಿಯವರ ಸಮ್ಮುಖದಲ್ಲಿ ಜಗನ್ಮೋಹನ ಬಂಗಲೆಯಲ್ಲಿ 1911ರ ಜೂನ್‌ನಲ್ಲಿ ನಿರಂತರ ಮೂರು ದಿನಗಳು ಭಾರಿ ಕುಸ್ತಿ ಪಂದ್ಯಾವಳಿ ನಡೆಯಿತು. ಈ ಕುಸ್ತಿಯಲ್ಲಿ ಕಣಕ್ಕಿಳಿದ ಪೈಲ್ವಾನರೆಂದರೆ ಕುಸ್ತಿ ಭುಜಬಲ ಭೀಮಣ್ಣನೆಂದು ಪ್ರಸಿದ್ಧಿ ಪಡೆದಿದ್ದ ಪೈ: ದೊಡ್ಡ ತಿಮ್ಮಯ್ಯ, ಕುಂಬಾರಗೇರಿ ಹಜರತ್ ಫಕೀರ್ ಅಹಮದ್ ಸಾಹೇಬರ ಶಿಷ್ಯನಾದ ಕುಸ್ತಿ ಚತುರ ಪಾಪಯ್ಯ, ದೊಡ್ಡ ಒಕ್ಕಲಗೇರಿ ಉಸ್ತಾದ್, ಈ ಮಾರಾಮಾರಿ ಕುಸ್ತಿಯಲ್ಲಿ ಪಾಪಯ್ಯ ಜಯಶೀಲರಾದರು. ಇವರನ್ನು ನಾಲ್ವಡಿಯವರು ಅರಮನೆಗೆ ಕರೆಸಿ, ಬೆಳ್ಳಿ ರೂಪಾಯಿ ತುಂಬಿದ್ದ ತಟ್ಟೆಯನ್ನು ನೀಡಿ ಸನ್ಮಾನಿಸಿ 'ಕುಸ್ತಿ ಕಂಠೀರವ' ಎಂಬ ಬಿರುದನ್ನು ನೀಡಿ ಆಸ್ಥಾನದ ಪೈಲ್ವಾನನ್ನಾಗಿ ಮಾಡಿದರು.



ಗೋಪಾಲ ರಾಜೇ ಅರಸ್ ಅವರ ಮಾರ್ಗದರ್ಶನದಲ್ಲಿ ಪ್ರಸಿದ್ಧರಾಗಿದ್ದ ಗರಡಿಯ ಉಸ್ತಾದ್ ಶೆಟ್ಟಣ್ಣ, ಮಾಯಣ್ಣ ಹಾಗೂ ಗರಡಿಯ ರಾಮಣ್ಣನವರು ಜಗನ್ಮೋಹನ ಅರಮನೆಯಲ್ಲಿ ಕುಸ್ತಿ ಪಂದ್ಯಾವಳಿಯನ್ನು ನಡೆಸಿ ಕುಸ್ತಿ ಪೈಲ್ವಾನರುಗಳನ್ನು ತಯಾರು ಮಾಡಿದರು. ಈ ಪಂದ್ಯಾವಳಿಯಲ್ಲಿ ಉಸ್ತಾದ್ ಪಾಪಯ್ಯ, ಕ್ಯಾತನಹಳ್ಳಿ ಪೈ: ಶಿವನಂಜೇಗೌಡ, ಶ್ರೀನಿವಾಸಣ್ಣನವರ ಗರಡಿಯ ಪೈ: ದೊಡ್ಡ ತಿಮ್ಮಯ್ಯ ಇನ್ನು ಹಲವಾರು ಪೈಲ್ವಾನರು ಸ್ಪರ್ಧಿಸಿದ್ದರು. 1930 ಏಪ್ರಿಲ್ 6 ರಂದು ಸ್ಥಾಪನೆಯಾದ ನಜರಾಬಾದ್ ದೊಡ್ಡಗರಡಿಯ ಉಸ್ತಾದರಾದ ಪೈ: ಶೆಟ್ಟಣ್ಣ, ಪೈ: ರಾಮಣ್ಣ, ಕೊಪ್ಪಲು ಬಸವಯ್ಯ, ಚನ್ನಬೋರಯ್ಯ ತಿಮ್ಮಪ್ಪ ಹಾಗೂ ಬಂಡಿಕೇರಿ ಚಿಕ್ಕಯ್ಯ ಮುಂತಾದವರು ಸಾಕಷ್ಟು ರೀತಿಯಲ್ಲಿ ಕುಸ್ತಿಕಲೆಗೆ ಶ್ರಮಿಸಿದರು. ಆಗ ಅಂಕೇಗೌಡರು ಕುಸ್ತಿ ಕಲೆಯಲ್ಲಿ ಹೆಸರು ಮಾಡಿ ಯಜಮಾನ್

ಅಂಕೇಗೌಡರೆಂದೇ ಪ್ರಸಿದ್ಧರಾಗಿದ್ದರು.

ನಾಲ್ವಡಿಯವರು ಕುಸ್ತಿ ಕಲೆಯನ್ನು ಮತ್ತಷ್ಟು ಬೆಳೆಸಬೇಕೆಂದು ತೀರ್ಮಾನಿಸಿ ನಾಡಿನಲ್ಲಿ ಪ್ರಖ್ಯಾತಿ ಪಡೆದಿದ್ದ ಕನ್ನೇಗೌಡನ ಕೊಪ್ಪಲು ಬಸವಯ್ಯ, ಚಿಕ್ಕತಮ್ಮಣ್ಣ, ಅಮೀರುದ್ದೀನ್ ಕುರೇಶಿ, ಪೊಲೀಸ್ ಲಿಂಗಣ್ಣನವರ ಗರಡಿಯ ಚಿಕ್ಕಯ್ಯ ಹಾಗೂ ಮೈಸೂರಿನ ಬೇರೆ ಬೇರೆ ಪ್ರಮುಖ ಮಲ್ಲವೀರರಿಗೆ ತಮ್ಮ ಅರಮನೆಯಲ್ಲಿಯೇ ಅವಶ್ಯವಿರುವ ಆಹಾರದ ವ್ಯವಸ್ಥೆ ಮಾಡಿದ್ದರು, ಜೊತೆಗೆ ಸೂಕ್ತವಾದ ಸಂಭಾವನೆಯನ್ನು ನೀಡಿ ಪೋಷಿಸಿದರು. ಕುಸ್ತಿಯಿಂದ ನಿವೃತ್ತರಾದವರಿಗೂ ಅರಮನೆಯಲ್ಲಿ ಒಂದಲ್ಲ ಒಂದು ರೀತಿಯ ಕೆಲಸವನ್ನು ನಾಲ್ವಡಿಯವರು ಒದಗಿಸಿದ್ದರು.

ನಾಲ್ವಡಿಯವರ ಕಾಲದಲ್ಲಿ ಮೈಸೂರು ನಗರದಲ್ಲಿ ಅನೇಕ ಗರಡಿ ಮನೆಗಳಿದ್ದು, ಕುಸ್ತಿಯೇ ಮೈಸೂರಿನ ಪ್ರಮುಖ ಮನರಂಜನಾ ಕ್ರೀಡೆಯಾಗಿತ್ತು. ಮೈಸೂರಿನ ಕಾಲೇಜುಗಳಲ್ಲಿಯೂ ಸಹ ಕುಸ್ತಿ ಕಲಿಯಲು ಪ್ರೋತ್ಸಾಹ ನೀಡುತ್ತಿದ್ದುದುಂಟು. ದಸರಾ ಮಹೋತ್ಸವದ ಅಂಗವಾಗಿ ಕುಸ್ತಿ ಪಂದ್ಯಗಳು 1912ರವರೆಗೂ ಮೈಸೂರು ನಗರದಲ್ಲಿ ಮಾತ್ರ ನಡೆಯುತ್ತಿತ್ತು. ಆದರೆ 1913ರಲ್ಲಿ ನಾಲ್ವಡಿಯವರು ಮತ್ತು ಗೋಪಾಲ ರಾಜೇ ಅರಸ್ ಅವರು ವಹಿಸಿದ ಕಾಳಜಿಯಿಂದಾಗಿ ಆ ಪಂದ್ಯಗಳು ಬೆಂಗಳೂರಿನಲ್ಲಿ ಕೂಡ ನಡೆಯುವಂತಾಯಿತು. ನವರಾತ್ರಿ ಮುಗಿದ ಕೆಲ ದಿವಸಗಳ ನಂತರ ನಡೆಯುತ್ತಿದ್ದ ಆ ಪಂದ್ಯಗಳು (ದಿ ಮೈಸೂರು ಚಾಂಪಿಯನ್ ಷಿಪ್ ರೆಜಲಿಂಗ್ ಟೂರ್ನಮೆಂಟ್) 1913ರ ಡಿಸೆಂಬರ್‌ನಲ್ಲಿ ಬೆಂಗಳೂರಿನ ಲಾಲ್‌ಬಾಗ್ ಗಾಜಿನ ಮನೆಯಲ್ಲಿ ಒಂದು ತಿಂಗಳ ಕಾಲ ದಿನ ಬಿಟ್ಟು ದಿನ ಹೊನಲು ಬೆಳಕಿನಲ್ಲಿ (ಫ್ಲಡ್ ಲೈಟ್ ಮ್ಯಾಚ್) ನಡೆಯಿತು. ಆಗ್ಗೆ ಇನ್ನು ಗಾಜಿನ ಮನೆ ವಿದ್ಯುತ್ ಸಂಪರ್ಕ ಹೊಂದಿರಲಿಲ್ಲ. ಆ ಹೊನಲು ಬೆಳಕಿನ ಕುಸ್ತಿ ಪಂದ್ಯಾವಳಿಗೋಸ್ಕರವಾಗಿಯೇ ತಾತ್ಕಾಲಿಕವಾಗಿ ಗಾಜಿನಮನೆಗೆ ವಿದ್ಯುತ್ ಸಂಪರ್ಕ ಒದಗಿಸಿ ವಿದ್ಯುತ್ ದೀಪಗಳಿಂದ ಬೆಳಗಿಸಲಾಗಿತ್ತು.



**ಖ್ಯಾತ ಕುಸ್ತಿಪಟು**
**ಕೆ.ಜಿ.ಕೊಪ್ಪಲು ಬಸವಯ್ಯ**

ಆ ಪಂದ್ಯಕ್ಕೆ ಸಂಸ್ಥಾನದಲ್ಲಿನ ಎಲ್ಲಾ ಜಿಲ್ಲೆಗಳಿಂದ ಕುಸ್ತಿಪಟುಗಳು ಭಾಗವಹಿಸಿದ್ದರು. ಯುವರಾಜ ನರಸಿಂಹರಾಜ ಒಡೆಯರ್ ಮತ್ತು ಬ್ರಿಟಿಷ್ ರೆಸಿಡೆಂಟರ ಉಪಸ್ಥಿತಿಯಲ್ಲಿ ಹೆಚ್ಚು ಜನಸಂದಣಿಯೊಂದಿಗೆ ನಡೆದ ಆ ಪಂದ್ಯದಲ್ಲಿ ಮೈಸೂರಿನ ಪ್ರಸಿದ್ಧ ಪೈಲ್ವಾನ್ ತಿಮ್ಮಯ್ಯನಿಗೂ ಮತ್ತು ಬೆಂಗಳೂರಿನ ಖ್ಯಾತ ಪೈಲ್ವಾನ್ ಪುಲಾರಿ ಸಾಬ್ಜಾನನಿಗೂ 20 ನಿಮಿಷಗಳ ಜಿದ್ದಾಜಿದ್ದಿನಿಂದ ಕುಸ್ತಿ ನಡೆಯಿತು. ಕೊನೆಗೆ ಮೈಸೂರಿನ ತಿಮ್ಮಯ್ಯ ಜಯಶೀಲರಾದರು. ಅವರಿಗೆ 250 ರೂಪಾಯಿ ಬೆಲೆಬಾಳುವ ಬೆಳ್ಳಿಯ ಪಾರಿತೋಷಕವನ್ನು, ಹಾಗೂ ನಾಲ್ವಡಿಯವರು ವಿಜೇತರಿಗೆಂದು ದಯಪಾಲಿಸಿದ್ದ ಒಂದು ಸಾವಿರ ರೂಪಾಯಿಗಳ ಬಹುಮಾನವನ್ನು ಬ್ರಿಟಿಷ್ ರೆಸಿಡೆಂಟರು ನೀಡಿ ಗೌರವಿಸಿದರು. ಸೋತ ಬೆಂಗಳೂರಿನ ಪುಲಾರಿ ಸಾಬ್ಜಾನನಿಗೂ 150 ರೂಪಾಯಿಗಳನ್ನು ನೀಡಿದರು.

ಆ ವಾರ್ತೆ ತಿಳಿದ ಮೈಸೂರಿನ ಪುರಜನರು, ತಿಮ್ಮಯ್ಯನವರು ಮೈಸೂರಿಗೆ ಗೌರವ ತಂದರೆಂದು ಸಂತೋಷಪಟ್ಟು 1914ರ ಜನವರಿ 6 ಮಂಗಳವಾರದಂದು ರಾತ್ರಿ ರೈಲಿನಲ್ಲಿ ಮೈಸೂರಿಗೆ ಆಗಮಿಸಿದ ತಿಮ್ಮಯ್ಯ ಅವರಿಗೆ ರೈಲ್ವೆ ನಿಲ್ದಾಣದಲ್ಲಿ ಕಾದಿದ್ದ ಆತನ ಮಿತ್ರ ಮಂಡಲಿಯವರೆಲ್ಲಾ ಹಾರ, ಜೋಡಿ ಶಾಲು ಮೊದಲಾದವುಗಳನ್ನು ನೀಡಿ ಸ್ವಾಗತಿಸಿದರು. ರಾತ್ರಿಯಾಗಿದ್ದರಿಂದ ದೀಪಾಲಂಕಾರ ಮಾಡಿದ್ದ ಕುದುರೆ ಗಾಡಿಯಲ್ಲಿ ಕುಳ್ಳಿರಿಸಿ ವಾದ್ಯದೊಂದಿಗೆ ಮೈಸೂರು ನಗರದಲ್ಲೆಲ್ಲಾ ಮೆರವಣಿಗೆ ಮಾಡಿದರು. ಮೈಸೂರಿನ ಆಗರ್ಭ ಶ್ರೀಮಂತರಾಗಿದ್ದ ಸಾಹುಕಾರ್ ಮೊಗಣ್ಣನವರು ಸೇರಿದಂತೆ ತಿಮ್ಮಯ್ಯನ ಅಭಿಮಾನಿಗಳು ಅನೇಕರು ಅವರಿಗೆ ಪಟ್ಟೆಯ ವಸ್ತ್ರ ಮೊದಲಾದವನ್ನು ಬಹುಮಾನವಾಗಿ ನೀಡಿ ಗೌರವಿಸಿದರು.

ಭೀಮಕಾಯರಾಗಿದ್ದ ಗೋಪಾಲ ರಾಜೇ ಅರಸರ ಬಗ್ಗೆ ಎಲ್ಲರಿಗೂ ಸಾಕಷ್ಟು ಗೌರವವಿದ್ದು ಗೋಪಾಲ ಬುದ್ಧಿಯವರೆಂದು ಕರೆಯುತ್ತಿದ್ದರು. ಮೈಸೂರಿನಲ್ಲಿ ಸಾಕಷ್ಟು ಕಡೆ ಹಳೆಯ ಪೈಲ್ವಾನರುಗಳ ಮನೆಗಳಲ್ಲಿ ಈಗಲೂ ಗೋಪಾಲ ರಾಜೇ ಅರಸರ ಭಾವಚಿತ್ರವನ್ನು ಕಾಣಬಹುದು.

ನಾಲ್ವಡಿಯವರ ಕಾಲದಲ್ಲಿ ಮೈಸೂರಿನಲ್ಲಿದ್ದ ಹಲವಾರು ಪ್ರಸಿದ್ಧ ಪೈಲ್ವಾನ್‌ಗಳ ಪೈಕಿ ಕನ್ನೇಗೌಡನ ಕೊಪ್ಪಲಿನ ನಿವಾಸಿಯಾದ ಬಸವಯ್ಯ ಅವರೂ ಒಬ್ಬರು. ರೈತನಾಗಿ ಆರಡಿ ಮೂರು ಅಂಗುಲ ಎತ್ತರವಿದ್ದ ನೀಳಕಾಯದ ಗಂಭೀರ ಸ್ವಭಾವದ ಈ ಕೆ.ಜಿ.ಕೊಪ್ಪಲು ಬಸವಯ್ಯ ಅವರು ಚಿಕ್ಕಂದಿನಿಂದ ಗರಡಿ ಸಾಧನೆಯನ್ನು ಶ್ರದ್ಧೆಯಿಂದ ಮಾಡಿಕೊಂಡು ಅನೇಕ ಕುಸ್ತಿಪಟುಗಳನ್ನು ಸೋಲಿಸಿ ನಗದು

ಬಹುಮಾನವೂ ಸೇರಿದಂತೆ ಹಲವು ತೋಡ ಹಾಗೂ ಪಾರಿತೋಷಕಗಳನ್ನು ಪಡೆದಿದ್ದರು. 1922ರ ವೇಳೆಗೆ ಮೈಸೂರು ನಗರಕ್ಕೆ ಲಾಹೋರ್ ಮತ್ತಿತರ ಕಡೆಗಳಿಂದ ಆಗಮಿಸಿದ್ದ ಪ್ರಸಿದ್ಧ ಪೈಲ್ವಾನರುಗಳ ಮೇಲೆ ಬಸವಯ್ಯ ಕುಸ್ತಿ ಮಾಡಿ ಸೋಲಿಸಿ ಮೈಸೂರು ನಗರದಲ್ಲಿ ಬಹು ಖ್ಯಾತಿ ಹೊಂದಿದ್ದರು. ಇದನ್ನು ಕಂಡು ಸಹಿಸಲಾರದ ಕನ್ನೇಗೌಡನ ಕೊಪ್ಪಲಿನ ಕೆಲವರು ಪಂಜಾಬಿನಲ್ಲಿ ಬಹು ಪ್ರಖ್ಯಾತಿ ಹೊಂದಿದ್ದ 'ಜಾನಿ' ಎಂಬ ಪೈಲ್ವಾನನನ್ನು ಬಸವಯ್ಯನ ಮೇಲೆ ಕುಸ್ತಿ ಮಾಡಲೆಂದೇ ಕರೆಯಿಸಿ, ಅವರಿಗೆ ನೂರಾರು ರೂಪಾಯಿಗಳನ್ನು ವೆಚ್ಚ ಮಾಡಿ 2–3 ತಿಂಗಳಿಂದ ಪೌಷ್ಟಿಕ ಆಹಾರ ನೀಡಿ ಕುಸ್ತಿಗೆ ಸಜ್ಜುಗೊಳಿಸಿದ್ದರು. ಅದರಂತೆ 1923ರ ಜುಲೈ 15 ಭಾನುವಾರ ಸಂಜೆ ಮೈಸೂರಿನ ಹಳೇ ಬಾಡಿಗಾರ್ಡ್ ಕಟ್ಟಡದ ಒಳಾವರಣದಲ್ಲಿ ಕುಸ್ತಿ ವ್ಯವಸ್ಥೆ ಮಾಡಿದರು.

**ಪೈ: ಕೆ.ಜಿ.ಕೊಪ್ಪಲು ಬಸವಯ್ಯ**

ಅರಮನೆಯ ಬಹು ಪ್ರಭಾವಿ ವ್ಯಕ್ತಿಯಾಗಿದ್ದ ಭೀಮಕಾಯದ ಸರ್ದಾರ್ ಗೋಪಾಲ ರಾಜೇ ಅರಸ್‌ನವರ ಯಜಮಾನ್ಯದಲ್ಲಿ ಮತ್ತು ಡಿಸ್ಟ್ರಿಕ್ಟ್ ಕಮೀಷನರ್, ಸಿಟಿ ಮ್ಯಾಜಿಸ್ಟ್ರೇಟ್, ಪೋಲೀಸ್ ಸೂಪರಿಂಟೆಂಡೆಂಟ್ ಮತ್ತಿತರರ ಉಪಸ್ಥಿತಿಯಲ್ಲಿ ನಿಗದಿತ ಸಮಯಕ್ಕೆ ಕುಸ್ತಿ ಪ್ರಾರಂಭವಾಯಿತು. ಬೆಂಗಳೂರು ಮೊದಲಾದ ಪರಸ್ಥಳಗಳಿಂದ ಬಂದಿದ್ದವರೂ, ಸ್ಥಳೀಯರೂ ಸೇರಿದಂತೆ ಸುಮಾರು ಏಳು ಸಾವಿರಕ್ಕೂ ಹೆಚ್ಚು ಕ್ರೀಡಾಭಿಮಾನಿಗಳು ಕಿಕ್ಕಿರಿದು ತುಂಬಿದ್ದರು. ಜಾನಿ ಪೈಲ್ವಾನ್ ಅಖಾಡದಲ್ಲಿ ಅಟ್ಟಹಾಸದಿಂದ ಮಾಡುತ್ತಿದ್ದ ವೈಯಾರ, ವೈಖರಿಗಳನ್ನು ನೋಡಿ ಬಸವಯ್ಯ ಸೋತು ಹೋಗುವರೆಂದು ಪ್ರೇಕ್ಷಕರು ತಮ್ಮತಮ್ಮಲ್ಲೇ ಮಾತನಾಡಿಕೊಳ್ಳುತ್ತಿದ್ದರು. ಆದರೆ ಗಟ್ಟಿಮುಟ್ಟಾದ ಬಿಗಿದ ದೇಹವನ್ನು ಹೊಂದಿದ್ದ ಬಸವಯ್ಯ ಅವರು ಡಾಂಭಿಕವಿಲ್ಲದೆ ಬಹಳ ನಮ್ರ ಭಾವದಿಂದ ಬಂದು ಗೋಪಾಲ ರಾಜೇ ಅರಸರಿಗೂ, ಡೆಪ್ಯೂಟಿ ಕಮೀಷನರ್ ರಾಮಸ್ವಾಮಯ್ಯನವರಿಗೂ ನಮಸ್ಕರಿಸಿ ಅಖಾಡಕ್ಕೆ ಇಳಿದು ತನ್ನ ಕುಲದೇವತೆಯನ್ನು ಪ್ರಾರ್ಥಿಸಿ ಪ್ರೇಕ್ಷಕರಿಗೆಲ್ಲಾ ಕೈ ಮುಗಿದು ಕುಸ್ತಿ ಪ್ರಾರಂಭಿಸಿದರು. ಜಾನಿ ಪೈಲ್ವಾನನ್ನು ಅರ್ಧ ಗಂಟೆಕಾಲ ಸತಾಯಿಸಿ ಆತನ ಯಾವಪಟ್ಟಿಗೂ ಸಿಲುಕದೆ ಪ್ರತಿ ಪಟ್ಟುಗಳ ಮೂಲಕ ಎದುರಾಳಿಯ ಬೆವರಿಳಿಸಿ ಆತನಿಗೆ ದಮ್ಮು ಕಟ್ಟುವಂತೆ ಮಾಡಿ ಸಮಯ ಸಾಧಿಸಿ ಬೆನ್ನಿಗೆ ಒಳ್ಳೆಯ ಪಟ್ಟಿನಿಂದ ಹಿಡಿದು, ಸಾಕಷ್ಟು ತಿನಕಾಡಿಸಿ ಕೊನೆಯಲ್ಲಿ ಜಾನಿ ಪೈಲ್ವಾನನ ಬೆನ್ನನ್ನು ನೆಲಕ್ಕತ್ತಿಸಿ ಚಿತ್ ಮಾಡಿ ಸೋಲಿಸಿದರು.



ಆಗ ಪ್ರೇಕ್ಷಕರು ಸಂತೋಷ ಸಂಭ್ರಮದಿಂದ ಕುಣಿದು ಕುಪ್ಪಳಿಸಿದರು. ನಿಗರ್ವಿಯೂ ಶಾಂತನೂ ಆಗಿದ್ದ ಬಸವಯ್ಯನನ್ನು ಜನರು ಹೆಗಲ ಮೇಲೆ ಕೂರಿಸಿಕೊಂಡು ಮೆರೆಸಿದರು. ನಂತರ ಹೂ ಮಾಲೆಗಳಲ್ಲಿ ಮುಳುಗಿದ್ದ ಬಸವಯ್ಯನನ್ನು ಕುದುರೆ ಬಂಡಿಯಲ್ಲಿ ಕುಳ್ಳಿರಿಸಿ ಸಾಲುಗಟ್ಟಿಕೊಂಡು ದೊಡ್ಡಪೇಟೆ, ಶ್ರೀರಾಮಪೇಟೆ ಮೂಲಕ ಮೆರವಣಿಗೆಯಲ್ಲಿ ಕರೆದುಕೊಂಡು ಹೋದರು. ಆ ಸಮಯದಲ್ಲಿ ನೆರೆದಿದ್ದ ಜನಸ್ತೋಮವು ಮಹಾರಾಜರ ವಿಜಯದಶಮಿ ಮತ್ತು ವರ್ಧಂತೋತ್ಸವ ಸಮಯದಲ್ಲಿದ್ದಂತೆ ತೋರುತ್ತಿತ್ತು. ಉತ್ತರ ಭಾರತದ ಬಹು ಪ್ರಖ್ಯಾತನಾಗಿದ್ದ ಜಾನಿ ಪೈಲ್ವಾನನ್ನು ಸೋಲಿಸಿ ಮೈಸೂರು ನಗರಕ್ಕೆ ಕೀರ್ತಿಯನ್ನು ಪೈಲ್ವಾನ್ ಬಸವಯ್ಯ ಅವರು ತಂದರು.

ಆಗ್ಗೆ ಮೈಸೂರಿನಲ್ಲಿ ಅಮೀರುದ್ದೀನ್ ಖುರೇಶಿ ಬಹು ದೊಡ್ಡ ಪೈಲ್ವಾನ್ ಇದ್ದರು. ಅವರ ಕಡೆಯವರು ಬಸವಯ್ಯ ಅವರ ವಿರುದ್ಧ ದೊಡ್ಡ ಅಪಪ್ರಚಾರ ಮಾಡಿ "ಮೈಸೂರಿಗೆ ಗಂಡ ಕೊಪ್ಪಲಿಗೆ ಮಿಂಡ" ಎಂದು ಸವಾಲೆಸೆದರು. ಇದರಿಂದ ಕೆರಳಿದ ಕನ್ನೇಗೌಡನ ಕೊಪ್ಪಲಿನ ತಾಯಂದಿರು ಅಮೀರುದ್ದೀನ್ ವಿರುದ್ಧ ಕುಸ್ತಿ ಮಾಡಲು ಪೈಲ್ವಾನ್ ಬಸವಯ್ಯನಿಗೆ ತಮ್ಮ ಮೊಲೆ ಹಾಲನ್ನು ತೆಗೆದು ಕುಡಿಸಿದರಂತೆ. ಕುಸ್ತಿಯ ದಿನ ಬಂದೇ ಬಿಟ್ಟಿತು. ಕಿಕ್ಕಿರಿದು ಜನ ಸೇರಿದ್ದರು. ಈ ಕುಸ್ತಿ ನಡೆದದ್ದು ದೊಡ್ಡಕೆರೆ ಮೈದಾನದಲ್ಲಿ. ಅದಕ್ಕೂ ಮುಂಚೆ ಆ ಮೈದಾನವನ್ನು 'ಅಯ್ಯಂಗಾರಿ ಫೀಲ್ಡ್' ಎನ್ನುತ್ತಿದ್ದರಂತೆ. ಸಿಂಹದಂತ ಜಟ್ಟಿಯಾದ ಅಮೀರುದ್ದೀನ್ ಖುರೇಶಿ ಮತ್ತು ಬಸವಯ್ಯ ಇಬ್ಬರೂ ಕೈ ಕೈ ಮಿಲಾಯಿಸಿದರು. ಈ ಪಂದ್ಯದಲ್ಲೂ ಬಸವಯ್ಯ ಜಯಶೀಲರಾದರು. ಆತನನ್ನು ಭಾರಿ ಮೆರವಣಿಗೆಯಲ್ಲಿ ಕರೆದುಕೊಂಡು ಹೋಗಲಾಯಿತು. ಬಸವಯ್ಯ ದೀರ್ಘಾಯುಷ್ಮಾನರಾಗಿ ಕೀರ್ತಿ ಪ್ರತಿಷ್ಠೆಗಳನ್ನು ಹೊಂದಲೆಂದು ಅಬಾಲವೃದ್ಧರೆಲ್ಲರೂ ಹರಿಸಿದರೆಂದು 1923ರ ಜುಲೈ 22ರ 'ಮೈಸೂರ್ ಸ್ಟಾರ್' ವಾರ ಪತ್ರಿಕೆ ದಾಖಲಿಸಿದೆ.

1904ರಲ್ಲಿ ದೇವರಾಜ ಮೊಹಲ್ಲಾದಲ್ಲಿನ ಆನೆ ಸಾರೋಟ್ ಬೀದಿಯಲ್ಲಿ ಮಾಯಣ್ಣನವರ ಹತ್ತು ಜನಗಳ ಗರಡಿ ಪ್ರಾರಂಭವಾಯಿತು. ಪೈಲ್ವಾನ್ ಬೋರಣ್ಣ, ಪೈಲ್ವಾನ್ ಪುಟ್ಟನಂಜಣ್ಣ, ಪೈಲ್ವಾನ್ ಉಸ್ತಾದ್ ನಂಜಣ್ಣ, ಪೈಲ್ವಾನ್ ಕುಚೇಲಣ್ಣ, ಪೈಲ್ವಾನ್ ಸಣ್ಣಬೋರು, ಪೈಲ್ವಾನ್ ರುದ್ರ ಮುಂತಾದವರು ಈ ಗರಡಿಯಲ್ಲಿ ಪಳಗಿ ಕುಸ್ತಿ ಕ್ಷೇತ್ರದಲ್ಲಿ ಸಾಧನೆ ಮಾಡಿದರು. ಆ ಸಮಯದಲ್ಲಿ ಬಂಡಿಕೇರಿ ಚಿಕ್ಕಯ್ಯ ಎಂಬ ಪೈಲ್ವಾನರು ಅನೇಕ ಕಡೆ ನಡೆದ ಕುಸ್ತಿಯಲ್ಲಿ ಭಾಗವಹಿಸಿ ಬಹು ಪ್ರಸಿದ್ಧ ಹೊಂದಿದ್ದರು. ನಾಲ್ವಡಿಯವರು ಚಿಕ್ಕಯ್ಯನವರಿಗೆ ಸಂತೋಷದಿಂದ 'ನಿನಗೇನು ಬೇಕು' ಎಂದು ಕೇಳಿದಾಗ 'ಮಹಾಸ್ವಾಮಿ ಹಸು ಕರುಹಟ್ಟಿಯಲ್ಲಿ ಪ್ರತಿದಿನ ಹಾಲನ್ನು ನನಗೆ ಕರೆದು ಕೊಡುವಂತೆ ಅಪ್ಪಣೆ ಮಾಡಬೇಕು' ಎಂದರು. ಅದಕ್ಕಾಗಿಯೇ ಅವರು 'ಬಂಡಿಕೇರಿ ಪೈಲ್ವಾನ್ ಕರುಹಟ್ಟಿ ಚಿಕ್ಕಯ್ಯ' ಎಂದು ಹೆಸರು ಪಡೆದರು. (ಈ ಲೇಖನಕ್ಕೆ ಕೆಲ ಮಾಹಿತಿಯನ್ನು ವೃತ್ತಾಂತ ಪತ್ರಿಕೆ ಜೂನ್ 1908, ಮಲ್ಲ ಪ್ರಪಂಚ, ಪುಟ: 61–62 ಮತ್ತು ಮೈಸೂರು ಸ್ಟಾರ್ ವಾರ







## ಇಂದಿರಾ ಮಾಸ್ಟರ್ ಕಿಚನ್‌ಗೆ

# ಪರಿಸರ ಸ್ನೇಹಿ ಇಂಧನ ಬಳಕೆ

● ಲೋಕೇಶ್ ಜೆ

**ಕ**ರ್ನಾಟಕ ಸರ್ಕಾರವು 2017 ರಲ್ಲಿ ಸೇವೆಯ ರೂಪದಲ್ಲಿ ಅನುದಾನಿತ ಕಡಿಮೆ ವೆಚ್ಚದಲ್ಲಿ ಬಡ ಜನರಿಗೆ ಆಹಾರ ನೀಡಬೇಕು ಎಂದು ಇಂದಿರಾ ಕ್ಯಾಂಟಿನ್‌ಗಳನ್ನು ರಾಜ್ಯಾದ್ಯಂತ ಆರಂಭಿಸಿತು. ಸಾರ್ವಜನಿಕರಿಗೆ ಸೇವಾ ಮಾದರಿಯಲ್ಲಿ ಇದನ್ನು ನೀಡುವ ಚಿಂತನೆಯನ್ನು ಮೊದಲು ಬೆಂಗಳೂರಿನಲ್ಲಿ ಆರಂಭ ಮಾಡಿ ನಂತರ ಕರ್ನಾಟಕದಾದ್ಯಂತ ವಿಸ್ತರಿಸಿತು.

ಶಿವಮೊಗ್ಗ ನಗರದ ಜನತೆಗೆ ಇಂದಿರಾಕ್ಯಾಂಟಿನ್‌ನಲ್ಲಿ ನೀಡುತ್ತಿರುವ ಆಹಾರ ಶುಚಿ-ರುಚಿಯಾಗಿದ್ದು ಜನತೆ ಇದರ ಫಲವಂತಿಕೆಯನ್ನು ಯಶಸ್ವಿಯಾಗಿ ಪಡೆಯುತ್ತಿರುವುದಲ್ಲದೆ ಮಹಾನಗರ ಪಾಲಿಕೆಯವರು ಸಂಗ್ರಹಿಸಿದ ಹಸಿ ತ್ಯಾಜ್ಯದಿಂದ ತಯಾರಿಸಿದ ಪರಿಸರಸ್ನೇಹಿ ಇಂಧನವನ್ನು ಬಳಸುತ್ತಿರುವುದು ಜನರ ಮೆಚ್ಚುಗೆಗೆ ಪಾತ್ರವಾಗಿದೆ. ಮಹಾನಗರ ಪಾಲಿಕೆವತಿಯಿಂದ ದಿನನಿತ್ಯ ಸಿಗುವ ಹಸಿ ಕಸದಿಂದ ನಗರದಲ್ಲಿರುವ ಇಂದಿರಾ ಕ್ಯಾಂಟಿನ್‌ಗಳಿಗೆ ಹಸಿತ್ಯಾಜ್ಯದಿಂದ ತಯಾರಾದ ಇಂಧನ ತಯಾರು ಮಾಡಿ ಅಡುಗೆಯನ್ನು ಮಾಡುವುದಕ್ಕೆ ಉಪಯೋಗಿಸುತ್ತಿದ್ದಾರೆ. ಶಿವಮೊಗ್ಗ ಮಹಾನಗರಪಾಲಿಕೆ ಇಂತಹದೊಂದು ಪ್ರಯತ್ನವನ್ನು ನಡೆಸಿ ಯಶಸ್ವಿಯಾಗಿದೆ.

**ನಗರದಲ್ಲಿ ಸಿಗುವ ಹಸಿ ತ್ಯಾಜ್ಯದಿಂದ ಪರಿವರ್ತಿತ ಬಯೋಮಿಥಲೇಷನ್ ಇಂಧನ ತಯಾರಿಸಿಕೊಂಡು ಇಂದಿರಾ ಕ್ಯಾಂಟಿನ್‌ಗಳಲ್ಲಿ ಅಡುಗೆಗೆ ಬಳಸಲಾಗುತ್ತಿದೆ.**

ಕೇಂದ್ರ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಯಾದ ಸ್ವಚ್ಛ ಭಾರತ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವಲ್ಲಿ ಸಕ್ರಿಯವಾಗಿ ಪಾಲಿಕೆ ತೊಡಗಿ ಕೊಂಡಿದೆ. ಸರಿಸುಮಾರು ನಗರದಲ್ಲಿ 3.22000 ಜನಸಂಖ್ಯೆಯಿದ್ದು, ಒಂದು ದಿನಕ್ಕೆ 170 ಟನ್ ತಾಜ್ಯ ಸಂಗ್ರಹಣೆಯಾಗುತ್ತದೆ. ಇದರಲ್ಲಿ 100 ಟನ್ ಹಸಿಕಸ, 70 ಟನ್ ಒಣ ಕಸಸಿಗುತ್ತದೆ. ಇದರಲ್ಲಿ ಎರಡು ಟನ್ ಹಸಿಕಸವನ್ನು ನಗರದಲ್ಲಿರುವ ಇಂದಿರಾಮಾಸ್ಟರ್ ಕಿಚನ್‌ಗೆ ಅಡುಗೆ ಮಾಡಲು ಇಂಧನವನ್ನಾಗಿ ಪರಿವರ್ತಿಸಿ ಅಡುಗೆಯನ್ನು ತಯಾರು ಮಾಡಲು ಉಪಯೋಗಿಸುತ್ತಾರೆ. ದಿನನಿತ್ಯ ಅಡುಗೆ ತಯಾರಿಕೆಗೆ 14 ಕೆಜಿ ಇಂಧನವನ್ನು ಪೂರೈಕೆ ಮಡಲಾಗುತ್ತಿದೆ. ಪ್ರತೀ ದಿನ ಇಂದಿರಾ ಮಾಸ್ಟರ್ ಕಿಚನ್‌ನಲ್ಲಿ ತ್ಯಾಜ್ಯದಿಂದ ಪರಿವರ್ತಿತವಾದ ಇಂಧನದಿಂದ ಅಡುಗೆಯನ್ನು ಮಾಡಲಾಗುತ್ತಿದೆ.

ಪಾಲಿಕೆ ತಾಜ್ಯವನ್ನು ಬಳಸಿ ಅದರಿಂದ ಪರಿವರ್ತಿತ ಇಂಧನವನ್ನು ತಯಾರು ಮಾಡಿ ಇಂದಿರಾ ಮಾಸ್ಟರ್ ಕಿಚನ್‌ನಲ್ಲಿ ಉಪಯೋಗ ಮಾಡುತ್ತಿರುವುದು ಸಂತಸದ ವಿಷಯವಾಗಿದೆ. ಇದರಿಂದ ಪರಿಸರ ಕಲುಷಿತಗೊಳ್ಳದೆ ಅತ್ಯಂತ ಕಡಿಮೆ ವೆಚ್ಚದಲ್ಲಿ ಇಂಧನ ಬಳಕೆಯಾಗುತ್ತಿರುವುದು ಸಂತಸ ತಂದಿದೆ ಎಂದು ಅವರು ಹರ್ಷ ವ್ಯಕ್ತಪಡಿಸಿದ್ದಾರೆ.

ಇಂದಿರಾ ಮಾಸ್ಟರ್ ಕಿಚನ್‌ನ ಅಡುಗೆ ತಯಾರಕರಾದ ದೇವರಾಜ್ ಅವರು ತ್ಯಾಜ್ಯದ ಬಳಕೆಯಿಂದ ಇಂಧನ ಬಳಸಿ ಶುಚಿ-ರುಚಿಯಾದ ಆಹಾರವನ್ನು ತಯಾರಿಸಿ ಕೊಡುತ್ತಿದ್ದೇವೆ. ಇದರಿಂದ ವೆಚ್ಚವೂ ಕೂಡ ಶೂನ್ಯವಾಗಿದೆ. ತ್ಯಾಜ್ಯದ ಸದ್ಬಳಕೆಯಿಂದ ಪರಿಸರ ಸ್ನೇಹಿಯಾಗಿ ಮಹಾನಗರ ಪಾಲಿಕೆಯು ಕೆಲಸವನ್ನು ಮಾಡುತ್ತಿದೆ ಎಂದು ಹೇಳುತ್ತಾರೆ. ಶಿವಮೊಗ್ಗ ಮಹಾನಗರ ಪಾಲಿಕೆಯಂತೆ ಇತರೆ ಪಾಲಿಕೆಯವರೂ ಕ್ರಮವಹಿಸಿದರೆ ಖಂಡಿತವಾಗಿ ಪರಿಸರವನ್ನು ಕಾಪಾಡಬಹುದು. ■




# ಮಹಿಳೆಯರ ಪಾಲಿಗೆ ಸಂಜೀವಿನಿಯಾಗಿರುವ ಗೃಹಲಕ್ಷ್ಮಿ ಯೋಜನೆ

ರಘುನಾಥ ಡಿ.ಪಿ



ರಾಜ್ಯದಲ್ಲಿ ವಿಧಾನಸಭಾ ಚುನಾವಣೆಗೂ ಮುನ್ನ ಕಾಂಗ್ರೆಸ್ ಪಕ್ಷ ಘೋಷಿಸಿದ "ಪಂಚ ಗ್ಯಾರಂಟಿ"ಗಳನ್ನು ಅತ್ಯಂತ ಪ್ರಾಮಾಣಿಕವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅನುಷ್ಠಾನಕ್ಕೆ ತಂದಿದೆ. ಪಂಚ ಗ್ಯಾರಂಟಿಗಳನ್ನು ವಿಳಂಬ ಮಾಡದೆ ಜನರ ಮನೆ ಬಾಗಿಲುಗಳಿಗೆ ಮುಟ್ಟಿಸುವ ಕೆಲಸ ಮಾಡಲಾಗುತ್ತಿದೆ.

ಅದರಲ್ಲೂ ಪಂಚ ಗ್ಯಾರಂಟಿಗಳಲ್ಲಿ ಅತ್ಯಂತ ಸದ್ದು ಮಾಡುತ್ತಿರುವುದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ "ಗೃಹಲಕ್ಷ್ಮಿ" ಯೋಜನೆ. ಬಡ ಮತ್ತು ಮಧ್ಯಮ ವರ್ಗದ ಪ್ರತಿ ಕುಟುಂಬದ ಯಜಮಾನಿಯವರಿಗೆ ಪ್ರತಿ ತಿಂಗಳು 2 ಸಾವಿರ ರೂಪಾಯಿ ತಲುಪಿಸುವುದಾಗಿದೆ. ಇದು ಸರ್ಕಾರದಿಂದ ಅತಿ ಹೆಚ್ಚು ಹಣಕಾಸು ವಿನಿಯೋಗವಾಗುವ ಮಹತ್ವದ ಸೇವಾ ಯೋಜನೆಯೂ ಹೌದು.

ಕಳೆದ ವರ್ಷ ಅಂದರೆ, 2023 ರ ಜುಲೈ 19 ರಿಂದ ಗೃಹಲಕ್ಷ್ಮಿ ಯೋಜನೆಗೆ ನೋಂದಣಿ ಪ್ರಾರಂಭವಾಗಿದ್ದು, ಇಲ್ಲಿಯವರೆಗೂ ರಾಜ್ಯದಲ್ಲಿ ಸುಮಾರು 1.25 ಕೋಟಿ ಮಹಿಳೆಯರು ಈ ಯೋಜನೆಯಡಿ ನೋಂದಣಿ ಮಾಡಿಸಿದ್ದಾರೆ. ಗ್ರಾಮ ಒನ್, ಬೆಂಗಳೂರು ಒನ್, ಕರ್ನಾಟಕ ಒನ್, ಬಾಪೂಜಿ ಸೇವಾ ಕೇಂದ್ರ, ನಾಡ ಕಚೇರಿಗಳಲ್ಲಿ ಸೇವಾ ಸಿಂಧು ಪೋರ್ಟಲ್ ಮೂಲಕ ಯೋಜನೆಗೆ ಅರ್ಜಿ ಸಲ್ಲಿಸಬಹುದಾಗಿದೆ.

ಇದು ನಿರಂತರ ಪ್ರಕ್ರಿಯೆಯಾಗಿದ್ದು ಅರ್ಹರು ಈಗಲೂ ಫಲಾನುಭವಿಗಳಾಗಲು ಅವಕಾಶವಿದೆ. ಬಿಪಿಎಲ್, ಎಪಿಎಲ್, ಅಂತ್ಯೋದಯ ಪಡಿತರ ಕಾರ್ಡ್ ಹೊಂದಿರುವ ಕುಟುಂಬದ ಒಬ್ಬ ಮಹಿಳೆ ಮಾತ್ರ ಯೋಜನೆಯ ಪ್ರಯೋಜನ ಪಡೆಯಬಹುದಾಗಿದೆ. ಆದಾಯ ತೆರಿಗೆ ಮತ್ತು ಜಿಎಸ್‌ಟಿ ಪಾವತಿದಾರರು ಸೇರಿದಂತೆ ಸಿರಿವಂತರು ಈ ಯೋಜನೆಯ ಪ್ರಯೋಜನ ಪಡೆಯಲು ಸಾಧ್ಯವಾಗದಂತೆ ನಿಯಮಾವಳಿಗಳನ್ನು ರೂಪಿಸಲಾಗಿದೆ.

**ಬಜೆಟ್‌ನಲ್ಲಿ 28,608 ಕೋಟಿ ಮೀಸಲು**

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೃಹಲಕ್ಷ್ಮಿ ಯೋಜನೆಗೆ 2024-25ನೇ ಸಾಲಿನ ಬಜೆಟ್‌ನಲ್ಲಿ 28,608 ಕೋಟಿ ರೂಪಾಯಿ ಮೀಸಲಿಟ್ಟಿದ್ದಾರೆ. ಪ್ರಮುಖವಾಗಿ ಈ ಯೋಜನೆಗೆ ಹಣಕಾಸು ಮುಗ್ಗಟ್ಟು ಉಂಟಾಗದಂತೆ ಸರ್ಕಾರ ಅಗತ್ಯ ಕ್ರಮ ಕೈಗೊಂಡಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಬೇಡಿಕೆಗೆ ಅನುಗುಣವಾಗಿ ಆರ್ಥಿಕ ಇಲಾಖೆಯು ಹಣ ಬಿಡುಗಡೆ ಮಾಡುತ್ತ ಬಂದಿದೆ.

**ಜಿಲ್ಲಾವಾರು ಫಲಾನುಭವಿಗಳು**

ಜಿಲ್ಲಾವಾರು ಫಲಾನುಭವಿಗಳ ಸಂಖ್ಯೆ ನೋಡುವುದಾದರೆ ಬಾಗಲಕೋಟೆ- 4,11,118, ಬಳ್ಳಾರಿ- 2,88,312, ಬೆಳಗಾವಿ- 11,37,798, ಬೆಂಗಳೂರು ಗ್ರಾಮಾಂತರ- 2,13,391, ಬೆಂಗಳೂರು ನಗರ- 9,23,184 , ಬೀದರ್- 3,38,027, ಚಾಮರಾಜನಗರ- 2,73,414, ಚಿಕ್ಕಬಳ್ಳಾಪುರ- 2,87,668, ಚಿಕ್ಕಮಗಳೂರು- 2,68,420, ಚಿತ್ರದುರ್ಗ- 3,91,002. ದಕ್ಷಿಣ ಕನ್ನಡ- 3,67,194, ದಾವಣಗೆರೆ- 3,66,820, ಧಾರವಾಡ- 3,79,242, ಗದಗ- 2,45,975, ಹಾಸನ- 4,42,840, ಹಾವೇರಿ- 3,84,198 , ಕಲಬುರಗಿ- 5,59,983, ಕೊಡಗು- 1,19,537, ಕೋಲಾರ- 3,19,207 , ಕೊಪ್ಪಳ- 3,20,441, ಮಂಡ್ಯ- 4,58,251, ಮೈಸೂರು- 6,85,337, ರಾಯಚೂರು- 4,32,566, ರಾಮನಗರ- 2,76,981. ಶಿವಮೊಗ್ಗ- 3,93,499, ತುಮಕೂರು- 6,33,026, ಉಡುಪಿ- 2,31,760, ಉತ್ತರ ಕನ್ನಡ- 3,28,856, ವಿಜಯನಗರ- 2,91,262, ವಿಜಯಪುರ- 4,94,237 ಮತ್ತು ಯಾದಗಿರಿ ಜಿಲ್ಲೆಯಲ್ಲಿ 2,53,177 ಫಲಾನುಭವಿಗಳಿದ್ದಾರೆ. ಕಳೆದ ಜೂನ್‌ನಲ್ಲಿ ರಾಜ್ಯದ 1,13,67,704 ಫಲಾನುಭವಿಗಳಿಗೆ ತಲಾ 2 ಸಾವಿರ ರೂಪಾಯಿಯಂತೆ ಒಟ್ಟಾರೆ 2273.54 ಕೋಟಿ ರು. ಪಾವತಿಸಲಾಗಿದೆ.

## ಜನರಿಗೆ ನೀಡಿದ ವಾಗ್ದಾನದಂತೆ ನಡೆದುಕೊಂಡಿದ್ದೇವೆ..!!

ಅಧಿಕಾರಕ್ಕೆ ಬಂದ ತಕ್ಷಣವೇ ನಮ್ಮ ಸರ್ಕಾರ ಜನರಿಗೆ ನೀಡಿದ್ದ ವಾಗ್ದಾನದಂತೆ ಐದು ಗ್ಯಾರಂಟಿಗಳನ್ನು ಜಾರಿಗೊಳಿಸಿದೆ. ಅದರಲ್ಲಿ ಗೃಹಲಕ್ಷ್ಮಿಯೂ ಒಂದು. ಈ ಯೋಜನೆ ಜಾರಿಗೊಳಿಸಿ ಒಂದು ವರ್ಷ ತುಂಬಿದೆ. ಈವರೆಗೆ ರಾಜ್ಯದಲ್ಲಿ 1 ಕೋಟಿ 32 ಲಕ್ಷ ಕುಟುಂಬಗಳ ಯಜಮಾನಿಯರಿಗೆ ಪ್ರತಿ ತಿಂಗಳು 2 ಸಾವಿರ ರೂಪಾಯಿಯಂತೆ ತಿಂಗಳಿಗೆ 2280 ಕೋಟಿ ಹಣವನ್ನು ವರ್ಗಾವಣೆ ಮಾಡುವ ಮೂಲಕ ಕಳೆದ ಒಂದು ವರ್ಷದಲ್ಲಿ ಒಟ್ಟು 25,248 ಕೋಟಿಯನ್ನು ವರ್ಗಾಯಿಸಲಾಗಿದೆ. ಈ ಯೋಜನೆಯ ಹಣ ಕುಟುಂಬದ ಯಜಮಾನಿಗೆ ನಾನಾ ರೀತಿಯಲ್ಲಿ ನೆರವಿಗೆ ಬಂದಿದೆ. ಮುಂದೆಯೂ ಈ ಯೋಜನೆಯು ಜನರಿಗೆ ಮತ್ತಷ್ಟು ಅನುಕೂಲವಾಗಲಿ ಎನ್ನುವುದು ನಮ್ಮೆಲ್ಲರ ಆಶಯ.

**-ಲಕ್ಷ್ಮಿ ಹೆಬ್ಬಾಳ್ಕರ್**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು.

**ಯಾವ್ಯಾವ ತಿಂಗಳು-ಎಷ್ಟೆಷ್ಟು ಪಾವತಿ?**

ಕಳೆದ 2023 ಆಗಸ್ಟ್‌ನಲ್ಲಿ ಗೃಹ ಲಕ್ಷ್ಮಿ ಯೋಜನೆಯ ಮೊದಲ ಕಂತಿನಲ್ಲಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ 2118 ಕೋಟಿ ರೂಪಾಯಿ ಪಾವತಿಸಲಾಗಿತ್ತು. ಸೆಪ್ಟೆಂಬರ್‌ನಲ್ಲಿ 2199.74 ಕೋಟಿ, ಅಕ್ಟೋಬರ್‌ನಲ್ಲಿ 2244.63 ಕೋಟಿ, ನವೆಂಬರ್‌ನಲ್ಲಿ 2258.83 ಕೋಟಿ, ಡಿಸೆಂಬರ್‌ನಲ್ಲಿ 2271.41 ಕೋಟಿ ರೂಪಾಯಿ ಸಂದಾಯ ಮಾಡಲಾಗಿತ್ತು.

2024ರ ಜನವರಿಯಲ್ಲಿ 2319.56 ಕೋಟಿ, ಫೆಬ್ರವರಿಯಲ್ಲಿ 2360.56 ಕೋಟಿ, ಮಾರ್ಚ್ ತಿಂಗಳಲ್ಲಿ 2400.64 ಕೋಟಿ, ಏಪ್ರಿಲ್‌ನಲ್ಲಿ 2403.91 ಕೋಟಿ, ಮೇನಲ್ಲಿ 2405.04 ಕೋಟಿ, ಜೂನ್‌ನಲ್ಲಿ 2273.54 ಕೋಟಿ ರುಪಾಯಿ ಸೇರಿದಂತೆ 25,288 ಕೋಟಿ ರುಪಾಯಿಯನ್ನು ಫಲಾನುಭವಿಗಳಿಗೆ ಪಾವತಿಸಲಾಗಿದೆ.

ರಾಜ್ಯದಲ್ಲಿ ಈ ಹಿಂದೆ 1999 ರಿಂದ 2004ರವರೆಗೆ ಕರ್ನಾಟಕದಲ್ಲಿದ್ದ ಎಸ್.ಎಂ.ಕೃಷ್ಣ ನೇತೃತ್ವದ ಕಾಂಗ್ರೆಸ್ ಸರ್ಕಾರ ಮಹಿಳೆಯರಿಗೆ ಆರ್ಥಿಕ ಬಲ ನೀಡಲು "ಸ್ತ್ರೀ ಶಕ್ತಿ " ಯೋಜನೆಯನ್ನು ಜಾರಿಗೆ ತಂದಿತ್ತು. ಈ ಯೋಜನೆ ನಗರ ಪ್ರದೇಶದ ಮಹಿಳೆಯರಿಗಿಂತ ಅದರಲ್ಲೂ ಗ್ರಾಮೀಣ ಮಟ್ಟದ ಮಹಿಳೆಯರು ಸಣ್ಣಮಟ್ಟದ ಹಣಕಾಸಿನ ವ್ಯವಹಾರಗಳಿಗೆ ಆರ್ಥಿಕ ಶಕ್ತಿ ನೀಡಿತು. ಎಷ್ಟೋ ಬಡ ಮಹಿಳೆಯರ ಪಾಲಿಗೆ ಶಕ್ತಿಯಾದ ಸ್ತ್ರೀ ಶಕ್ತಿ ಸಂಘಗಳು, ಇಂದಿಗೂ ಗ್ರಾಮಾಂತರ ಪ್ರದೇಶಗಳಲ್ಲಿ ಚಾಲ್ತಿಯಲ್ಲಿವೆ.

ಸ್ತ್ರೀ ಶಕ್ತಿ ಸಂಘಗಳ ಯೋಜನೆಯ ರೂವಾರಿಯೇ ಅಂದಿನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆಯಾಗಿದ್ದ ಮೋಟಮ್ಮನವರು. ಅದೇ ರೀತಿ ಬಡ ಮತ್ತು ಮಧ್ಯಮ ವರ್ಗದ ಮಹಿಳೆಯರು ತಮ್ಮ ಕುಟುಂಬದ ಆರ್ಥಿಕ ನಿರ್ವಹಣೆಗೆ ನೆರವಾಗಲು ಈಗಿನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಾದ ಲಕ್ಷ್ಮಿ ಹೆಬ್ಬಾಳ್ಕರ್ ಅವರು "ಗೃಹಲಕ್ಷ್ಮಿ" ಯೋಜನೆಯ ರೂವಾರಿ ಎನಿಸಿಕೊಂಡಿದ್ದಾರೆ.

### ಯೋಜನೆಗೆ ಸಚಿವರ ಭರದ ತಯಾರಿ

ಗೃಹಲಕ್ಷ್ಮಿ ಯೋಜನೆಯ ಚಾಲನೆಗೆ ಟೊಂಕಕಟ್ಟಿ ನಿಂತಿದ್ದ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರು ಯೋಜನೆಗೆ ಚಾಲನೆ ನೀಡುವ ಸಮಯದಲ್ಲಿ ಮೈಸೂರಿನಲ್ಲಿ ಸುಮಾರು ಒಂದು ವಾರಗಳ ಕಾಲ ಬೀಡುಬಿಟ್ಟಿದ್ದರು. 2023ರ ಆಗಸ್ಟ್ 30 ರಂದು ಮೈಸೂರಿನ ಮಹಾರಾಜ ಕಾಲೇಜಿನ ಮೈದಾನದಲ್ಲಿ ನಿರ್ಮಿಸಲಾಗಿದ್ದ ಬೃಹತ್ ವೇದಿಕೆಯಲ್ಲಿ ಯೋಜನೆಗೆ ಚಾಲನೆ ನೀಡಲಾಯಿತು. ಸಮಾರಂಭವನ್ನು ಅಚ್ಚುಕಟ್ಟಾಗಿ ನಿಭಾಯಿಸುವ ನಿಟ್ಟಿನಲ್ಲಿ ಮೈಸೂರಿನ ಸುತ್ತಮುತ್ತಲಿನ ಜಿಲ್ಲೆಗಳಾದ ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆಯಾದ್ಯಂತ ಸಚಿವರು ಸಂಚರಿಸಿ, ಮಹಿಳೆಯರನ್ನು ಸಂಘಟಿಸಿದರು. ಪಕ್ಷಾತೀತವಾಗಿ ಜನಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡ ಸಚಿವರು, ತಾಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಪೂರ್ವಭಾವಿ ಸಭೆಗಳನ್ನು ಆಯೋಜಿಸುವ ಮೂಲಕ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಮಾಡಿದರು. ಕಾಂಗ್ರೆಸ್ ವರಿಷ್ಠರಾದ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಮುಖಂಡತ್ವದಲ್ಲಿ ನಡೆದ ಗೃಹಲಕ್ಷ್ಮಿ ಯೋಜನೆಯ ಉದ್ಘಾಟನೆ ಸಮಾರಂಭ ಯಶಸ್ವಿಯಾಗಿ ಜರುಗಿತು.

### ಯೋಜನೆಯಿಂದ ಹತ್ತು ಹಲವು ಲಾಭ

ಗೃಹಲಕ್ಷ್ಮಿ ಯೋಜನೆ ಫಲಾನುಭವಿಗಳಿಗೆ ಹಲವು ರೀತಿ ಪ್ರಯೋಜನವಾಗುತ್ತಿದೆ. ತಮಗೆ ಆಗುತ್ತಿರುವ ಸಹಾಯದ ಬಗ್ಗೆ ಹತ್ತಾರು ಮಹಿಳೆಯರು ದಿನಂಪ್ರತಿ ನೆನಪಿಸಿಕೊಳ್ಳುತ್ತಿದ್ದಾರೆ. ಹಾವೇರಿಯ ಮಹಿಳೆಯೊಬ್ಬರು ಗೃಹಲಕ್ಷ್ಮಿ ಯೋಜನೆಯ ಹಣ ಕೂಡಿಟ್ಟು ಫ್ರಿಜ್ ಖರೀದಿಸಿದರೆ, ಗದಗದ ಮಹಿಳೆಯೊಬ್ಬರು ವಾಷಿಂಗ್ ಮಿಷನ್ ಖರೀದಿಸಿ ಸಂಭ್ರಮಿಸಿದ್ದರು.

ರಾಯಭಾಗದ ಮಹಿಳೆಯೊಬ್ಬರು ಇಡೀ ಊರಿಗೆ ಊಟ ಹಾಕಿಸಿ ಸಂಭ್ರಮಿಸಿದರೆ, ಬೆಳಗಾವಿಯಲ್ಲಿ ಮಹಿಳೆಯೊಬ್ಬರು ಗೃಹಲಕ್ಷ್ಮಿ ಹಣದಿಂದ ತನ್ನ ಗಂಡನ ಕಣ್ಣಿನ ಆಪರೇಷನ್ ಮಾಡಿಸಿದ್ದರು. ಸಾವಿರಾರು ಕುಟುಂಬಗಳ ಮಕ್ಕಳ ವಿದ್ಯಾಭ್ಯಾಸ, ಪಠ್ಯ-ಪುಸ್ತಕ ಖರೀದಿಗೆ, ಔಷಧ ಖರೀದಿ, ಇವೇ ಮುಂತಾದ ಖರ್ಚುವೆಚ್ಚಗಳಿಗೆ ಗೃಹಲಕ್ಷ್ಮಿ ಹಣದಿಂದ ನೆರವಾಗುತ್ತಿದೆ.

### ದೇವಸ್ಥಾನ ಜೀರ್ಣೋದ್ಧಾರಕ್ಕೂ 'ಗೃಹಲಕ್ಷ್ಮಿ' ಹಣ

ಕೊಪ್ಪಳದ ಕೂಕನೂರು ತಾಲೂಕಿನ ಹಿರೇಬಿಡನಾಳ ಗ್ರಾಮದ ಮಹಿಳೆಯರು ಗ್ರಾಮದ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಒಂದು ತಿಂಗಳ ಗೃಹಲಕ್ಷ್ಮಿ ಹಣ ನೀಡಿದ್ದಾರೆ. ಈ ಮೂಲಕ ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯ ಗೃಹಲಕ್ಷ್ಮಿ ಯೋಜನೆಯಿಂದ ಸಾಕಾರಗೊಂಡಿದೆ. ಅದೇ ರೀತಿ ಗದಗ ಜಿಲ್ಲೆಯ ರೋಣ ತಾಲೂಕಿನ ಸೋಮಕಟ್ಟೆ ಗ್ರಾಮದ ಮಹಿಳೆಯರು ಗೃಹಲಕ್ಷ್ಮಿ ಯೋಜನೆಯ ಹಣದಲ್ಲಿ ಶರಣ ಬಸವೇಶ್ವರ ದೇವರಿಗೆ ರಥ ಮಾಡಿಸಿ, ಇಡೀ ರಾಜ್ಯಕ್ಕೆ ಮಾದರಿಯಾಗಿದ್ದಾರೆ.

ಹೀಗೆ ರಾಜ್ಯ ಸರ್ಕಾರವು ಆರ್ಥಿಕವಾಗಿ ಕಷ್ಟದಲ್ಲಿದ್ದವರಿಗೆ ನೆರವಾಗುತ್ತಿರುವ ಅತ್ಯಂತ ಮಹಾತ್ವಕಾಂಕ್ಷಿಯ ಈ 'ಗೃಹಲಕ್ಷ್ಮಿ' ಯೋಜನೆಯು ಅಸಂಖ್ಯಾತ ಕುಟುಂಬದ ಯಜಮಾನಿಯರ ಬಾಳನ್ನು ಬೆಳಗಿಸುತ್ತಿದೆ.




### ತಾಂತ್ರಿಕ ಸಮಸ್ಯೆ ಪರಿಹರಿಸಿಕೊಂಡರೆ ಗೃಹಲಕ್ಷ್ಮಿ ಹಣ

ಬ್ಯಾಂಕ್‌ನಲ್ಲಿನ ವಿವಿಧ ತಾಂತ್ರಿಕ ಕಾರಣಗಳಿಂದಾಗಿ ಸುಮಾರು ಒಂದು ಲಕ್ಷ ಫಲಾನುಭವಿಗಳಿಗೆ (ಕೆವೈಸಿ, ಪಾನ್‌ಕಾರ್ಡ್-ಆಧಾರ್‌ಕಾರ್ಡ್ ಲಿಂಕ್ ಸೇರಿದಂತೆ ಇನ್ನಿತರ ಸಮಸ್ಯೆ) ಹಣ ಸಂದಾಯ ಆಗುತ್ತಿಲ್ಲ. ಅವರುಗಳು ತಮ್ಮ ಬ್ಯಾಂಕ್ ಖಾತೆಯ ತಾಂತ್ರಿಕ ಸಮಸ್ಯೆಯನ್ನು ಸರಿ ಪಡಿಸಿಕೊಂಡರೆ ಅವರಿಗೂ ಹಣ ಸಂದಾಯವಾಗುತ್ತದೆ. ಅಲ್ಲದೆ, 1.78 ಲಕ್ಷ ಮಂದಿ ಆದಾಯ ತೆರಿಗೆದಾರರು ಕೂಡ ಈ ಯೋಜನೆಗೆ ನೋಂದಣಿ ಮಾಡಿಸಲು ಅರ್ಜಿ ಸಲ್ಲಿಸಿದ್ದರು. ಆದರೆ ನೋಂದಣಿ ಹಂತದಲ್ಲಿಯೇ ಈ ಅರ್ಜಿಗಳನ್ನು ತಿರಸ್ಕೃತಗೊಳಿಸಲಾಗಿದೆ. ಉಳಿದಂತೆ ನೋಂದಣಿ ಮಾಡಿಸಿಕೊಂಡಿರುವ ಎಲ್ಲ ಅರ್ಹ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಗೃಹಲಕ್ಷ್ಮಿ ಯೋಜನೆಯ 2 ಸಾವಿರ ಹಣ ಜಮೆಯಾಗುತ್ತಿದೆ.



# ಮತ್ತೆ ನೆನಪಾಗುತ್ತಿರುವ ಗಾಂಧಿ

" ನಮ್ಮ ನಡುವಿನ ಪ್ರಖರ ಚಿಂತಕರೂ ಹಾಗೂ ವಿಮರ್ಶಕರೂ ಆಗಿದ್ದ ಡಿ.ಎಸ್.ನಾಗಭೂಷಣ ಅವರು ಲೋಹಿಯಾ, ಗಾಂಧಿ, ಅಂಬೇಡ್ಕರ್ ಮತ್ತು ಮಾರ್ಕ್ಸ್ ಮುಂತಾದವರನ್ನು ಅರ್ಥೈಸುತ್ತಾ; ವಿಶ್ಲೇಷಿಸುತ್ತಾ ಬಂದವರು. ಇತ್ತೀಚೆಗಿನ ದಿನಗಳಲ್ಲಿ ನಮ್ಮೆಲ್ಲಾ ಬಿಕ್ಕಟ್ಟು ಮತ್ತು ಸಂಕಟಗಳಿಗೆ ಗಾಂಧಿ ಚಿಂತನೆಗಳಿಂದ ಮಾತ್ರ ಪರಿಹಾರ ಎಂದು ನಂಬಿದ್ದ ಅವರು ಗಾಂಧೀಜಿಯ ಪ್ರಸ್ತುತೆಯ ಕುರಿತಾಗಿ ಹೆಚ್ಚು ಹೆಚ್ಚು ಮಾತನಾಡುತ್ತಾ ಬರವಣಿಗೆಯಲ್ಲಿ ತೊಡಗಿಕೊಂಡಿದ್ದರು. ಗಾಂಧಿ ಕುರಿತ ಅವರ ಲೇಖನವೊಂದರ ಸಂಕ್ಷಿಪ್ತ ಭಾಗವನ್ನು ಇಲ್ಲಿ ನೀಡಲಾಗಿದೆ."

ನಮ್ಮ ಪುರಾತನರೊಬ್ಬರು ನಮ್ಮ ಸದ್ಯದ ಬದುಕಿನ ರೀತಿ ನೀತಿಗಳನ್ನು ನೋಡುವ ಕುತೂಹಲದಿಂದ ಈಗ ನಮ್ಮ ಮಧ್ಯೆ ಬಂದಿಳಿದರೆನ್ನಿ. ಅವರು ಆಶ್ಚರ್ಯ ಪಡುವುದು ಇವುಗಳಲ್ಲಿ ಯಾವುದನ್ನು ಕಂಡು?, ನಮ್ಮ ದಂತ ವೈದ್ಯರ ಕೌಶಲ್ಯ–ಪರಿಣಿತಿಗಳನ್ನೋ ಅಥವಾ ನಮ್ಮ ಹಲ್ಲುಗಳ ವ್ಯಾಪಕ ಹುಳುಕುತನವನ್ನೋ? ನಮ್ಮ ಸಾರಿಗೆ–ಸಾಧನಗಳ ವೇಗ ವೈವಿಧ್ಯವನ್ನೋ ಅಥವಾ ನಾವು ನಮ್ಮ ಕೆಲಸದ ಸ್ಥಳಕ್ಕೆ ಹೋಗಿ ಬರಲು ತೆಗೆದುಕೊಳ್ಳುವ ಕಾಲ ಹಾಗೂ ಪಡುವ ಪಾಡನ್ನೋ?" ನಮ್ಮ ಔಷಧ ಪದ್ಧತಿಯ ವೈವಿಧ್ಯಮಯ ಆವಿಷ್ಕಾರಗಳನ್ನೋ ಅಥವಾ ಆಸ್ಪತ್ರೆಗಳಲ್ಲಿನ ಜನ–ಜಂಗುಳಿಯನ್ನೋ? ಚಂದ್ರನ ಮೇಲೆ ಕಾಲಿಡುವಂತಾದ ನಮ್ಮ ವೈಜ್ಞಾನಿಕ ಸಾಮರ್ಥ್ಯವನ್ನೋ ಅಥವಾ ಕೆಲಸ ಮಾಡಬಯಸುವ ಜನರಿಗೆ ಉದ್ಯೋಗ ಒದಗಿಸಿಕೊಡಲಾಗದ ನಮ್ಮ ತಾಂತ್ರಿಕ ಅಸಾಮರ್ಥ್ಯವನ್ನೋ? ನಮ್ಮ ಯಂತ್ರಗಳ ದಕ್ಷತೆಯನ್ನೋ ಅಥವಾ ನಮ್ಮ ಇಡೀ ವ್ಯವಸ್ಥೆಯ ಅದಕ್ಷತೆಯನ್ನೋ?

ಈ ಪ್ರಶ್ನೆಯನ್ನು ಕೇಳಿದಾತ ಶತಮಾನದ ಮಧ್ಯಭಾಗದಲ್ಲಿ ತನ್ನ 'ಸಣ್ಣದು ಸುಂದರ' (small is Beautiful) ಎಂಬ ಬಹು ಆಯಾಮಗಳ ಅರ್ಥಶಾಸ್ತ್ರೀಯ ಕೃತಿಯ ಮೂಲಕ ವಿಶ್ವದ ಗಮನ ಸೆಳೆದಿದ್ದ ಜರ್ಮನಿಯ ಅರ್ಥಶಾಸ್ತ್ರಜ್ಞ, ಶೂಮಾಕರ್, ವಿಜ್ಞಾನ ಮತ್ತು ತಂತ್ರಜ್ಞಾನಗಳ ಆವಿಷ್ಕಾರಗಳ ನಿರಂತರ ಅನ್ವಯಗಳನ್ನಾಧರಿಸಿದ ಬೃಹತ್ ಯಾಂತ್ರಿಕ ಉತ್ಪಾದನೆಯ ಮೂಲಕ ಸದಾ ಏರುತ್ತಲೇ ಹೋಗುವ ಜೀವನ ಮಟ್ಟದ ಆದರ್ಶವನ್ನು, ತನ್ನ ಸ್ಫೂರ್ತಿ ಶಕ್ತಿಯನ್ನಾಗಿ ಮಾಡಿಕೊಂಡಿರುವ ಪ್ರಚಲಿತ ಆಧುನಿಕ ನಾಗರೀಕತೆಯನ್ನು ವಿಮರ್ಶಿಸುತ್ತಾ, ಆತ ಕೇಳಿದ ಪ್ರಶ್ನೆಯಿದು. ಸುಮಾರು ಮುವತ್ತೈದು ವರ್ಷಗಳ ಹಿಂದೆ, ವಾರಣಾಸಿಯ ಗಾಂಧಿ ಅಧ್ಯಯನ ಕೇಂದ್ರದಲ್ಲಿ ಶೂಮಾಕರ್ ನೀಡಿದ ಗಾಂಧಿ ಸ್ಮಾರಕ ಉಪನ್ಯಾಸದ ಭಾಗವಾಗಿ ಕೇಳಲಾದ ಈ ಪ್ರಶ್ನೆ. ಇಂದೂ ಪ್ರಸ್ತುತವೆನಿಸುವುದಿಲ್ಲವೆ? ಅಥವಾ ಅಂದಿಗಿಂತ ಇಂದು ಪ್ರಸ್ತುತವೆನಿಸುವುದೋ?

ಆಧುನಿಕತೆಯ ಅರ್ಥದ ಮೂಲ ನೆಲೆಗಳನ್ನು ಗಮನಿಸಿದರೆ, ಗಾಂಧೀಜಿ ಆಧುನಿಕರಲ್ಲಿ ಆಧುನಿಕರು–ಅತ್ಯಾಧುನಿಕರು ಎಂಬುದು ಗೊತ್ತಾಗುತ್ತದೆ: ಯುರೋಪಿನ ಹದಿನೈದನೆಯ ಶತಮಾನದ ಉಳಿಗಮಾನ್ಯ ವ್ಯವಸ್ಥೆ ಜನತೆಯ, ನಿರ್ದಿಷ್ಟವಾಗಿ ಭಾರತದ ಸಮಸ್ತ ಜನತೆಯ ಲೌಕಿಕ ಹಾಗೂ ಆಧ್ಯಾತ್ಮಿಕ ಅಭಿವೃದ್ಧಿಗಳೆರಡಕ್ಕೂ

ಮಾರಕವಾಗುವುದೆಂದು ಅವರು ವಿಶ್ಲೇಷಿಸಿದರು. ಅದಕ್ಕಾಗಿ ಅಲ್ಪ ಸಂಖ್ಯಾತ ಉಳ್ಳವರ, ಪ್ರತಿಷ್ಠರ ಅಧಿಕಾರ ಹಂಚಿಕೆಯ ಸಂಧಾನ ವೇದಿಕೆ ಮಾತ್ರವಾಗಿದ್ದ ಕಾಂಗ್ರೆಸ್ಸನ್ನು ರೈತ ಕೂಲಿಕಾರರು, ಅಸ್ಪೃಶ್ಯರು ಮತ್ತು ಮಹಿಳೆಯರನ್ನೂ ಕೂಡಿಸಿಕೊಂಡು ಸಮಸ್ತ ಭಾರತೀಯರ ಆತ್ಮ ಗೌರವದ ಅಳಿವು-ಉಳಿವುಗಳ ಪ್ರಶ್ನೆಯನ್ನಾಧರಿಸಿದ, ಜನತಾ ಆಂದೋಲನವನ್ನಾಗಿ ಪರಿವರ್ತಿಸಿದರು. ಈ ಪರಿವರ್ತನೆಯ ಪ್ರಯತ್ನದಲ್ಲಿ, ಜಡಗೊಂಡಿದ್ದ ಎಲ್ಲ ಆರ್ಥಿಕ ಸಾಮಾಜಿಕ-ಧಾರ್ಮಿಕ ನಿಲುವುಗಳನ್ನೂ, ಸಂರಚನೆಗಳನ್ನೂ ಪ್ರಶ್ನಿಸಿದರು ಮತ್ತು ವರ್ತಮಾನದ ಅಗತ್ಯಗಳಿಗೆ ತಕ್ಕಂತೆ ಅವನ್ನು ಪುನರ್ರೂಪಿಸಿದರು. ಹೀಗೆ, ಆಧುನಿಕತೆಯ ಅರ್ಥವನ್ನು ಅದರ ಭೌತಿಕ ಆವರಣದಾಚೆಗೆ ತಂದು, ವಿಶ್ವದ ನೆಲೆಯಲ್ಲಿ ಒಂದು ಸಮಾತೆಯ ಮೌಲ್ಯವಾಗಿ ಕಂಡರಿಸಿದರು.

ಪಶ್ಚಿಮದ ಯಂತ್ರ ನಾಗರಿಕತೆಯನ್ನು ಪ್ರತಿನಿಧಿಸುವ ಆಧುನಿಕತೆಯು ಸಾರ್ವತ್ರಿಕವಾಗಿ ಮನುಷ್ಯನ ಅಸ್ತಿತ್ವದ ಘನತೆಯನ್ನೇ, ನಿರ್ದಿಷ್ಟವಾಗಿ ಭಾರತೀಯನ ಆಸ್ಮತೆಯನ್ನೇ ಬುಡಮೇಲುಗೊಳಿಸುವಂತಹುದು ಎಂಬುದನ್ನವರು ಅರಿತಿದ್ದರು. 1908 ಹೊತ್ತಿಗೇ, ಇಂಗ್ಲೆಂಡಿನಿಂದ ದಕ್ಷಿಣ ಆಫ್ರಿಕಾಕ್ಕೆ ಪ್ರಯಾಣಿಸುತ್ತಿದ್ದಾಗ ಬರೆದ ಗಾಂಧೀವಾದದ 'ಬೈಬಲ್' ಎಂದೇ ಪರಿಗಣಿಸಲ್ಪಟ್ಟಿರುವ 'ಹಿಂದ್ ಸ್ವರಾಜ್' ನಲ್ಲಿಯೇ ಅದನ್ನವರು ವಿವರಿಸಿದ್ದರು. ಆಗ ಅವರಿಗೆ ಭಾರತದ ಸ್ವಾತಂತ್ರ್ಯಾಂದೋಲನದ ಮುಂಚೂಣಿಯಲ್ಲಿ ತಾವು ನಿಲ್ಲಬೇಕಾಗುತ್ತದೆ ಎಂಬುದರ ಕಲ್ಪನೆಯೂ ಇರಲಿಲ್ಲ. ಹಾಗಾಗಿಯೇ ಅವರು ಆ ಕೃತಿಯಲ್ಲಿ ನಾಗರಿಕತೆ ಎಂದರೇ, ಶರೀರ ಸುಖ ವರ್ಧನೆಯಷ್ಟೇ ಅದರ ಗುರಿಯಾಗಿರುವುದರಿಂದ ಅದೊಂದು ರೋಗವಾಗಿದೆ ಎಂದು ಗುರುತಿಸಿದ್ದರು. ಆದರೆ ಸ್ವಾತಂತ್ರ್ಯಾಂದೋಲನದ ಮಧ್ಯದಲ್ಲಿ, ದೇಶವನ್ನು ಅದರೆಲ್ಲ ನೆಲೆಗಳಲ್ಲಿ ಪುನಾರಚಿಸುವ ಅಗತ್ಯ-ಜವಾಬ್ದಾರಿಗಳು ಮೂಡತೊಡಗಿದಾಗ, ಗಾಂಧೀಜಿ ಅದರಲ್ಲಿ, ಆ ಪುನಾರಚನೆಯ ಅವಕಾಶದಲ್ಲಿ ಹೊಸ ನಾಗರಿಕತೆಯೊಂದರ ಆಸ್ತಿವಾರದ ಹೊಳಹು ಕಂಡರು. ಅದೇ ಗ್ರಾಮ ಸ್ವರಾಜ್ಯದ ಮೂಲ ಕಲ್ಪನೆ. ಆ ಕಲ್ಪನೆಯ ವಿಕಾಸದ ಹಿನ್ನೆಲೆಯಲ್ಲೇ ಅವರು ತಮ್ಮ ಸಾವಿನ ದಿನಗಳ ಹೊತ್ತಿಗೆ, ಯಂತ್ರ ಪರಿಕಲ್ಪನೆ ಕುರಿತಂತೆ 'ಶರೀರವೆಂಬುದೇ ಒಂದು ಯಂತ್ರ, ಹಾಗಾಗಿ ನಾನು ಯಂತ್ರ ವಿರೋಧಿಯಲ್ಲ. ಮನುಷ್ಯ ಆತ್ಮ ಕಳೆದುಹೋಗುವಂತಹ ಯಂತ್ರ ವ್ಯವಸ್ಥೆಯನ್ನು ವಿರೋಧಿಸುತ್ತೇನೆ. ವಾಸ್ತವವಾಗಿ, ನಮ್ಮ ಹಳ್ಳಿಗಳ ಪ್ರತಿ ಮನೆಯಲ್ಲೂ ಹಬೆಯಿಂದಲೋ, ವಿದ್ಯುತ್ತಿನಿಂದಲೋ ಚಲಿಸಬಲ್ಲ ಯಂತ್ರಗಳ ಅನುರಣವನ್ನು ನಾನು ಕೇಳಬಯಸುತ್ತೇನೆ' ಎಂದು ಹೇಳುವಷ್ಟು ವಾಸ್ತವಾದಿಯಾಗಿದ್ದರು.

ಗಾಂಧೀಜಿ ಕಲ್ಪಿಸಿಕೊಂಡಿದ್ದ ಹೊಸ ನಾಗರಿಕತೆಗೆ ಭಾರತೀಯ ಸಂಸ್ಕೃತಿಯೇ ಮೂಲ ದ್ರವ್ಯವಾಗಿತ್ತು. ಅದನ್ನು ಅವರು 'ದೇಶಿ' ಎಂದು ಕರೆದರು. ಪ್ರತಿಯೊಂದು ಸಮೂದಾಯವೂ ತಾನು ವಾಸಿಸುವ ಪ್ರದೇಶದ ಧಾರಣ ಶಕ್ತಿ (Carrying power)ಗೆ ತಕ್ಕಂತೆ ಬದುಕುವ ಕ್ರಮವದು. ಭಾರತೀಯರು ಬಹು ಪುರಾತನ ಕಾಲದಿಂದಲೂ, ಸುತ್ತಲಿನ ಜನ ಮತ್ತು ನಿಸರ್ಗದೊಂದಿಗೆ ಸಮರಸದಲ್ಲಿರುವ ಇಂತಹುದೊಂದು ಜೀವನ ಕ್ರಮವನ್ನು ರೂಪಿಸಿಕೊಂಡು, ತಮ್ಮ ನೆಮ್ಮದಿಯಲ್ಲಿ ತಾವಿದ್ದರು. ಅವರು ಪರಾಕ್ರಮಣಕ್ಕೆ ಒಳಗಾಗುತ್ತಾ ಬಂದಿದ್ದೇ ಈ ಜೀವನ ಕ್ರಮವನ್ನು ಉಲ್ಲಂಘಿಸಿ, ಪರಾಕರ್ಷಣೆಗಳಿಗೆ ತಮ್ಮನ್ನು ತಾವು ತೆತ್ತುಕೊಳ್ಳುತ್ತಾ ಹೋದುದರ ದೌರ್ಬಲ್ಯದಿಂದಾಗಿ, ಇದರ ಪರಿಣಾಮವಾಗಿಯೇ ಈ ಜೀವನ ಕ್ರಮದ ಆಧಾರಗಳಾಗಿದ್ದ ಉತ್ಪಾದನಾ ತಂತ್ರಕೌಶಲ್ಯಗಳು ಸಾಮಾಜಿಕ ಸಂಸ್ಥೆಗಳು ಹಾಗೂ ಸಾಂಸ್ಕೃತಿಕ ಪ್ರತೀಕಗಳು ವಿಕೃತಿಗೊಂಡದ್ದು ಮತ್ತು ಆ ಮೂಲಕ ಎಲ್ಲ ಸಾಂಸ್ಥಿಕ ಸ್ವಾಯತ್ತತೆ ಹಾಗೂ ವೈಯಕ್ತಿಕ ಸ್ವಾತಂತ್ರ್ಯಗಳನ್ನು ಕಳೆದುಕೊಂಡದ್ದು. ಹಾಗಾಗಿ, ಈಗ ಸ್ವಾತಂತ್ರ್ಯವೆಂದರೆ ನಮ್ಮ ಅಗತ್ಯಗಳಿಗೆ ಒಂದು ಮಿತಿ ಹಾಕಿಕೊಳ್ಳುವುದು ಮತ್ತು ಆ ಮಿತಿಯನ್ನು ತನ್ನ ಸಮುದಾಯದ ಒಟ್ಟಾರೆ ಒಳಿತಿನ ಒರೆಗಲ್ಲಿನಲ್ಲಿ ನಿರ್ಧರಿಸಿಕೊಳ್ಳುವ ನೈತಿಕತೆಗೆ ಬದ್ಧವಾಗುವುದು ಎಂದೇ ಅರ್ಥ. ಮನುಷ್ಯನ ನೈತಿಕತೆ ವಿಕಾಸಗೊಳ್ಳಬೇಕಾದ್ದು ಈ ನೆಲೆಯಿಂದಲೇ ಎಂದು ಗಾಂಧೀಜಿ ನಂಬಿದ್ದರು. ಅವರ ಪ್ರಕಾರ ಇಂತಹ ನೈತಿಕತೆಯಿಂದ ಪುಟಿಯುವ ಸ್ವಾತಂತ್ರ್ಯದ ಲೌಕಿಕ ರೂಪವೇ ಸ್ವರಾಜ್ಯ: "ತನ್ನನ್ನು ತಾನು ಅಂಕೆಯಲ್ಲಿಟ್ಟುಕೊಳ್ಳುವುದೇ ಸ್ವರಾಜ್ಯ: ಸ್ವಯಂ ನೀತಿಯನ್ನು ಪಾಲಿಸುವವನು, ಇತರರನ್ನು ವಂಚಿಸದವನು, ತಾಯಿ, ತಂದೆ, ಹೆಂಗಸರು, ಮಕ್ಕಳು, ಆಳುಕಾಳು, ನೆರೆಹೊರೆ ಎಲ್ಲರ ಬಗ್ಗೆಯೂ ತನ್ನ ಕರ್ತವ್ಯವನ್ನು ಪಾಲಿಸುವವನು. ಇಂಥವನಿಗೆ ಮಾತ್ರ ಅದು ಲಭ್ಯ. ಇಂಥವನು ಎಲ್ಲೇ ಇರಲಿ, ಯಾವ ದೇಶದಲ್ಲೇ ಇರಲಿ, ಅವನು ಯಾವಾಗಲೂ ಸ್ವರಾಜ್ಯದ ಪ್ರಜೆಯೇ. ಇಂಥವರು ಎಲ್ಲಿ ಎಷ್ಟು ಜನರಿದ್ದಾರೋ ಅಲ್ಲಿ ಅಷ್ಟು ಸ್ವರಾಜ್ಯ".

ಇಂಥಹ ಸ್ವರಾಜ್ಯದ ಕಲ್ಪನೆಯ ಮೂಸೆಯಲ್ಲಿಯೇ ಅವರ 'ದೇಶೀ' ಆಶಯವು ಸ್ವಾತಂತ್ರಾಂದೋಲನವನ್ನು ಕಟ್ಟಿದ ಅಹಿಂಸಾತ್ಮಕ ಸತ್ಯಾಗ್ರಹ, ಹಿಂದೂ ಮುಸ್ಲಿಂ ಏಕತೆ, ಅಸ್ಪೃಶತಾ ನಿವಾರಣೆ ಮುಂತಾದ ಗಾಂಧೀಜಿಯವರ ರಚಕನಾತ್ಮಕ ಕಾರ್ಯಕ್ರಮಗಳನ್ನು ಒಂದು ಅತ್ಯಂತಿಕ ಗುರಿಯೆಡೆಗೆ ಸಂಘಟಿಸುವ 'ಸ್ವದೇಶಿ' ಎಂಬ ಒಂದು ಚಳುವಳಿಯಾಗಿ ರೂಪು ತಳೆದದ್ದು, ಅದರ ಪರಿಣಾಮ ಸ್ವರೂಪವಾಗಿಯೇ ಗ್ರಾಮ ಸ್ವರಾಜ್ಯದ ಚಿತ್ರ ಮೂಡಿ ನಿಂತದ್ದು. ಗಾಂಧೀಜಿ ಸ್ವದೇಶಿ ಎಂಬುದನ್ನು ಬ್ರಿಟಿಷ್ ವಸಾಹತುಶಾಹಿಯ ಚೇತನವನ್ನು ಬ್ರಿಟಿಷ್ ಸಾಮಾಜ್ಯ ವಿಸ್ತರಣೆಯ ಪ್ರೇರಕ ಶಕ್ತಿಯಾಗಿದ್ದ ಅಲ್ಲಿನ ಆಧುನಿಕ ಕೈಗಾರಿಕೆಗಳ, ವಿಶೇಷವಾಗಿ ಹತ್ತಿ ಗಿರಣಿಗಳ ಗಡಿಯಾಚೆಯ ಮಾರುಕಟ್ಟೆಯನ್ನು ಅಡಗಿಸುವ ಆರ್ಥಿಕ ಅಸ್ತ್ರವನ್ನಾಗಿ ರೂಪಿಸಿದ್ದರು. ಇನ್ನು ಗ್ರಾಮ

ಸ್ವರಾಜ್ಯವನ್ನು ವಸಾಹತುಶಾಹಿಯ ಮುಂದಿನ ಎಲ್ಲ ಅವತಾರಗಳ ಆಕರ್ಷಣೆಗಳಿಂದ ಸ್ವತಂತ್ರ ಭಾರತವನ್ನು ರಕ್ಷಿಸುವ, ಸ್ವಸಂಪೂರ್ಣ ರಾಜಕೀಯ ಅಸ್ತ್ರವನ್ನಾಗಿ ರೂಪಿಸಿದ್ದರು. ತನ್ನ ಅಗತ್ಯಗಳನ್ನು ಸಮುದಾಯದ ವ್ಯವಸ್ಥಿತ ಬದುಕಿಗೆ ಪೂರಕವಾಗಿರುವ ಮಟ್ಟಿಗೆ ಮಾತ್ರ ನಿರೂಪಿಸಿಕೊಂಡು, ಅವನ್ನು ಆದಷ್ಟೂ ಮಟ್ಟಿಗೆ ನೆರೆಹೊರೆಯ ನೈಸರ್ಗಿಕ ಹಾಗೂ ಮಾನವ ಸಂಪನ್ಮೂಲಗಳನ್ನು ಬಳಸಿಕೊಂಡೇ ಪೂರೈಸಿಕೊಳ್ಳುವ ಮತ್ತು ಅತ್ಯಗತ್ಯವಾದಾಗ ಮಾತ್ರ ಸಮುದಾಯದ ಹೊರ ಘಟಕಗಳೊಂದಿಗೆ ಹತ್ತಿರದ ಹಳ್ಳಿಯೋ, ಪಟ್ಟಣವೋ, ಸರಕು ಅಥವಾ ಸೇವೆಯನ್ನು ವ್ಯಾಪಾರ ವಿನಿಮಯ ಮಾಡಿಕೊಳ್ಳುವುದಕ್ಕೆ ಬದ್ಧವಾದ ವ್ಯವಸ್ಥೆಯದು.

ಹಳ್ಳಿಯನ್ನು ಮೂಲ ಘಟಕವನ್ನಾಗಿ ಹೊಂದಿರುವ ಈ ವ್ಯವಸ್ಥೆ, ನಿಸರ್ಗವನ್ನು ಕೊಳ್ಳೆಹೊಡೆದು ಹೆಚ್ಚುವರಿ ಸರಕು ಉತ್ಪಾದನೆ ಮಾಡಿ, ಜನರ ಬಯಕೆಗಳನ್ನು ಕೆರಳಿಸುವ ಮೂಲಕ ಅನಗತ್ಯ ಮಾರುಕಟ್ಟೆ ಸೃಷ್ಟಿಸುವ: ಹಾಗೂ ಆ ಮೂಲಕ ಮನುಷ್ಯನ ಬದುಕನ್ನು ಅನಗತ್ಯವಾಗಿ ಜಟಿಲಗೊಳಿಸಿ ಅವನನ್ನು ಅಶಾಂತವನ್ನಾಗಿ ಮಾಡುವಂತಹ ಸರಕು ಆರ್ಥಿಕತೆಗೆ ಅವಕಾಶ ಮಾಡಿಕೊಡುವುದಿಲ್ಲ ಎಂದು ಗಾಂಧೀಜಿ ನಂಬಿದ್ದರು. ಈ ಹಿನ್ನೆಲೆಯಲ್ಲಿ ಅವರು ಒಂದು ಸಮಾಜದ ಭೌತಿಕ ಅಗತ್ಯಗಳು ಹಾಗೂ ಅವುಗಳ ಉತ್ಪಾದನೆ ನಡುವಣ ತಾರ್ಕಿಕ ಸಂಬಂಧವನ್ನು ಕಡಿದು ಹಾಕಿ, ಹೆಚ್ಚುವರಿ ಉತ್ಪಾದನೆಗೆ ಅವಕಾಶ ಮಾಡಿಕೊಡುವ ಯಂತ್ರಗಳನ್ನು, ಸಾಮಾಜಿಕ ಅಗತ್ಯಗಳಿಗನುಸಾರ ಪುನರ್ವಿನ್ಯಾಸಗೊಳಿಸುವ ಅನಿವಾರ್ಯತೆಯನ್ನು ಮನಗಂಡರು. ಆಗ ಕಣ್ಮುಂದೆ ಬಂದದ್ದೇ ಚರಕ ಸಾಂಪ್ರದಾಯಿಕ ರಾಟೆಯ ಪರಿಷ್ಕೃತ ರೂಪ. ಸಮೂಹ ಉತ್ಪಾದನೆಯನ್ನಾಧರಿಸಿದ ಪಶ್ಚಿಮದ ಸರಕು ಅರ್ಥಶಾಸ್ತ್ರಕ್ಕೆ ಪ್ರತಿಯಾಗಿ, ಸಮೂಹದಿಂದ ಉತ್ಪಾದನೆಯನ್ನು ಆಧರಿಸಿ ಜನತಾ ಅರ್ಥಶಾಸ್ತ್ರವನ್ನು ರೂಪಿಸಲು ಆಧಾರವಾದ ಈ ಚರಕ, ಗಾಂಧೀಜಿ ಮಾತುಗಳಲ್ಲೇ ಹೇಳುವುದಾದರೆ, ಗ್ರಾಮ ಸ್ವರಾಜ್ಯದ ಕಾರ್ಯಶೀಲತೆಗೆ ಒಂದು ಸಂಕೇತವಾಗುಳಿದಿದೆ. "ಚರಕದ ಮೂಲಕ ಭಾರತ ತನ್ನ ಸಂಕೋಲೆಗಳನ್ನು ಕಿತ್ತೊಗೆಯಲು ಪಯತ್ನ ಶೀಲವಾಗಿದೆ. ಈ ಪ್ರಯತ್ನದಲ್ಲಿ ಮಾನವ ಕೋಟಿಯ ವಿಮೋಚನೆಯ ತಿಳುವಳಿಕೆಯೂ ಇದೆ. ಭಾರತದ ಅತ್ಮ ವಿಕಾಸವೂ ಆಗುತ್ತದೆ. ಚರಕದ ದಿವ್ಯ ಸಂಗೀತ, ಆತ್ಮಕ್ಕೆ ಸಾಂತ್ವಾನ ಅಮೃತ, ನೂಲಲು ಪ್ರಾರಂಭಿಸಿ ನೋಡಿ, ಮನಃಶಾಂತಿಗೆ ಅದೆಷ್ಟು ಸಹಾಯಕ ಎಂದು ತಿಳಿದೀತು. ನಮ್ಮ ಜೀವನದ ಅಸ್ತವ್ಯಸ್ತತೆಗಳೆನ್ನೆಲ್ಲ ಹಾಸುಹೊಕ್ಕು ತಿಳಿಯಾಗಿಸುವ ಶಕ್ತಿ ಆ ನೂಲು ಮತ್ತು ಆ ನೂಲುವ ಕ್ರಿಯೆಯಲ್ಲಡಗಿದೆ. ಸಮಸ್ತ ಜೀವರಾಶಿಯೂ ಅಹಿಂಸೆಯ ಆಧಾರದ ಮೇಲೆಯೇ ನಿಂತಿದೆ. ಚರಕ ಆ ಬೃಹತ್ ಜೀವನ ಚಕ್ರದ ಸಂಕೇತ".

ಮನುಷ್ಯ ತನ್ನ ದೈವತ್ವವನ್ನು ಕಂಡುಕೊಳ್ಳುವುದೇ ಜೀವನದ ಪರಮೋದ್ದೇಶವೆಂದು ನಂಬಿದ್ದ ಗಾಂಧೀಜಿ, ಅವನು ಈ ದೈವತ್ವದ ಅರಿವಿನಲ್ಲೇ ಸೃಷ್ಟಿಯ ಏಕತೆ ಕಾಣಬಲ್ಲ ಹಾಗೂ ಸರ್ವಸಮತೆಯಲ್ಲಿರಬಲ್ಲನಾದ್ದರಿಂದ, ಅದಕ್ಕೆ ಪೂರಕವಾದ ದುಡಿಮೆಯ ಪದ್ಧತಿಯನ್ನು ಅಳವಡಿಸಿಕೊಳ್ಳುವುದೇ ಮನುಷ್ಯ ಧರ್ಮವಾಗಿದೆ ಎಂದು ಪ್ರತಿಪಾದಿಸಿದರು.

ಈ ಹಿನ್ನೆಲೆಯಲ್ಲೇ ಅವರು ನಿಜವಾದ ಅರ್ಥಪೂರ್ಣ ಜೀವನಕ್ಕೆ ವಿಶೇಷವಾಗಿ ಜನಬಲವೇ ಬಂಡವಾಳವಾಗಿರುವ ಭಾರತದ ಸಂದರ್ಭದಲ್ಲಿ– ಯಾವ ಪ್ರಮಾಣದ ಕೈಗಾರಿಕೆ ಸೂಕ್ತ ಎಂಬ ಚರ್ಚೆಗೆ ಉತ್ತರ ನೀಡಿದ್ದು, 'ಮನುಷ್ಯ ಪ್ರಮಾಣ'ದ ಕೈಗಾರಿಕೆಯ ಪ್ರತಿಪಾದನೆಯ ಮೂಲಕ ಮನುಷ್ಯನ ದೇಹ ಮತ್ತು ಆತ್ಮಗಳೆರಡರೊಂದಿಗೆ ಸಮರಸದಲ್ಲಿರಬಹುದಾದ ಇಂತಹ ಯಂತ್ರಗಳಿಂದ ಸಾಮಾಜಿಕವಾಗಿ ಸಜ್ಜಾದ ಗ್ರಾಮಗಳು, ಭಾರತವನ್ನು ಒಂದು ಗ್ರಾಮ ಗಣರಾಜ್ಯವನ್ನಾಗಿ ರೂಪಿಸಿ, ಹೊರಗಿನ ಯಾವುದೇ ತೆರನ ದಾಳಿಯ, ಮಿಲಿಟರಿ ದಾಳಿಯೂ ಸೇರಿದಂತೆ ವಿರುದ್ಧ ಸ್ವಯಂ ರಕ್ಷಣೆ ಒದಗಿಸಬಲ್ಲುದು ಎಂದು ಅವರು ನಂಬಿದ್ದರು. ಆರ್ಥಿಕ ಶಕ್ತಿ ಕೇಂದ್ರಗಳು ಭೌಗೋಳಿಕವಾಗಿ ಹರಡಿ ಹೋಗಿರುವುದರಿಂದ ಯಾವುದೇ ತೆರನ ಅಥವಾ ಪ್ರಮಾಣದ ಶಸ್ತ್ರಾಸ್ತ್ರ ದಾಳಿ ರಾಷ್ಟ್ರವನ್ನು ನಿಶ್ಚೇಷ್ಟಿತಗೊಳಿಸಲಾಗುವುದಿಲ್ಲ. ಅಲ್ಲದೆ ಬಡತನವೆಂಬುದು ಸರಕು ಆಧಾರಿತ ಪಶ್ಚಿಮದ ಅರ್ಥಶಾಸ್ತ್ರದ ಅವಿಷ್ಕಾರವಾಗಿದ್ದು, ಜನತಾ ಅರ್ಥಶಾಸ್ತ್ರ ಅದನ್ನು ಕೆಲಸದಿಲ್ಲದಿರುವಿಕೆ ಎಂದು ನಿರೂಪಿಸಿಕೊಂಡು, ಅದರ ಪರಿಹಾರವನ್ನಷ್ಟೇ ತನ್ನ ಗುರಿಯನ್ನಾಗಿಸಿಕೊಳ್ಳಬೇಕು; ಇಲ್ಲದೇ ಹೋದರೆ ದೇಶ, ಪರಿಹಾರವಾದಷ್ಟೂ, ಹೆಚ್ಚುತ್ತಾ ಹೋಗುವ ಸರಕು ಅರ್ಥಶಾಸ್ತ್ರದ ರಾಜಕಾರಣ ಸೃಷ್ಟಿಸುವ ನಿರಂತರ ಬಡತನದ ಚಕ್ರಕ್ಕೆ ಸಿಲುಕಬೇಕಾಗುತ್ತದೆ ಎಂದು ಎಚ್ಚರಿಸಿದರು.

ವೈವಿಧ್ಯಮಯ ಆಕರ್ಷಣೆಗಳೊಂದಿಗೆ ಮುನ್ನುಗ್ಗುತ್ತಿದ್ದ ಪಶ್ಚಿಮದ ಯಂತ್ರ ನಾಗರಿಕತೆಯ ಎದುರು ಅದೂ ಶತಮಾನಗಳ ದಾರಿದ್ರ್ಯದಿಂದ ತಪ್ತವಾಗಿದ್ದ ಭಾರತೀಯ ಸಮಾಜದ ಮಧ್ಯೆ ಇಂತಹ ಅಭಿವೃದ್ಧಿ ಮಾದರಿಯನ್ನಿಡಲು ಯಾರಿಗಾದರೂ ಎಂಟಿದೆಯೇ ಬೇಕು. ಆದರೆ ಗಾಂಧೀಜಿಗೆ ಆಳದ ಸತ್ಯದ ಅರಿವಿತ್ತು; ಅದರ ಕೇಂದ್ರದಿಂದಲೇ ಹೊರಹೊಮ್ಮಿದ ನೈತಿಕ ಸ್ಥೈರ್ಯವೂ ಅವರ ಬೆಂಬಲಕ್ಕಿತ್ತು. ಹಾಗಾಗಿಯೇ ಅವರು ಪಶ್ಚಿಮದ ನಾಗರಿಕತೆ ಬಗ್ಗೆ ಖಚಿತ ಶಬ್ದಗಳಲ್ಲಿ ಹೀಗೆ ಹೇಳಲು ಸಾಧ್ಯವಾಯಿತು: "ಮನುಷ್ಯನಿಗೆ ಒಂದು ಮಟ್ಟದ ಸುಖ ಸೌಲಭ್ಯಗಳು ಅಗತ್ಯವೇ ನಿಜ. ಆದರೆ ಒಂದು ನಿರ್ದಿಷ್ಟ ಮಟ್ಟದಾಚೆಗೆ ಅವು ಸೌಲಭ್ಯವಾಗುಳಿಯದೇ ಬಂಧನಗಳೇ ಆಗುತ್ತವೆ. ಹಾಗಾಗಿ ಮಿತಿಯಿಲ್ಲದ ಅಗತ್ಯಗಳನ್ನು ಸೃಷ್ಟಿಸಿಕೊಳ್ಳುತ್ತಾ ಮತ್ತು ಅವುಗಳನ್ನು ಪೂರೈಸಿಕೊಳ್ಳುತ್ತಾ ಹೋಗುವ ಆರ್ಥಿಕತೆಯ ಆದರ್ಶವು ಒಂದು ಭ್ರಮೆ ಹಾಗೂ ವ್ಯೂಹದಂತಷ್ಟೇ ನನಗೆ ತೋರುತ್ತದೆ. ಮನುಷ್ಯನ ಭೌತಿಕ ಅಗತ್ಯಗಳ ಪೂರೈಕೆ ವ್ಯವಸ್ಥೆಯ ಭೌತಿಕ ಆಶ್ಲೀಲತೆಯಾಗಿ ಅವನತಿಗೊಳ್ಳುವ ಮುನ್ನ, ಒಂದಲ್ಲ ಒಂದು ಹಂತದಲ್ಲಿ ಪೂರ್ಣಾಂತ್ಯಕ್ಕೆ

ಬರಬೇಕು. ಯೂರೋಪಿಯನ್ನರು ತಾವು ಗುಲಾಮರಾಗುತ್ತಿರುವ ಐಷಾರಾಮಗಳ ಭಾರದಡಿಯಲ್ಲಿ ಕುಸಿದು ಹೋಗಬಾರದೆಂದಿದ್ದರೆ ಅವರು ತಮ್ಮ ಜೀವನ ದೃಷ್ಟಿಯನ್ನು ಪುನರ್ ರೂಪಿಸಿಕೊಳ್ಳಬೇಕು".

ಈ ಮಾತುಗಳನ್ನು ಯೂರೋಪಿಯನ್ನರಾದರೂ ತಮ್ಮ ಧ್ಯಾನಸ್ಥ ಸ್ಥಿತಿಯಲ್ಲಿ ಸಹಾನುಭೂತಿಯಿಂದ ಕೇಳಿರಬಹುದು. ಆದರೆ ಗಾಂಧೀಜಿಯ ಆಪ್ತ ಶಿಷ್ಯರಲ್ಲೊಬ್ಬರಾದ ರಾಷ್ಟ್ರದ ಪ್ರಥಮ ಪ್ರಧಾನ ಮಂತ್ರಿಯಾದ ಜವಹರಲಾಲ್ ನೆಹರು ಅವರಿಗೆ, ಇದೆಲ್ಲ ಅಂದಿನ ಜಾಗತಿಕ ಸಂದರ್ಭದಲ್ಲಿ ಅಸಂಗತವೂ ಅಪ್ರಸ್ತುತವೂ ಆಗಿ ಕಂಡಿತು. ಅರ್ಥಶಾಸ್ತ್ರ ಹಾಗೂ ರಾಜಕಾರಣಗಳ ಗುರಿಗಳೆಂದರೆ, ಮನುಷ್ಯನ ಭೌತಿಕ ಅಗತ್ಯಗಳನ್ನು ಪೂರೈಸುತ್ತಾ ಜೀವನ ಮಟ್ಟವನ್ನು ಸುಧಾರಿಸುವುದೇ ಆಗಿದೆ ಎಂಬ 'ಲಂಡನ್ ಸ್ಕೂಲ್ ಆಫ್ ಎಕಾನಾಮಿಕ್ಸ್'ನ ಐರೋಪ್ಯ ಅರ್ಥಶಾಸ್ತ್ರೀಯ ನಂಬಿಕೆಗಳಿಗೆ ಮಾರು ಹೋಗಿದ್ದ ಅವರು, ಆಧುನಿಕ ತಂತ್ರಜ್ಞಾನದ ದಕ್ಷತೆ ಮಾತ್ರ ಭಾರತದ 'ಹಿಂದುಳಿದಿರುವಿಕೆ'ಯ ಸಮಸ್ಯೆಗಳಿಗೆ ಪರಿಹಾರ ಒದಗಿಸಬಲ್ಲುದೆಂದು ದೃಢವಾಗಿ ನಂಬಿದ್ದರು. ಹಾಗಾಗಿಯೇ ಅವರು 1945 ರಲ್ಲಿ ಗಾಂಧೀಜಿ, ತಮ್ಮಿಬ್ಬರಲ್ಲಿ ದೇಶ ಕಟ್ಟುವ ವಿಷಯದಲ್ಲಿ ಭಿನ್ನಮತ ಹೆಚ್ಚುತ್ತಿದೆಯೆಂಬ ಆತಂಕದಿಂದ ಗ್ರಾಮ ಸ್ವರಾಜ್ಯದ ಪರಿಕಲ್ಪನೆಯ ಕಡೆ ಗಮನ ಸೆಳೆದು ತಮಗೆ ಬರೆದ ಪತ್ರಕ್ಕೆ ಉತ್ತರವಾಗಿ, ಸದಾ ಹಿಂದಕ್ಕೆ ನೋಡುವ ಮನೋಧರ್ಮದ ಗ್ರಾಮ ಸಂಸ್ಕೃತಿಯ ಆಧಾರದ ಮೇಲೆ ಆಧುನಿಕ ರಾಷ್ಟ್ರವನ್ನು ಕಟ್ಟಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಆದರೆ ಐರೋಪ್ಯ ಮಾದರಿಯ ಆಧುನೀಕರಣದ ಅವಸರದಲ್ಲಿದ್ದ ನೆಹರೂಗೆ ತಮ್ಮ ಗುರು ಬಹು ಹಿಂದೆಯೇ, "ನನ್ನ ಆದರ್ಶ ಗ್ರಾಮದಲ್ಲಿ ಅತ್ಯಂತ ಬುದ್ಧಿವಂತ ಮಾನವಜೀವಿಗಳಿರುತ್ತಾರೆ. ಸ್ವತಂತ್ರ ಸ್ತ್ರೀ ಪುರುಷರಾಗಿ ಜಗತ್ತಿನ ಮಾನವರೆಲ್ಲರ ಸರಿಸಮಾನರಾಗಿ ಬಾಳುತ್ತಾರೆ. ಅಲ್ಲಿ ಆಧುನಿಕ ಸೌಕರ್ಯಗಳಾದ ಅಂಚೆ-ತಂತಿ-ಸಾರಿಗೆ ಮುಂತಾದವು ಇರುವ ಸಾಧ್ಯತೆಯನ್ನೂ ನಾನು ಊಹಿಸಕೊಳ್ಳಬಲ್ಲೇ. ನನ್ನ ಆದರ್ಶ ಗ್ರಾಮ ಅತ್ಯುತ್ತಮ ಸ್ವಚ್ಛತಾ ವ್ಯವಸ್ಥೆ ಹೊಂದಿರುತ್ತದೆ. ಗಾಳಿ ಬೆಳಕು ಧಾರಾಳವಾಗಿರುವಂತೆ ಸ್ಥಳೀಯ ಸಾಮಗ್ರಿಗಳಿಂದ ಕಟ್ಟಲ್ಪಟ್ಟ ಪ್ರತಿ ಕುಟೀರವೂ ಹಿತ್ತಲು, ಕೊಟ್ಟಿಗೆ, ತರಕಾರಿ ಬೆಳೆಯಲು ಜಾಗ ಹೊಂದಿರುತ್ತದೆ. ನಿರ್ಮಲವಾದ ಅಗಲ ರಸ್ತೆಗಳು, ಸರ್ವರಿಗೂ ತೆರದಿರುವ ಬಾವಿಗಳು, ಸರ್ವಧರ್ಮ, ಪ್ರಾರ್ಥನಾ ಮಂದಿರ, ಸಾರ್ವಜನಿಕ ಸಭಾಂಗಣ ಗೋಮಾಳ, ಸಹಕಾರಿ ಗೋಶಾಲೆ, ಔದ್ಯೋಗಿಕ, ಶಿಕ್ಷಣ ನೀಡುವ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳು ಮತ್ತು ಸ್ಥಳಿಯ ನ್ಯಾಯ ಪಂಚಾಯ್ತಿ ಇರುತ್ತದೆ..." ಎಂದು ತಮ್ಮ ಗ್ರಾಮ ಸ್ವರಾಜ್ಯದ ಕಲ್ಪನೆ ನಿಜವಾದ ಭಾರತದ ಅವಶೇಷ ಮಾತ್ರಗಳಂತಿರುವ ಸದ್ಯದ ಹಳ್ಳಿಗಳನ್ನು ಆಧರಿಸಿದ್ದಲ್ಲ. ಬದಲಿಗೆ ಈ ಹಳ್ಳಿಗಳು ಹೀಗೇಕಾದವು ಎಂಬ ಧ್ಯಾನದಲ್ಲಿ ಹುಟ್ಟಿದುದು ಎಂದು ಸ್ಪಷ್ಟಪಡಿಸಿದ್ದರ ಕಡೆ ಗಮನವೇ ಇದ್ದಂತಿರಲಿಲ್ಲ.

ಇದೆಲ್ಲದರ ಪರಿಣಾಮ, ಇಂದು ಹಲವು ಹಿಂಸಾತ್ಮಕ ರೂಪಗಳಲ್ಲಿ ನಮ್ಮ ಕಣ್ಮೆಂದೆಯೇ ಇದೆ. ಭವಿಷ್ಯ ಭಾರತದ ಭವ್ಯ ದೇಗುಲಗಳೆಂದು ನೆಹರು ವರ್ಣಿಸಿ, ನಿರ್ಮಿಸಿದ ಭಾಕ್ರಾನಂಗಲ್ ಬೃಹತ್ ಅಣೆಕಟ್ಟುಗಳ ಅಚ್ಚುಕಟ್ಟು ಪ್ರದೇಶಗಳು, ಅವು ಒತ್ತಾಯಿಸಿದ ಕೃಷಿ ಪದ್ಧತಿಗಳು ಸೃಷ್ಟಿಸಿದ ಆರ್ಥಿಕ-ಸಾಮಾಜಿಕ-ಸಾಂಸ್ಕೃತಿಕ ವಿರೋಧಾಭಾಸಗಳಿಂದಾಗಿ ಇಂದು ರೈತ ಸಮುದಾಯದ ಪಾಲಿಗೆ ಅಕ್ಷರಶಃ ರುದ್ರಭೂಮಿಗಳಾಗಿ ಪರಿವರ್ತಿತವಾಗುತ್ತಿವೆ. ಆಧುನೀಕರಣದ ಚಕ್ರ ಒಂದು ಸುತ್ತನ್ನು, ಪೂರ್ಣಗೊಳಿಸುತ್ತಿರುವಂತಿದೆ. ಮತ್ತೆ ಗಾಂಧೀಜಿ ನೆನಪಾಗುತ್ತಿದ್ದಾರೆ. ನೆನಪಾಗುವುದೇನು, ರಾಷ್ಟ್ರ ಜೀವನದ ಸುಪ್ತ ಮನಸ್ಸಿನಲ್ಲಿ ಒಂದು ಕೈಗೂಡದ ಆಶಯದ ಪ್ರತೀಕವಾಗಿ ಎಂದೆಂದೂ ನೆಲೆಸಿಯೇ ಇದ್ದಾರೆಂದು ತೋರುತ್ತದೆ. ಹಾಗಾಗಿಯೇ ಈ ಆಧುನೀಕರಣದ ಗೌಜು ಗದ್ದಲಗಳ ನಡೆವೆಯೂ ಮೌನದ ಮಣಿಗಳಂತೆ ಅಲ್ಲಲ್ಲಿ ಹಲವರು ತಮ್ಮದೇ ರೀತಿ ಹಾಗೂ ಮಿತಿಗಳಲ್ಲಿ ಗಾಂಧೀಜಿಯ ಪುನರನ್ವೇಷಣೆಯಲ್ಲಿ ತೊಡಗಿದ್ದಾರೆ. ಈಗ ತನ್ನ ಸ್ವಯಂ ವಿರೋಧಗಳನ್ನು ಮೀರಿ ಬೆಳೆಯಲಾಗದೆ, ಗಂಭೀರ ಬಿಕ್ಕಟ್ಟಿನಲ್ಲಿರುವಂತೆ ತೋರುತ್ತಿರುವ ಆಧುನಿಕ ನಾಗರಿಕತೆಯನ್ನು ಪ್ರತಿನಿಧಿಸುವ ನಗರೀಕರಣಕ್ಕೆ ಪರ್ಯಾಯವಾದ ರಾಷ್ಟ್ರ ನಿರ್ಮಾಣದ ಮಾದರಿಗಳ ಪ್ರಾಯೋಗಿಕತೆ, ಹಲವು ರೂಪಗಳಲ್ಲಿ ಸಂಶೋಧನೆ, ಸಂಘಟನೆ, ಪ್ರತಿಭಟನೆ ಇವರಿಂದ ನಡೆದಿವೆ. ಅವುಗಳಲ್ಲಿ ನಮ್ಮ ಹತ್ತಿರದ ಮತ್ತು ಕುತೂಹಲಕಾರಿ ಪ್ರಯೋಗವೆಂದರೆ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಭೀಮನಕೋಣೆಯಲ್ಲಿ ಪ್ರಸನ್ನ ಹೆಗ್ಗೋಡು ಸ್ಥಾಪಿಸಿರುವ ಚರಕ ಸಂಸ್ಥೆ.

ಸಮಾಜವಾದಿಗಳಿಗೆ ಇದು ಅರ್ಥವಾದಂತೆ ತೋರಲಿಲ್ಲ. ಹಾಗಾಗಿಯೇ ಅವರು ಕೆಟ್ಟದ್ದನ್ನು ಕೆಡವಲು ಯತ್ನಿಸಿದರೇ ಹೊರತು, ಒಳ್ಳೆಯದನ್ನು ಕಟ್ಟುವುದರ ಭಾಗವಾಗಿಯೇ ಕೆಟ್ಟದ್ದನ್ನು ಕೆಡವಬೇಕೆಂಬ ಅರಿವು ಅವರಲ್ಲಿ ಮೂಡಲಿಲ್ಲ. ನಮಗಾದರೂ ಇದು ಅರ್ಥವಾಗುತ್ತಿರುವುದು ಇಷ್ಟು ವರ್ಷಗಳ ನಂತರ. ಗಾಂಧಿ ಇದನ್ನು ತಮ್ಮ 'ಹಿಂದ್ ಸ್ವರಾಜ್' ನಲ್ಲಿ ಹೇಳಿದ ನೂರು ವರ್ಷಗಳ ನಂತರ ನಮ್ಮ ಒಟ್ಟು ಬದುಕು, ಈ ಜಾಗತೀಕರಣದ ಹಲವು ಸುಖಗಳ ಮಧ್ಯೆಯೂ ಮೂಲತಃ ದುಃಖಮಯವೇ ಆಗಿದೆ ಏಕೆ ಎಂಬ ಪ್ರಶ್ನೆಯನ್ನು ಎದುರಿಸುತ್ತಿರುವ ಈ ಸಂದರ್ಭದಲ್ಲಿ ಅಳಿದುಳಿದಿರುವ ಸಮಾಜವಾದಿಗಳು ಇಂದು ತಮ್ಮಲ್ಲಿ ಅಳಿದುಳಿದಿರುವ ಸಮಾಜವಾದಿ ನಂಬಿಕೆಯನ್ನು ಪುನರ್‌ಸಂಘಟಿಸಿಕೊಳ್ಳಲು ಇರುವ ಏಕೈಕ ಮಾರ್ಗವೆಂದರೆ ಗಾಂಧಿಯನ್ನು ಇಂದಿನ ಸಂದರ್ಭಕ್ಕೆ ಪುನರನ್ವೇಷಿಸಿಕೊಳ್ಳುವುದೇ ಆಗಿದೆ.

(ಮಾಹಿತಿ ಸೌಜನ್ಯ : "ಲೋಹಿಯಾ ಜೊತೆಯಲ್ಲಿ" ಕೃತಿಯಿಂದ )






# ಬದನವಾಳು ಗ್ರಾಮದಲ್ಲಿ

# ಗಾಂಧಿ ಹೆಜ್ಜೆಗಳು

**ಬದನವಾಳು ಗ್ರಾಮದ ಖಾದಿ ಗ್ರಾಮೋದ್ಯೋಗ ಕೇಂದ್ರದಲ್ಲಿ ಇಂದಿಗೂ ಚರಕಗಳ ಲಟ್ ಪಟ್ ಶಬ್ದ ಕೇಳಿ ಬರುತ್ತಿದೆ.**

ಅಶೋಕ್ ಕುಮಾರ್. ಡಿ

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗುರುತಿಸಿಕೊಂಡ ನಂಜನಗೂಡು ತಾಲ್ಲೂಕು ಬದನವಾಳು ಗ್ರಾಮ ಗಾಂಧೀಜಿಯವರ ಪಾದ ಸ್ಪರ್ಶದಿಂದ ಪುನೀತವಾಗುವುದರೊಂದಿಗೆ, ಅವರ ಚಿಂತನೆಗಳನ್ನು ಮೈಗೂಡಿಸಿಕೊಂಡು ಗುಡಿ ಕೈಗಾರಿಕೆಗಳನ್ನು ಇಂದಿಗೂ ಕಾಪಿಟ್ಟುಕೊಂಡು ಬಂದಿದೆ. ಅಲ್ಲಿನ ನೂಲು ತೆಗೆಯುವ ಚರಕಗಳ ಲಟ್, ಪಟ್ ಶಬ್ದ ದೂರದವರಗೆ ಕೇಳಿಬರುತ್ತದೆ.

ಮಹಾತ್ಮ ಗಾಂಧಿಯವರು 2 ಬಾರಿ ಅಂದರೆ 1927 ಹಾಗೂ 1934 ರಲ್ಲಿ ಈ ಕೇಂದ್ರಕ್ಕೆ ಭೇಟಿ ನೀಡಿದುದರ ಫಲವಾಗಿ ನೂರಾರು ಮಹಿಳೆಯರು ಖಾದಿ ಬಟ್ಟೆ ನೇಯ್ಗೆಯೊಂದಿಗೆ ಬದುಕು ಕಟ್ಟಿಕೊಂಡಿದ್ದಾರೆ.

1927 ರಲ್ಲಿ ಗಾಂಧಿಯವರು ಸೈಮನ್ ಆಯೋಗದ ವಿರುದ್ಧ ಹೋರಾಟ ಮಾಡುತ್ತ ಹೋರಾಟದ ಭಾಗವಾಗಿ ಮೈಸೂರು ಸಂಸ್ಥಾನಕ್ಕೆ ಭೇಟಿಯಿತ್ತಾಗ, ಸ್ವಾತಂತ್ರ್ಯ ಹೋರಾಟಗಾರ ತಗಡೂರು ರಾಮಚಂದ್ರರಾಯರನ್ನು ಭೇಟಿ ಮಾಡುವ ಮೂಲಕ  ಮೈಸೂರು ಅರಸರು ಬದನವಾಳು ಗ್ರಾಮದಲ್ಲಿ ಆರಂಭಿಸಿದ್ದ ಖಾದಿ ಗ್ರಾಮೋದ್ಯೋಗ ಕೇಂದ್ರವನ್ನು ಕಂಡು ಸಂತಸಗೊಂಡು ಪ್ರೇರೇಪಿಸಿದುದರ ಫಲವಾಗಿ ಮತ್ತಷ್ಟು ಗುಡಿ ಕೈಗಾರಿಕೆಗಳು ಆರಂಭಗೊಂಡವು.

ಗಾಂಧಿಯವರು ಭೇಟಿ ನೀಡಿದ ಕುರುಹಾಗಿ ಅವರು ಭೇಟಿ  ನೀಡಿದ ಸ್ಥಳವನ್ನು  ಬದನವಾಳು ನೂಲುವ ಪ್ರಾಂತ್ಯ ಎಂಬ ಕಲ್ಲನ್ನು ಶಿಲಾನ್ಯಾಸ








ಮಾಡುವ ಮೂಲಕ ಬದನವಾಳು ಖಾದಿ ಗ್ರಾಮೋದ್ಯೋಗ ಸಹಕಾರ ಸಂಘ ಎಂಬ ಸಂಸ್ಥೆ ಉದಯಕ್ಕೆ ಕಾರಣರಾದರು. ಅದರ ಕುರುಹಾಗಿ 1927 ನೇ ಇಸವಿ ಹಾಗೂ ಚರಕ ಚಿತ್ರವಿರುವ ಕಲ್ಲನ್ನು ಕೆತ್ತಲಾಗಿದ್ದು ಸ್ಥಳೀಯರ ಮುಂದಾಳತ್ವದಲ್ಲಿ ಗಾಂಧಿಯವರ ಪುತ್ಥಳಿ ಹಾಗೂ ಮಂಟಪವನ್ನು ನಿರ್ಮಿಸಲಾಗಿದೆ.

ನಂತರ 1934 ರಲ್ಲಿ ಹರಿಜನ ಸೇವಕ ಸಂಘದ ಕಾರ್ಯಕ್ರಮಗಳಿಗೆ ಗಾಂಧಿಯವರು ದೇಣಿಗೆ ಸಂಗ್ರಹದ ಭಾಗವಾಗಿ ಮತ್ತೊಮ್ಮೆ ಮೈಸೂರು ಪ್ರಾಂತ್ಯಕ್ಕೆ ಭೇಟಿ ನೀಡಿದಾಗ ಬದನವಾಳು ಕೇಂದ್ರದ ಚರಕ ಕೇಂದ್ರ ಹೇಗೆ ನಡೆಯುತ್ತಿದೆ ಎಂದು ನೋಡಲು ಮತ್ತೊಮ್ಮೆ ಭೇಟಿ ನೀಡಿದ್ದರು.

ಗಾಂಧಿಯವರು ಮೊದಲ ಬಾರಿ ಭೇಟಿ ಕೊಟ್ಟ ನಂತರ ಮೈಸೂರು ಅರಸರ ಒತ್ತಾಸೆಯಂತೆ ಗ್ರಾಮದಲ್ಲಿ ಗ್ರಾಮೀಣ ಗುಡಿ ಕೈಗಾರಿಕೆಗಳಾದ ಬೆಂಕಿಕಡ್ಡಿ, ಕೈ ಕಾಗದ (Hand made paper) ಬಡಗಿ ಮತ್ತು ಕಮ್ಮಾರಿಕೆ, ಏಕದಳ ಹಾಗೂ ದ್ವಿದಳ ಧಾನ್ಯ ಪರಿಷ್ಕರಣೆ, ಅವಲಕ್ಕಿ, ಮುರ್ ಮುರಾ, ನಾರಿನ ಉತ್ಪನ್ನಗಳ ತಯಾರಿಕೆ, ಗ್ರಾಮೀಣ ಎಣ್ಣೆ ಮತ್ತು ನಾರಿನ ಉದ್ದಿಮೆಗಳ ತರಬೇತಿ ಮತ್ತು ಉತ್ಪಾದನಾ ಕಾರ್ಯ ಚಟುವಟಿಕೆಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಸುಮಾರು 500 ಜನರಿಗೆ ಉದ್ಯೋಗ ನೀಡಲಾಗಿತ್ತು. ಅದನ್ನು ಕಂಡ ಗಾಂಧಿಯವರು ಬಹಳ ಸಂತಸಗೊಂಡಿದ್ದರು ಎಂಬುದನ್ನು ಸ್ಥಳೀಯರು ನೆನೆಯುತ್ತಾರೆ.

ಈ ಸ್ಥಳದಲ್ಲಿ ಪ್ರಸ್ತುತ ಖಾದಿ ಉದ್ದಿಮೆ ಮಾತ್ರ ಕಾರ್ಯನಿರ್ವಹಿಸುತ್ತಿದೆ. ಇಂದು ಈ ಕೇಂದ್ರವನ್ನು ಹೊಳೆನರಸೀಪುರ, ಹಾಸನ ಜಿಲ್ಲೆ ಖಾದಿ ಗ್ರಾಮೋದ್ಯೋಗ ಸಂಘದವರು ಮುನ್ನಡೆಸಿಕೊಂಡು ಹೋಗುತಿದ್ದು, ಸರ್ಕಾರ ಪ್ರೋತ್ಸಾಹ ಮಜೂರಿ ನೀಡುತ್ತಿದೆ. ಚರಕದಿಂದ ನೇಯುವ ಬಟ್ಟೆಗೆ 35 ರೂ ಕೂಲಿ ಸಿಗುತಿದ್ದು, ಖಾದಿ ದಾರದ ಒಂದು ಲಡಿಗೆ 3 ರೂ ಹಾಗೂ ಒಂದು ಮೀಟರ್ ಬಟ್ಟೆಗೆ ಖಾದಿ ಗ್ರಾಮೋದ್ಯೋಗ ಮಂಡಳಿಯಿಂದ 7 ರೂ ಪ್ರೋತ್ಸಾಹ ಮಜೂರಿ ದೊರೆತರೆ ಒಬ್ಬ ಮಹಿಳೆ ಒಂದು ದಿನಕ್ಕೆ 150 ರಿಂದ 200 ರೂ ಗಳಿಸುತ್ತಾರೆ. ಈ ಮಹಿಳೆಯರು ತಮ್ಮ ಮನೆಯ ಕೆಲಸ ಕಾರ್ಯಗಳನ್ನು ಮುಗಿಸಿ ಬಿಡುವಿನ ವೇಳೆಯಲ್ಲಿ ಇಲ್ಲಿ ಕಾರ್ಯ ನಿರ್ವಹಿಸುತ್ತಾರೆ.

ಸುಮಾರು 5 ಎಕರೆ ವಿಸ್ತೀರ್ಣದಲ್ಲಿರುವ ಕೇಂದ್ರದ ಮುಂಭಾಗ ಕಾಂಪೌಂಡ್ ನಿರ್ಮಾಣವಾಗುತ್ತಿದೆ. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಇಲಾಖೆ ವತಿಯಿಂದ ಬದನವಾಳು ಖಾದಿ ಕೇಂದ್ರದಲ್ಲಿ ಸಬರಮತಿ ಆಶ್ರಮ ಕಟ್ಟಡವನ್ನು ಕೆ.ಆರ್.ಐ.ಡಿ.ಎಲ್ ಇವರಿಂದ ನಿರ್ಮಿಸಲಾಗುತಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.

ಉದ್ಯಾನವನದಲ್ಲಿ ಗಾಂಧೀಜಿ ಯವರು ದಂಡೀಯಾತ್ರೆ ಕೈಗೊಂಡಿರುವ ಪ್ರತಿಮೆಗಳನ್ನು ಹಾಗೂ ಗ್ರಾಮ ಸ್ವರಾಜ್ಯಕ್ಕೆ ಹಾಗೂ ಸ್ವಾವಲಂಬನೆಗೆ ಒತ್ತು ನೀಡಿರುವ ಪ್ರತಿಮೆಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

ಮಹಾತ್ಮ ಗಾಂಧಿಯವರು 1927 ರಲ್ಲಿ ಈ ಗ್ರಾಮದ ಜನರನ್ನು ಉದ್ದೇಶಿ ಮಾತನಾಡಿದ ಸ್ಥಳದಲ್ಲಿ 1950 ರಲ್ಲಿ ನಿರ್ಮಿಸಿದ್ದ ಕಟ್ಟಡ ಶಿಥಿಲಗೊಂಡಿದ್ದು, ಸದರಿ ಕಟ್ಟಡವನ್ನು ನವೀಕರಣ ಮಾಡಿ ಮುಂದಿನ ಪೀಳಿಗೆಗೆ ಪರಿಚಯಿಸಲು ಉದ್ದೇಶಿಸಲಾಗಿದೆ.

### ಬದನವಾಳು ಗ್ರಾಮ:

ಮೈಸೂರು ಜಿಲ್ಲೆ, ನಂಜನಗೂಡು ತಾಲೂಕಿಗೆ ಸೇರಿರುವ ಬದನವಾಳು ಗ್ರಾಮ ನಂಜನಗೂಡಿನಿಂದ ಚಾಮರಾಜನಗರಕ್ಕೆ ಹೋಗುವ ರಸ್ತೆ ಮಾರ್ಗದಲ್ಲಿದ್ದು, ಸದರಿ ಗ್ರಾಮಕ್ಕೆ ರಸ್ತೆ ಸಂಪರ್ಕವೂ ಇದೆ. ರೈಲ್ವೆ ಇಲಾಖೆಯ ದಾಖಲಾತಿ ಪ್ರಕಾರ ಸದರಿ ಗ್ರಾಮವನ್ನು ನರಸಾಂಬುಧಿ ಎಂದು ಕರೆಯಲಾಗುತಿದ್ದು, 2011 ರ ಜನಗಣತಿಯ ಪ್ರಕಾರ 632 ಕುಟುಂಬಗಳನ್ನು ಹೊಂದಿರುವ ಗ್ರಾಮದ ಜನಸಂಖ್ಯೆ 2784. ಈ ಗ್ರಾಮ ಒಂದು ಬಾರಿ ಜಾತಿ ಸಂಘರ್ಷಕ್ಕೊಳಗಾಗಿ ಸುದ್ದಿಯಾಗಿತ್ತಾದರೂ ಇಂದು ಜನ ಸಾಮರಸ್ಯದಿಂದಿದ್ದಾರೆ.

ಬದನವಾಳು ಕೇಂದ್ರಕ್ಕೆ ಹಲವಾರು ಗಣ್ಯರು ಭೇಟಿ ನೀಡಿದ್ದು, ಹೋರಾಟಗಾರ್ತಿ ಮೇಧಾಪಾಟ್ಕರ್, ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದ ರಾಹುಲ್ ಗಾಂಧಿ, ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಉಪಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್, ರಾಜ್ಯ ಸರ್ಕಾರದ ಹಲವು ಸಚಿವರುಗಳು, ಶಾಸಕರು, ಜನಪ್ರತಿನಿಧಿಗಳು ಭೇಟಿ ನೀಡಿರುತ್ತಾರೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಪದವಿ ಪೂರ್ವ ವಿದ್ಯಾರ್ಥಿಗಳಿಗೆ " ದೇಶದ ಅಸ್ಪೃಶ್ಯತೆ ನಿವಾರಿಸುವಲ್ಲಿ ಗಾಂಧೀಜಿಯವರ ಪ್ರಯೋಗಗಳು" ಎಂಬ ವಿಷಯದಲ್ಲಿ ಏರ್ಪಡಿಸಲಾಗಿದ್ದ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಪ್ರಬಂಧ.

# ನನ್ನ ಮೇಲೆ ಪ್ರಭಾವ ಬೀರಿದ ಗಾಂಧೀಜಿ ಅವರ ತತ್ವ ಸಿದ್ಧಾಂತಗಳು

**ಡಿ. ಧನುಶ್ರೀ**
ತೃತೀಯ ಬಿ.ಎ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿವಮೊಗ್ಗ

**ಜ**ಗತ್ತು ಕಂಡ ಅತ್ಯಂತ ಶ್ರೇಷ್ಠ ವ್ಯಕ್ತಿಗಳಲ್ಲಿ ಮಹಾತ್ಮಾ ಗಾಂಧೀಜಿಯವರು ಒಬ್ಬರು. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ನಾಯಕತ್ವವನ್ನು ವಹಿಸಿಕೊಂಡು ಹೋರಾಟ ನಡೆಸಿದ ಇವರ ಪಾತ್ರವು ಬಹಳ ಅಗ್ರಗಣ್ಯವಾಗಿರುವಂತಹದ್ದು. ಸ್ವಾತಂತ್ರ್ಯಕ್ಕಾಗಿ ಅಷ್ಟೇ ಅಲ್ಲ ಗುಲಾಮಗಿರಿಯನ್ನು ಹೋಗಲಾಡಿಸಲು, ಸಹಿಷ್ಣುತೆಯಿಂದ ಜೀವನ ನಡೆಸಲು, ಬ್ರಿಟಿಷರ ದಾಸೋತ್ಯದಿಂದ ಮುಕ್ತಿಗೊಳಿಸಲು ಮಹಾತ್ಮ ಗಾಂಧೀಜಿಯವರು ತಾಳಿಕೊಂಡಿರುವಂತಹ ಸಹಿಷ್ಣುತೆ ಬಹಳ ಶ್ರೇಷ್ಠತೆಯದಾಗಿದೆ. ಹಾಗೂ ಪ್ರಭಾವ ಬೀರುತ್ತದೆ. ಮಹಾತ್ಮಾ ಗಾಂಧೀಜಿಯವರು ಇಷ್ಟೆಲ್ಲ ಶ್ರೇಷ್ಠ ಸ್ಥಾನ ಪಡೆಯಲು ಅವರ ಮೇಲೆ ಪ್ರಭಾವ ಬೀರಿದಂತಹ ಘಟನೆಗಳು, ಲೇಖನಗಳು, ಕೆಲವೊಂದು ವಿಚಾರಧಾರೆಗಳು ಸಹ ಅಷ್ಟೇ ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ.

ಗಾಂಧೀಜಿಯವರು ಭಾರತೀಯರ ಪಾಲಿಗೆ ಒಬ್ಬ ಯುಗ ಪುರುಷರಾಗಿದ್ದರು. ಸತ್ಯ ಅಹಿಂಸೆಯ ಮಾರ್ಗದಲ್ಲಿ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟು, ವಿಶ್ವಕ್ಕೆ ಮೊದಲಿಗರೆನಿಸಿದರು.

ಅವರು 1869 ಅಕ್ಟೋಬರ್ 2 ರಂದು ಗುಜರಾತ್‌ನ ಪೋರಬಂದರಿನಲ್ಲಿ ಜನಿಸಿದರು. ತಂದೆ ಕರಮಚಂದ ಗಾಂಧಿ ಮತ್ತು ತಾಯಿ ಪುತಲಿಬಾಯಿ. ಗಾಂಧೀಜಿಯವರು ಬಾಲ್ಯದಲ್ಲಿಯೇ ಸತ್ಯನಿಷ್ಠೆ, ಆಧ್ಯಾತ್ಮಿಕ, ಪ್ರೇಮ, ಸೇವಾಭಾವ ಹೊಂದಿದ್ದವರು. ಹರಿಶ್ಚಂದ್ರನ ಸತ್ಯ ಪ್ರಿಯತೆ, ಶ್ರವಣನ ಪಿತೃಪ್ರೇಮ ಅವರ ಮೇಲೆ ಬಹಳ ಪರಿಣಾಮ ಬೀರಿದ್ದವು. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದ ನಂತರ ಉನ್ನತ ವಿದ್ಯಾಭ್ಯಾಸಕ್ಕಾಗಿ ಲಂಡನ್ನಿಗೆ ತೆರಳಿದ ಗಾಂಧೀಜಿ, ಅಲ್ಲಿ ಬ್ಯಾರಿಸ್ಟರ್ ಪದವಿಯನ್ನು ಪಡೆದರು. ನಂತರ ದಕ್ಷಿಣ ಆಫ್ರಿಕಾದಲ್ಲಿ ಕಾರ್ಯ ಪ್ರವೃತ್ತರಾದರು. ಅಲ್ಲಿನ ಜನರು ಎದುರಿಸುತ್ತಿದ್ದ ಸಮಸ್ಯೆಗಳಿಗೆ ಸ್ಪಂಧಿಸಿದರಲ್ಲದೆ ತಮ್ಮ ದೇಶದ ಜನರನ್ನು ಬ್ರಿಟಿಷರ ಸಂಕೋಲೆಯಿಂದ ಬಿಡುಗಡೆಗೊಳಿಸಬೇಕೆಂಬ ಹಂಬಲದಿಂದ ಭಾರತಕ್ಕೆ ಮರಳಿದರು.

ಮಹಾತ್ಮ ಗಾಂಧೀಜಿವರ ತತ್ವಗಳು ವಿದ್ಯಾರ್ಥಿಗಳ ಮೇಲೆ ಅದ್ಭುತ ಪ್ರಭಾವ ಬೀರಬಲ್ಲವು. ಅವರ ಅಹಿಂಸಾ ಸಿದ್ಧಾಂತ, ಸತ್ಯಾಗ್ರಹ, ಸಂಯಮ ಮುಂತಾದ ಮೌಲ್ಯಗಳು ನಮ್ಮ ಚಾರಿತ್ರಿಕ ಮತ್ತು ನೈತಿಕ ವಿಕಾಸಕ್ಕೆ ಸಹಾಯ ಮಾಡುತ್ತವೆ. ಇವುಗಳ ಮೂಲಕ ವಿದ್ಯಾರ್ಥಿಗಳು ಸಮಾಜದ ಹೊರಗಿನ ಪ್ರಶ್ನಾಂಶಗಳನ್ನು ವಿಚಾರಿಸಿ ಅದಕ್ಕೆ ಸಾಹಿತ್ಯ ಪರಿಹಾರಗಳನ್ನು ಸಂಯೋಜಿಸುವ ಕೌಶಲ್ಯವನ್ನು ಹೊಂದುತ್ತಾರೆ. ಗಾಂಧೀಜಿಯವರ ಸತ್ಯಾಗ್ರಹ ಅಭಿವೃದ್ಧಿಗೆ ಬೇಕಾದ ಯೋಗ್ಯತೆಗಳನ್ನು ಕೊಡುತ್ತದೆ.

ಗಾಂಧೀಜಿವರ ತತ್ವಗಳು ನಮ್ಮ ಮನಸ್ಸಿಗೆ ನೈತಿಕ ಮತ್ತು ಸಾಮಾಜಿಕ ಜವಾಬ್ದಾರಿಯ ಅರುಚಿಯನ್ನು ತುಂಬಿ ನಮ್ಮನ್ನು ಬೆಳೆಸುತ್ತದೆ. ಹಾಗಾಗಿ ಮಹಾತ್ಮಾ ಗಾಂಧೀಜಿಯವರ ತತ್ವಗಳು ನನ್ನ ಮೇಲೆ ಅತ್ಯಂತ ಆಳವಾಗಿ ಪ್ರಭಾವ ಬೀರಿದೆ.

ಗಾಂಧೀಜಿಯವರ ತತ್ವಗಳು ಮತ್ತು ಸಿದ್ಧಾಂತಗಳು

- **ಅಹಿಂಸಾ ಸಿದ್ಧಾಂತ**
- **ಸತ್ಯಾಗ್ರಹ**
- **ಸಂಯಮ**
- **ಸಾಮಾಜಿಕ ನೈತಿಕತೆ**
- **ಸಮಾನತೆ**
- **ಸೇವಾ ಮನೋಭಾವ**

**ಅಹಿಂಸಾ ಸಿದ್ಧಾಂತ :**

ಗಾಂಧೀಜಿಯವರ ಅಹಿಂಸಾ ಸಿದ್ಧಾಂತವು ವಿದ್ಯಾರ್ಥಿಗಳಲ್ಲಿ ಸಹನೆ ಮತ್ತು ಪ್ರೀತಿಯ ಭಾವನೆಗಳನ್ನು ಬೆಳೆಸುತ್ತದೆ. ಅಹಿಂಸಾ ಸಿದ್ಧಾಂತವು ವಿದ್ಯಾರ್ಥಿಗಳಿಗೆ ನಿರಂತರ ವಾತಾವರಣದಲ್ಲಿ ಸಹನೆಯನ್ನು ಸಾಧಿಸುವ ಕೌಶಲ್ಯವನ್ನು ಅಭಿವೃದ್ಧಿ ಪಡಿಸುತ್ತದೆ.

ಗಾಂಧೀಜಿಯವರ ಅಹಿಂಸಾ ಸಿದ್ಧಾಂತವನ್ನು ನಾನೂ ಹಲವಾರು ರೀತಿಯಲ್ಲಿ ಅಳವಡಿಸಿಕೊಂಡಿದ್ದೇನೆ. ಬೇರೆಯವರಿಗೆ ಹಿಂಸೆಯನ್ನು ಮಾಡುವುದಿಲ್ಲ. ಪ್ರಾಣಿ, ಪಕ್ಷಿಗಳನ್ನು ಕೊಲ್ಲುವುದಿಲ್ಲ. ಸಾಮಾಜಿಕವಾಗಿ, ಆರ್ಥಿಕವಾಗಿ, ಮಾನಸಿಕವಾಗಿ ಯಾರಿಗೂ ನಾನು ಹಿಂಸೆಯನ್ನು ಮಾಡುವುದಿಲ್ಲ. ನನ್ನ ಹಿರಿಯರು ಮತ್ತು ಕಿರಿಯರಿಗೆ ಗೌರವ ಕೊಟ್ಟು ಮಾತನಾಡಿಸುತ್ತೇನೆ. ಯಾವುದೇ ರೀತಿಯಲ್ಲೂ ಹಿಂಸೆಯಿಂದ ಮಾತನಾಡುವುದು, ಮನಸ್ಸಿಗೆ ನೋವು ಉಂಟು ಮಾಡುವ ಹಾಗೆ ನಡೆದುಕೊಳ್ಳುವುದಿಲ್ಲ. ಹೀಗೆ ಗಾಂಧೀಜಿವರ ಅಹಿಂಸಾ ತತ್ವಗಳನ್ನು ನಾನು ಈ ಮೇಲಿನಂತೆ ಅಳವಡಿಸಿಕೊಂಡಿದ್ದೇನೆ.



**ಸತ್ಯಾಗ್ರಹ:**

ನಾನು ನನ್ನ ಜೀವನದಲ್ಲಿ ನಡೆದಂತಹ ಘಟನೆಗಳ ಬಗ್ಗೆ ಯಾವುದೇ ರೀತಿಯಲ್ಲೂ ಸುಳ್ಳು ಹೇಳಿಲ್ಲ. ಇತ್ತೀಚಿನ ರಾಜಕೀಯದಲ್ಲಿ, ಮನೆಗಳಲ್ಲಿ ಸುಳ್ಳೇ ಜೀವನವಾಗಿದೆ. ಮನೆಯಿಂದ ಎಲ್ಲಾದರೂ ಹೊರಗೆ ಹೋಗಬೇಕೆಂದರೆ ನನ್ನ ತಂದೆ ತಾಯಿಗೆ ಸತ್ಯವನ್ನೇ ಹೇಳಿ ಹೋಗುತ್ತೇನೆ. ಯಾವುದೇ ರೀತಿಯಲ್ಲಿ ವಂಚನೆ ಮಾಡುವುದಿಲ್ಲ ಹಾಗೂ ಗುರು ಹಿರಿಯರಲ್ಲಿ ಸುಳ್ಳು ಹೇಳುವುದಿಲ್ಲ. ಒಳ್ಳೆಯ ಕೆಲಸಗಳು ಆಗಬೇಕಾದಲ್ಲಿ ಗಾಂಧೀಜಿಯವರ ಅಹಿಂಸಾ ಸತ್ಯಾಗ್ರಹ ಮಾದರಿಯಲ್ಲಿ ನಾನು ಮುನ್ನಡೆಯುತ್ತೇನೆ.

**ಸಂಯಮ :**

ಗಾಂಧೀಜಿಯವರ ಸಂಯಮ ವಿದ್ಯಾರ್ಥಿಗಳಲ್ಲಿ ಉತ್ತಮ ನಡತೆ ಮತ್ತು ಆದರ್ಶದ ಅರಿವನ್ನು ಬೆಳೆಸುತ್ತದೆ.

ಗಾಂಧೀಜಿವರು ಎಷ್ಟು ಸಮಾಧಾನದಿಂದ ತಾಳ್ಮೆಯಿಂದ ಇದ್ದರೋ ಹಾಗೆಯೇ ನಾನೂ ಕೂಡ ತುಂಬಾ ವಿಷಯಗಳನ್ನು ತಾಳ್ಮೆಯಿಂದ ನಿಭಾಯಿಸುತ್ತೇನೆ ಹಾಗೂ ಶಾಂತಿಯಿಂದ ಎಲ್ಲಾ ಕೆಲಸ ಕಾರ್ಯಗಳನ್ನು ಮಾಡುತ್ತೇನೆ. ಒಳ್ಳೆಯ ನಡತೆಯಿಂದ ಎಲ್ಲರನ್ನು ಮಾತನಾಡಿಸುತ್ತೇನೆ. ಹಾಗೂ ಯಾವ ರೀತಿಯಿಂದಲೂ ಎಂದಿಗೂ ಗಾಂಧೀಜಿಯವರ ತತ್ವಗಳನ್ನು ಮೀರುವುದಿಲ್ಲ.

**ಸಾಮಾಜಿಕ ನೈತಿಕತೆ:**

ಗಾಂಧೀಜಿವರ ನೈತಿಕ ಮತ್ತು ಸಾಮಾಜಿಕ ಆದರ್ಶಗಳು ವಿದ್ಯಾರ್ಥಿಗಳಿಗೆ ಇತರರ ಕಷ್ಟದಲ್ಲಿ ಸಹಾಯ ಮಾಡುವ ಮತ್ತು ಸಮಾಜಕ್ಕೆ ಸೇವೆ ಮಾಡುವ ಉದ್ದೇಶವನ್ನು ಅನುಸರಿಸಲು ಉತ್ತೇಜನ ಹುಟ್ಟಿಸುತ್ತದೆ. ಗಾಂಧೀಯವರು ಹಲವಾರು ರೀತಿಯಲ್ಲಿ ದೇಶದ ಸ್ವಚ್ಛತೆಗಾಗಿ ಕೂಡ ಸಾಮಾಜಿಕ ಹೋರಾಟ ನಡೆಸಿದರು. ನಿಸ್ವಾರ್ಥ ಸೇವೆಯು ನೈತಿಕ ಆದರ್ಶಗಳನ್ನು ಅನುಸರಿಸಲು ಮತ್ತು ಸಮಾಜ ಸುಧಾರಣೆಗೆ ಉತ್ತೇಜಿಸುತ್ತದೆ.

ಗಾಂಧೀಜಿವರು ಹೇಳುವಂತೆ ದೇಶವನ್ನು ಸ್ವಚ್ಛವಾಗಿಡುವ ನಿಟ್ಟಿನಲ್ಲಿ ನಾನು ಎಲ್ಲೇಗೇ ಹೋದರು ಪ್ಲಾಸ್ಟಿಕ್ ಬಳಕೆಯನ್ನು ಆದಷ್ಟು ಕಡಿಮೆ ಮಾಡುತ್ತೇನೆ. ಹಾಗೆಯೇ ನನ್ನ ಸುತ್ತ ಮುತ್ತಲಿನ ಜನರಿಗೆ ಪ್ಲಾಸ್ಟಿಕ್ ಕಡಿಮೆ ಬಳಸಿರಿ ಎಂದು ಸಲಹೆ ನೀಡುತ್ತೇನೆ. ಮರ–ಗಿಡಿಗಳನ್ನು ಕಡಿಯದೇ ಬೆಳೆಸಿರಿ, ಮರದಿಂದ ಮಾಡಿದ ವಸ್ತುಗಳನ್ನು ಕೊಳ್ಳಬೇಡಿ, ಮನೆಗಳಲ್ಲಿ ಅಡುಗೆ ಮಾಡಲು ಬಳಸಬೇಡಿ ಎಂದು ಸಲಹೆ ನೀಡುತ್ತೇನೆ. ಇದು ನಾನು ಅನುಸರಿಸಿಕೊಂಡಿರುವ ಸಾಮಾಜಿಕ ಮತ್ತು ನೈತಿಕತೆಯ ತತ್ವಗಳಾಗಿದೆ.

**ಸಮಾನತೆ :**

ಗಾಂಧೀಜಿವರು ಹೇಳುವಂತೆ ಹಿಂದೂ, ಕ್ರೈಸ್ತ, ಮುಸ್ಲಿಂ, ಜೈನ್, ಬೌದ್ಧ ಧರ್ಮದ ಎಲ್ಲರೂ ಒಂದಾಗಿ ಸಮಾನತೆಯಿಂದ ಬಾಳ್ವೆಯನ್ನು ನಡೆಸಬೇಕು. ಎಲ್ಲರಲ್ಲೂ ನಾವೆಲ್ಲ ಒಂದೇ ಎಂಬ ಮನೋಭಾವನೆಯನ್ನು ಬೆಳೆಸಬೇಕು.



ಯಾವುದೇ ಧರ್ಮವಿರಲಿ, ಯಾವುದೇ ಜಾತಿ ಇರಲಿ, ಭೇದ ಭಾವ ಮಾಡಬಾರದು. ಮೇಲು ಕೀಳು ಭಾವನೆ ಇರಬಾರದು. ನಾನು ಹುದ್ದೆಗೆ ಸೇರಿದ ಜಾಗದಲ್ಲಿ ಯಾರೊಂದಿಗೂ  ಭೇದ ಭಾವ ಮಾಡುವುದಿಲ್ಲ. ಹಾಗೂ ನಾವೆಲ್ಲ ಒಂದೇ ಎಂಬಂತೆ ಕಾಣುತ್ತೇನೆ.

**ಸೇವಾ ಮನೋಭಾವ :**

ಗಾಂಧೀಜಿವರು ಭೇದ ತೋರದೇ, ಎಲ್ಲರನ್ನು ತನ್ನವರು ಎಂದುಕೊಂಡು ಸೇವೆ ಮಾಡುತ್ತಿದ್ದರು. ಹಾಗೂ ತಮ್ಮ ಕೆಲಸ ತಾವೇ ಮಾಡಿಕೊಳ್ಳುತ್ತಿದ್ದರು. ದಿನಕ್ಕೆ 2 ಬಾರಿ ಊಟ ಮಾಡಿ ಒಂದು ಹೊತ್ತಿನ ಊಟವನ್ನು ಬೇರೆಯವರಿಗೆ ನೀಡಿ ಸೇವೆ ಮಾಡುತ್ತಿದ್ದರು. ವಿದೇಶಿಯರ ಬಟ್ಟೆಗಳನ್ನು ಧರಿಸುತ್ತಿರಲಿಲ್ಲ, ಹಾಗೂ ತಾವೇ ನೇಯ್ದ ಬಟ್ಟೆಯನ್ನು ಧರಿಸುತ್ತಿದ್ದರು. ವಿದೇಶಿಯರ ಯಾವುದೇ ವಸ್ತುವನ್ನು ಮುಟ್ಟುತ್ತಿರಲಿಲ್ಲ.

ಅವರ ಈ ತತ್ವವನ್ನು ನಾನು ಕೂಡ ಹಲವಾರು ಬಗೆಯಲಿ ಅಳವಡಿಸಿಕೊಂಡಿದ್ದೇನೆ. ಅಂದರೆ ವಿದೇಶಿಯವರ ಯಾವುದೇ ವಸ್ತುಗಳನ್ನು ಖರೀದಿಸುವುದಿಲ್ಲ, ನಮ್ಮ ದೇಶದಲ್ಲೇ ತಯಾರಿಸುವ ಬಟ್ಟೆಗಳನ್ನು ಧರಿಸುತ್ತೇನೆ. ಹಾಗೂ ಉದ್ಯೋಗಕ್ಕಾಗಲಿ, ಪ್ರವಾಸಕ್ಕಾಗಲಿ ವಿದೇಶಕ್ಕೆ ನಾನು ಹೋಗುವುದಿಲ್ಲ. ಹಾಗೂ ಹಿರಿಯರ ಸೇವೆ ಮಾಡುತ್ತೇನೆ. ಹಾಗೂ ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಪಾಲ್ಗೊಳ್ಳುವ ಮೂಲಕ ದೇಶಕ್ಕಾಗಿ ನನ್ನ ಕೈಲಾದ ಸೇವೆಯನ್ನು ಮಾಡುತ್ತೇನೆ.

**ಇತರರ ತಪ್ಪು ಕಂಡು ಹಿಡಿಯವ ಕೆಲಸ ಮಾಡುವುದಿಲ್ಲ:**

ಬೇರೆಯವರು ಯಾವುದೇ ಕೆಲಸ ಕಾರ್ಯ ಮಾಡುವಾಗ ಅವರ ತಪ್ಪನ್ನು ಕಂಡುಹಿಡಿದು ದ್ವೇಷ ಸಾಧಿಸುವ ಅಭ್ಯಾಸ ನನಗಿಲ್ಲ. ಎಲ್ಲರೊಂದಿಗೆ ಸ್ನೇಹದಿಂದ ಇರಲು ಬಯಸುತ್ತೇನೆ. ನನ್ನ ಕೆಲಸ ಎಷ್ಟಿದೇ ಅಷ್ಟೆ ನೋಡುತ್ತೇನೆ. ಬೇರೆಯವರ ಜೀವನದ ಮಧ್ಯೆ ನಾನು ಹೋಗುವುದಿಲ್ಲ, ಇದು ನನ್ನ ಅಭ್ಯಾಸವಾಗಿದೆ.

**ತಪ್ಪನ್ನು ಒಪ್ಪಿಕೊಳ್ಳುವುದು:**

ತಪ್ಪು ಮಾಡುವುದು ಸಹಜ ಗುಣ. ಆದರೆ ನಾನು ಮಾಡಿದ ತಪ್ಪನ್ನು ವಾದ ಮಾಡದೇ ತಕ್ಷಣ ಒಪ್ಪಿಕೊಳ್ಳುತ್ತೇನೆ. ನನ್ನ ತಪ್ಪನ್ನು ಒಪ್ಪಿಕೊಳ್ಳದೆ ಹಠ ಮಾಡುವುದಿಲ್ಲ. ತಪ್ಪು ಮಾಡಿದ್ದರೆ ಖಂಡಿತಾ ಕ್ಷಮಾಪಣೆ ಕೇಳುತ್ತೇನೆ. ತಪ್ಪೆ ಮಾಡಿಲ್ಲ ಅಂದರೆ ಮಾತ್ರ ನಾನು ವಾದಿಸುತ್ತೇನೆ. ಯಾರನ್ನು ದ್ವೇಷಿಸುವುದಿಲ್ಲ. ಎಲ್ಲರನ್ನೂ ಪ್ರೀತಿಸುತ್ತೇನೆ.

**ಸಂಸ್ಕಾರ :**

ನಮ್ಮ ನಡೆ ನುಡಿಯು ಎಲ್ಲರಿಗೂ ಒಪ್ಪುಗೆಯಾಗುವ ಹಾಗೆ ಇರಬೇಕು. ಹಾಗೆಯೇ ನಮ್ಮ  ಉಡುಪು, ವರ್ತನೆ ಮುಂತಾದವುಗಳು ನಮ್ಮ ದೇಶದ ಸಂಸ್ಕಾರವನ್ನು ಸೂಚಿಸುವಂತೆ ಇರಬೇಕು. ಮೃದುವಾದ ಮಾತು ಮತ್ತು ಶುಭ್ರವಾದ ಉಡುಪುಗಳು ನಮ್ಮ ಸಂಸ್ಕಾರವನ್ನು ಸೂಚಿಸುತ್ತದೆ. ನಮ್ಮ ಸಂಸ್ಕಾರವನ್ನು ನಾನು ಪಾಲಿಸುತ್ತೇನೆ.

**ದಿನಚರಿ ಬರೆಯುವುದು :**

ನಾನು ದಿನಚರಿ ಬರೆಯುವ ಅಭ್ಯಾಸ ಗಾಂಧೀಯವರಿಂದಲೇ ಕಲಿತಿದ್ದು. ಅವರು ದಿನಚರಿಯನ್ನು ಬರೆಯುತ್ತಿದ್ದರು ಎಂಬುದನ್ನು ತಿಳಿದು ಪ್ರಭಾವಿತಳಾದ ನಾನು ಕೂಡ ಪ್ರತಿದಿನ ಬೆಳಿಗ್ಗೆಯಿಂದ ಸಂಜೆಯವರೆಗೆ ಏನೇನೂ ಮಾಡಿದೇ, ಏನು ಓದಿದ್ದೀನಿ ಎಲ್ಲವನ್ನು ನನ್ನ ದಿನಚರಿ ಪುಸ್ತಕದಲ್ಲಿ ಬರೆಯುತಿದ್ದೇನೆ.

**ವೆಚ್ಚದ ಮೇಲೆ ನಿಗಾ ಇರಲಿ**

ದಿನನಿತ್ಯದ ವೆಚ್ಚದ ಮೇಲೆ ಗಾಂಧೀಜಿಯವರು ನಿಗಾ ಇಡುತ್ತಿದ್ದರು. ಹಣ ಇದೆ ಎಂದು ಹೇಗೆಂದರೆ ಹಾಗೆ ಖರ್ಚು ಮಾಡುವುದಿಲ್ಲ. ಗಾಂಧಿ ಅವರಂತೆ ದಿನನಿತ್ಯ ಎಷ್ಟು ಖರ್ಚು ಮಾಡಿದೆ ಎಂಬುದನ್ನು ಒಂದು ಪುಸ್ತಕದಲ್ಲಿ ಬರೆದು ಇಡುತ್ತೇನೆ. ಇದು ನನ್ನ ದಿನನಿತ್ಯ ಅಭ್ಯಾಸ.

**ನಡತೆ :**

ನಮ್ಮ ಮನೆಯನ್ನು ಶುಚಿಯಾಗಿ ಇಟ್ಟುಕೊಂಡರೆ ರೋಗದ ಭಯ ಇರುವುದಿಲ್ಲ. ಒಂದು ವೇಳೆ ರೋಗ ಬಂದರು, ಬಹಳ ದಿನ ಉಳಿಯುವುದಿಲ್ಲ. ಅದೇ ರೀತಿ ನಡತೆಯನ್ನೂ ಶುಚಿಯಾಗಿ ಇಟ್ಟುಕೊಂಡರೆ ಅಂತಹವರಲ್ಲಿ ದುಷ್ಟ ಬುದ್ಧಿಗೆ ಪ್ರವೇಶ ಇರುವುದಿಲ್ಲ. ಒಂದು ವೇಳೆ ಅದು ಪ್ರವೇಶ ಪಡೆದರು, ಹೆಚ್ಚು ದಿನ ಇರಲು ಸಾಧ್ಯವಾಗದು. ಹೀಗೆ ಇರಬೇಕೆಂದು ಗಾಂಧೀಜಿವರು ನಮ್ಮ ಭಾರತೀಯ ಜನರಿಗೆ ಹೇಳಿರುವ ಮಾತು. ಗಾಂಧೀಜಿ ಅವರು ಹೇಳುವಂತೆ ನಾನು ಕೂಡ  ನನ್ನ ಮನೆಯನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದಲ್ಲದೆ, ಮನೆಯ ಅಕ್ಕ–ಪಕ್ಕದ ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಳ್ಳುತ್ತೇನೆ.

ಗಾಂಧೀಜಿವರು ಹೇಳುವಂತೆ ನಮಗೆ ಯಾವುದೇ ಕೆಲಸ ಮಾಡುವಾಗಲು ಸಹನೆ ಮತ್ತು ಧೈರ್ಯ ಇರಬೇಕು. ನಾನೂ ಯಾವುದೇ ಕೆಲಸ ಮಾಡುವಾಗಲು ಸಮಾಧಾನದಿಂದ ಹಾಗೂ ಸಹನೆಯಿಂದ ಎಲ್ಲಾ ಜವಾಬ್ದಾರಿಯನ್ನು ನಿಭಾಯಿಸುತ್ತೇನೆ. ಇವೇ ನಾನು ನನ್ನ ಜೀವನದಲ್ಲಿ ಗಾಧೀಜಿಯ ತತ್ವಗಳನ್ನು ಅಳವಡಿಸಿಕೊಂಡು ದಿನನಿತ್ಯವೂ ಪಾಲಿಸುತ್ತಿದ್ದೇನೆ.



# ಗಾಂಧಿಯ ಖಾದಿ ಕರೆಗೆ ಮನಸೋತಿದ್ದ ತುಮಕೂರಿಗರು

ಲಕ್ಷ್ಮೀಕಾಂತರಾಜು ಎಂ. ಜಿ.

ಮಹಾತ್ಮ ಗಾಂಧಿಯ ಖಾದಿ ಬಟ್ಟೆಯ ಪ್ರೇಮದ ಕರೆಗೆ ಮನಸೋತ ತುಮಕೂರಿಗರು ತಮ್ಮ ವಿದೇಶಿ ಕೋಟುಗಳನ್ನೆಲ್ಲಾ ತ್ಯಜಿಸಿ ಖಾದಿಯ ಕೋಟು ಮತ್ತು ಬಟ್ಟೆಗಳನ್ನು ಧರಿಸಿ, ಖಾದಿಯ ಕಡೆ ಒಲವು ತೋರಿಸುವ ಮೂಲಕ ಗಾಂಧಿ ಪ್ರೇಮ ಮೆರೆದ ಇತಿಹಾಸ ತುಮಕೂರು ಜಿಲ್ಲೆಯದ್ದು.

ಹೌದು. ಗಾಂಧಿಯು 1927 ರಲ್ಲಿ ಸ್ವದೇಶಿ ಬಟ್ಟೆಯಾದ ಖಾದಿ ಪ್ರಚಾರಕ್ಕೆಂದು ಮೈಸೂರು ಸಂಸ್ಥಾನಕ್ಕೆ ಪ್ರವಾಸ ಬಂದ ಸಮಯದಲ್ಲಿ ಜುಲೈ 14 ರಂದು ತುಮಕೂರಿಗೂ ಬಂದಿದ್ದರು. ಆ ಸಮಯದಲ್ಲಿ ಖಾದಿಯ ಕುರಿತು ಜನರಲ್ಲಿ ಜಾಗೃತಿ ಮೂಡಿಸಿದ ಗಾಂಧಿಯ ಕರೆಯನ್ನು ಜಿಲ್ಲೆಯ ಮುಖಂಡರು ಅನುಸರಿಸಿದರಲ್ಲದೆ, ಜನರು ಕೂಡ ಖಾದಿ ತೊಡಲು ಶುರು ಮಾಡಿದರು.

ತಾಳಕೆರೆ ಸುಬ್ರಹ್ಮಣ್ಯಂ ಅವರ ನೇತೃತ್ವದಲ್ಲಿ ತುಮಕೂರಿನ ಗಾಂಧಿ ಮೈದಾನದಲ್ಲಿ ವಿದೇಶಿ ವಸ್ತ್ರ ಬಹಿಷ್ಕಾರ ಮತ್ತು ಅವುಗಳನ್ನು ಸುಡುವ ವಿನೂತನ ಕಾರ್ಯಕ್ರಮಗಳು ನಡೆದಿದ್ದವು. ಬಿ.ಸಿ.ನಂಜುಂಡಯ್ಯ, ಜಿ.ವಿ.ನಾರಾಯಣ ಮೂರ್ತಿ, ಡೇನಿಯಲ್ ಗುಂಡಪ್ಪ ಹಾಗೂ ಮಾಲಿ ಮರಿಯಪ್ಪ ಮುಂತಾದವರಿಂದ ತುಮಕೂರಿನ ಇಂದಿನ ಚರ್ಚ್ ಸರ್ಕಲ್‌ನಲ್ಲಿ ಜನರ ವಿದೇಶಿ ಕೋಟುಗಳನ್ನೆಲ್ಲಾ ಬೆಂಕಿಗೆ ಹಾಕಿ ಧಗ ಧಗಿಸಿದ ಘಟನೆ ನಡೆದಿತ್ತು. "ವಿದೇಶಿ ಅರಿವೆ ಹಾಕು ಬೆಂಕೀಲಿ, ಉರಿಸು ಧಗ ಧಗ, ಧರಿಸು ಖಾದಿ, ತಿಳಿಸು ಖಾದಿ ಪವಿತ್ರವಾ" ಎಂಬ ಲಾವಣಿಯು ಜಿಲ್ಲೆಯಲ್ಲಿ ಪ್ರಚಾರಕ್ಕೆ ಬಂದಿತ್ತು.

**ತುಮಕೂರಿನಲ್ಲಿ ಖಾದಿ ವಸ್ತ್ರಾಲಯ**

ಗಾಂಧೀಜಿಯವರ ಖಾದಿ ಕರೆಯ ಹಿನ್ನೆಲೆಯಲ್ಲಿ ಜನರು ಖಾದಿಯನ್ನು ಬಳಕೆ ಮಾಡಿದ್ದರ ಪರಿಣಾಮ ತುಮಕೂರಿನಲ್ಲಿ ಖಾದಿ ನೇಯ್ಗೆ ಹಾಗೂ ಮಾರಾಟ ಮಳಿಗೆಗಳು ತೆರೆದ ಪರಿಣಾಮ ತುಮಕೂರಿನಲ್ಲಿ ಖಾದಿ ಪ್ರಿಯರಿಗೆ ಖಾದಿ ಉಡುಗೆಗಳು ದೊರೆಯುವಂತಾಗಿದ್ದವು. ಆ ನಂತರ 1929 ರಲ್ಲಿ ತುಮಕೂರಿನಲ್ಲಿ ಅಖಿಲ ಭಾರತ ಚರಕ ಸಂಘದವರು ಖಾದಿ ವಸ್ತ್ರಾಲಯ ತೆರೆದಿದ್ದರು.

**ತುಮಕೂರಿನ ಖಾದಿ ಮೇಳದಲ್ಲಿ ಹೆಚ್ಚು ಮಾರಾಟವಾಗಿದ್ದ ಖಾದಿ**

ಖಾದಿ ಧರಿಸುವುದೂ ಸ್ವಾತಂತ್ರ್ಯ ಹೋರಾಟದ ಒಂದು ಭಾಗ ಎಂದು ಭಾವಿಸಿದ್ದ ಕಾಂಗ್ರೆಸ್ ಕಾರ್ಯಕರ್ತರುಗಳು ಖಾದಿಯ ಕೇಂದ್ರಗಳನ್ನು ಮುನ್ನಡೆಸಿದ್ದರು. 1929 ರ ಅಕ್ಟೋಬರ್ 2 ರ ಗಾಂಧೀಜಿ ಜನ್ಮದಿನದಂದು ಬೆಂಗಳೂರು, ಚಿಕ್ಕಮಗಳೂರು, ದಾವಣಗೆರೆ, ಶಿವಮೊಗ್ಗ ಹಾಗೂ ತುಮಕೂರಿನಲ್ಲಿ ಖಾದಿ ಮೇಳ ನಡೆಸಲಾಗಿ ತುಮಕೂರಿನಲ್ಲಿ 492 ರೂಗಳ ಖಾದಿ ಬಟ್ಟೆ ಮಾರಾಟವಾಗುವ ಮೂಲಕ ತುಮಕೂರು ಜಿಲ್ಲೆಯು ಮಾರಾಟದಲ್ಲಿ ಮುಂದೆ ಇದ್ದದ್ದು, ತುಮಕೂರಿನಲ್ಲಿ ಖಾದಿಯ ಜನಪ್ರಿಯತೆಯನ್ನು ತೋರಿಸಿತ್ತು.

**ಖಾದಿ ಸ್ವಾತಂತ್ರ್ಯ ಭಾರತದ ಹೆಗ್ಗುರುತು**

ಖಾದಿಯು ಸ್ವದೇಶಿ ಮನೋಭಾವ ತಂದುಕೊಡುವುದಲ್ಲದೇ ಸಮಾನತೆಯನ್ನು ತೋರುತ್ತದೆ ಎಂಬ ಉದ್ದೇಶಗಳಿಂದ ಖಾದಿಯನ್ನು ಭಾರತದ ತುಂಬಾ ಪ್ರಚಾರ ಮಾಡಬೇಕೆಂಬ ಗುರಿಯನ್ನು ಕಾಂಗ್ರೆಸ್ ಹೊಂದಿತ್ತು. ಪರಿಣಾಮ, 1919 ರಲ್ಲಿ ನಡೆದ ಅಮೃತಸರ ಕಾಂಗ್ರೆಸ್ ಅಧಿವೇಶನದಲ್ಲಿ ನಿರ್ಣಯ ಪಾಸು ಮಾಡಿ 1920 ರ ಅಲಹಾಬಾದ್ ಕಾಂಗ್ರೆಸ್ ಅಧಿವೇಶನದಲ್ಲಿ ಖಾದಿ ಪ್ರಚಾರಕ್ಕೆ ಅಧಿಕೃತವಾಗಿ ಚಾಲನೆ ನೀಡಲಾಗಿತ್ತು.

ಗಾಂಧಿ ಮೊದಲ ಬಾರಿಗೆ ಭೇಟಿ ನೀಡಿದ್ದಾಗ ಇಲ್ಲಿನ ಔದ್ಯೋಗಿಕ ಶಿಕ್ಷಣ ಶಾಲೆಗೆ ಮತ್ತು ಹಾಸ್ಟೆಲ್‌ವೊಂದಕ್ಕೆ ಭೇಟಿ ನೀಡುವ ಇಂಗಿತ ವ್ಯಕ್ತ ಪಡಿಸಿದ್ದರಂತೆ. ವಿಷಯ ತಿಳಿದ ಶಾಲೆಯವರು ಮತ್ತು ಹಾಸ್ಟೆಲ್‌ನವರು ರಾತ್ರೋ ರಾತ್ರಿ ಎಲ್ಲ ಮಕ್ಕಳಿಗೆ ಖಾದಿ ಬಟ್ಟೆ ಹೊಲಿಸಿಕೊಟ್ಟು ಬೆಳಗ್ಗೆ ಗಾಂಧೀಜಿ ಭೇಟಿ ನೀಡಿದಾಗ ಎಲ್ಲ ಮಕ್ಕಳು ಖಾದಿ ಧರಿಸಿದ್ದನ್ನು ನೋಡಿ ಸಂತಸಗೊಂಡಿದ್ದರಂತೆ ಗಾಂಧಿ.

ಈ ಮೊದಲ ತುಮಕೂರು ಸಭೆಗೆ 1927 ರಲ್ಲಿ ಬಂದಾಗ ಗಾಂಧಿಯವರು ಇಂದಿನ ಬಿಎಚ್ ರಸ್ತೆಯಲ್ಲಿನ ಸರ್ಕಾರಿ ಜೂನಿಯರ್ ಕಾಲೇಜು ಹಿಂಭಾಗ ಇರುವ ಕೊಠಡಿಯಲ್ಲಿ ತಂಗಿದ್ದರು. ಈ ಕೊಠಡಿ ಈಗ ಗಾಂಧಿ ಭವನವಾಗಿದ್ದು, ತುಮಕೂರು ಮಹಾನಗರ ಪಾಲಿಕೆ ನಿರ್ವಹಣೆ ಮಾಡುತ್ತಾ ಬಂದಿದೆ.

■



# ಮಂಕಿಪಾಕ್ಸ್

## ರೋಗ ತಡೆಗೆ ಮಾರ್ಗೋಪಾಯ



**ಭಾರತ ದೇಶಕ್ಕೂ ಕಾಲಿಟ್ಟಿರುವ ಮಂಕಿಪಾಕ್ಸ್ ರೋಗದ ಲಕ್ಷಣಗಳೇನು? ಯಾವಾಗ ಚಿಕಿತ್ಸೆ ಪಡೆಯಬೇಕು..? ತಡೆಯುವ ಮಾರ್ಗೋಪಾಯಗಳೇನು ಎಂಬುದನ್ನು ಎಲ್ಲರೂ ತಿಳಿಯಬೇಕಿದೆ.**

ಡಾ.ವರಪ್ರಸಾದ್ ರಾವ್ ಪಿ ವಿ.

ಆಫ್ರಿಕಾ ದೇಶದ ಕಾಂಗೋ ಮಂಕಿಪಾಕ್ಸ್ ಕಾಯಿಲೆಯ ಮೂಲವಾಗಿದ್ದರೂ, ಇದೀಗ ಈ ರೋಗವು ವಿಶ್ವವ್ಯಾಪಿಯಾಗುತ್ತಿದೆ. ಇದರ ಹರಡುವಿಕೆ ವೇಗವೂ ಹೆಚ್ಚಾಗಿದೆ. ಸೋಂಕಿತ ವ್ಯಕ್ತಿಯ ನೇರ ಸಂಪರ್ಕಕ್ಕೆ ಬಂದ ವ್ಯಕ್ತಿಗಳಿಗೆ ರೋಗ ಹರಡುತ್ತದೆ. ಪುರುಷರು, ಮಹಿಳೆಯರು ಮತ್ತು ಮಕ್ಕಳನ್ನೂ ಇದು ಕಾಡುತ್ತಿದೆ. ಹೆಚ್ಚಿನ ಸಂದರ್ಭಗಳಲ್ಲಿ ಈ ರೋಗವು ಗಂಭೀರವಾಗಿರುವುದಿಲ್ಲ, ಆದರೆ ಕೆಲವು ಸಂದರ್ಭಗಳಲ್ಲಿ, ರೋಗವು ಗಂಭೀರವಾಗಬಹುದು. ಆರಂಭದಲ್ಲೇ ಈ ರೋಗವು ಸಮಾಜದಲ್ಲಿ ಹರಡದಂತೆ ತಡೆಗಟ್ಟಲು ಬೆಂಗಳೂರಿನ ವಿಮಾನ ನಿಲ್ದಾಣದಲ್ಲಿ ವಿದೇಶದಿಂದ ಆಗಮಿಸುವವರಿಗೆ ಮಂಕಿಪಾಕ್ಸ್ ಪರೀಕ್ಷೆಯನ್ನು ಮಾಡಲಾಗುತ್ತಿದೆ.

ಆಫ್ರಿಕನ್ ದೇಶಗಳಲ್ಲಿ ಈ ಸಾಂಕ್ರಾಮಿಕ ರೋಗದಿಂದ ಬಳಲುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ವಿಶ್ವ ಆರೋಗ್ಯ ಸಂಸ್ಥೆ (WHO) ಇದನ್ನು ಜಾಗತಿಕ ಆರೋಗ್ಯ ತುರ್ತುಸ್ಥಿತಿ ಎಂದು ಘೋಷಿಸಿದೆ. ಈಗ ಈ ರೋಗವು ಭಾರತಕ್ಕೂ ಕಾಲಿಟ್ಟಿದ್ದು, ಮೊದಲ ಪ್ರಕರಣ ದೇಶದಲ್ಲಿ ಕಂಡು ಬರುತ್ತಿದ್ದಂತೆಯೇ ನಮ್ಮ ರಾಜ್ಯ ಸರಕಾರದ ಆರೋಗ್ಯ ಇಲಾಖೆಯು ಹೈ ಅಲರ್ಟ್ ಆಗಿದೆ. ಮುನ್ನೆಚ್ಚರಿಕೆ ದೃಷ್ಟಿಯಿಂದ ಟೆಸ್ಟಿಂಗ್, ಟ್ರ್ಯಾಕಿಂಗ್, ಸ್ಕ್ರೀನಿಂಗ್ ಆರಂಭಿಸಿದೆ. ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಶಂಕಿತರ ಟೆಸ್ಟಿಂಗ್, ಟ್ರ್ಯಾಕಿಂಗ್, ಸ್ಕ್ರೀನಿಂಗ್ ಶುರುವಾಗಿದೆ. ಹಾಗಾದರೆ ಈ ಮಂಕಿಪಾಕ್ಸ್ ಯಾವ ರೀತಿ ಹರಡುತ್ತದೆ. ಇದನ್ನು ತಪ್ಪಿಸುವುದು ಹೇಗೆ ಎನ್ನುವ ಸರಳ ಸೂತ್ರಗಳು ಇಲ್ಲಿವೆ. ಈ ಕ್ರಮಗಳನ್ನು ಅನುಸರಿಸುವ ಮೂಲಕ ಎಲ್ಲರೂ ಮಂಕಿಪಾಕ್ಸ್ ರೋಗದ ಆತಂಕದಿಂದ ದೂರವಾಗಬಹುದು.

**ಮಂಕಿಪಾಕ್ಸ್ ಎಂದರೇನು ?**

ಚಿಕನ್ ಪಾಕ್ಸ್ ಬಗ್ಗೆ ನಾವೆಲ್ಲಾ ಕೇಳಿದ್ದೇವೆ, ಹಾಗಾದ್ರೆ ಏನಿದು ಮಂಕಿಪಾಕ್ಸ್ ಎಂದರೆ ಎನ್ನುವ ಕುತೂಹಲ ಎಲ್ಲರಿಗೂ ಇದೆ. ಕರ್ನಾಟಕದ ವಿಮ್ಸ್‌ನ (Vijayanagar Institute of Medical Sciences) ಹಿರಿಯ ವೈದ್ಯರು ಹಾಗೂ ಆರೋಗ್ಯ ತಜ್ಞರಾದ ಡಾ. ವಿಶ್ವನಾಥ್ ಸಿದ್ದರಾಮ ಅವರು ಈ ಬಗ್ಗೆ ಮಾಹಿತಿ ನೀಡಿದ್ದು, ಇದು ವೈರಲ್ ರೋಗ. ಇದು ಸಿಡುಬು ಕುಟುಂಬಕ್ಕೆ ಸೇರಿದೆ. ಈ ವೈರಸ್ ಹೆಚ್ಚಾಗಿ ಮಧ್ಯ ಮತ್ತು ಪಶ್ಚಿಮ ಆಫ್ರಿಕಾದಲ್ಲಿ ಹರಡುತ್ತಿದೆ. ಈ ವೈರಸ್ ಅನ್ನು ಮೊದಲು 1958 ರಲ್ಲಿ ಮಂಗಗಳಲ್ಲಿ ಪತ್ತೆ ಮಾಡಲಾಯಿತು. ಅದಕ್ಕಾಗಿಯೇ ಇದಕ್ಕೆ ಮಂಗನ ಕಾಯಿಲೆ ಎಂದು ಹೆಸರು ಬಂದಿದೆ. ಈ ನಿಟ್ಟಿನಲ್ಲಿ ಅಂದು ಹಲವಾರು ಕೋತಿಗಳನ್ನು ಸಂಶೋಧನೆಗೆ ಗುರಿ ಪಡಿಸಲಾಗಿತ್ತು. ಆ ಬಳಿಕ 1970 ರಲ್ಲಿ

ಮನುಷ್ಯರಿಗೆ ಮೊದಲ ಬಾರಿಗೆ ಈ ವೈರಸ್ ತಾಗಿದ ಉದಾಹರಣೆ ಇದೆ.

**ಮಂಕಿಪಾಕ್ಸ್‌ನಲ್ಲಿ ಎಷ್ಟು ವಿಧಗಳಿವೆ?:**

ಇತ್ತೀಚಿನ ಸಂಶೋಧನೆ ಹೇಳುವ ಹಾಗೆ ಮಂಕಿ ಪಾಕ್ಸ್ ಎರಡು ಹೊಸ ಪ್ರಭೇದಗಳನ್ನು ಹೊಂದಿದೆ. ಅವುಗಳೆಂದರೆ clade 1 ಹಾಗೂ clade 2. ಇದರಲ್ಲಿಯೂ ಹೊಸದೊಂದು ಪ್ರಭೇದವಾಗಿ clade 1b ಹೊರ ಹೊಮ್ಮಿದೆ. ಈ ವೈರಸ್ ಒಬ್ಬರಿಂದ ಒಬ್ಬರಿಗೆ ಹರಡಲು ಪ್ರಮುಖ ಕಾರಣ ಅಸುರಕ್ಷಿತ ಲೈಂಗಿಕ ಸಂಪರ್ಕ ಪ್ರಮುಖ ಕಾರಣ ಎಂದು ಹೇಳಲಾಗುತ್ತದೆ.

ಇದರಲ್ಲಿನ ಕ್ಲಾಡ್–1 ಗಂಭೀರ ಆರೋಗ್ಯ ಸಮಸ್ಯೆಗಳನ್ನು ಉಂಟುಮಾಡುತ್ತದೆ. ನ್ಯುಮೋನಿಯಾ, ಬ್ಯಾಕ್ಟೀರಿಯಾದ ಸೋಂಕುಗಳು ಮತ್ತು ಉಸಿರಾಟದ ತೊಂದರೆಗಳು ಸಹ ಸಂಭವಿಸುತ್ತವೆ. ಮರಣ ಪ್ರಮಾಣವು ಶೇ 1ರಿಂದ 10ರಷ್ಟು ಆಗಿದೆ. ಕ್ಲಾಡ್–2 ಸ್ವಲ್ಪ ಕಡಿಮೆ ಅಪಾಯಕಾರಿ. ದೇಹದಲ್ಲಿ ಗುಳ್ಳೆಗಳು ಮತ್ತು ಜ್ವರದಂತಹ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಮರಣ ಪ್ರಮಾಣವು ಶೇಕಡಾ 1ಕ್ಕಿಂತ ಕಡಿಮೆಯಿದೆ.

ಸಾಮಾನ್ಯವಾಗಿ ಮಂಕಿಪಾಕ್ಸ್ ಸೋಂಕು ಉಂಟಾದವರಲ್ಲಿ ಜ್ವರ ಕಾಣಿಸಿಕೊಳ್ಳುತ್ತದೆ. ಆನಂತರ ಮೈಮೇಲೆ ಗುಳ್ಳೆಗಳು (ರ್‍ಯಾಶಸ್) ಕಾಣಿಸಿಕೊಳ್ಳುತ್ತದೆ. ಕೆಲವರಲ್ಲಿ ತೀವ್ರವಾದ ತಲೆನೋವು, ಬೆನ್ನು ನೋವು ಹಾಗೂ ಸ್ನಾಯು ಸೆಳೆತ ಕಾಣಿಸಿಕೊಳ್ಳುತ್ತದೆ. ಇಂಥ ಲಕ್ಷಣಗಳು ಕಂಡುಬಂದರೆ ಕೂಡಲೇ ವೈದ್ಯರನ್ನು ಸಂಪರ್ಕಿಸಬೇಕು. ಇಲ್ಲವಾದರೆ ಇದು ಮುಂದೆ ಮಾರಣಾಂತಿಕವಾಗಬಹುದು.

**ಈ ಕಾಯಿಲೆ ಬರದಂತೆ ಮುನ್ನೆಚ್ಚರಿಕೆ ವಹಿಸುವುದು ಹೇಗೆ?**

ಮಂಕಿಪಾಕ್ಸ್‌ನ ರೋಗದ ಲಕ್ಷಣಗಳು ಈಗ ಇರುವ ಸಾಂಕ್ರಾಮಿಕ ರೋಗಗಳಿಗಿಂತಲೂ ಭಿನ್ನವಾಗಿದೆ. ಅಲ್ಲದೇ ಉಳಿದ ಸಾಂಕ್ರಾಮಿಕ ರೋಗ ಲಕ್ಷಣಗಳಲ್ಲಿ ಕಾಣುವ ಸಂಗತಿಗಳು ಇದರಲ್ಲಿ ಇಲ್ಲ. ಹೀಗಾಗಿ, ಈ ಬಗ್ಗೆ ಎಚ್ಚರಿಕೆ ವಹಿಸುವುದು ಅತ್ಯಗತ್ಯವಾಗಿದೆ. ಸೋಂಕು ಪೀಡಿತ ಪ್ರಾಣಿಯಿಂದ ಮನುಷ್ಯರಿಗೆ, ವ್ಯಕ್ತಿಯಿಂದ ವ್ಯಕ್ತಿಗೆ ಮಂಕಿಪಾಕ್ಸ್ ವೈರಸ್ ಹರಡುತ್ತದೆ. ಈ ರೋಗವನ್ನು ತಡೆಗಟ್ಟಲು ಕಾಡು ಪ್ರಾಣಿಗಳ ಸಂಪರ್ಕ ತಪ್ಪಿಸಬೇಕು. ಮಂಕಿಪಾಕ್ಸ್ ಸೋಂಕಿತರನ್ನು ನೋಡಿಕೊಳ್ಳುವಾಗ ಮಾಸ್ಕ್, ಕೈಗವಸು ಮತ್ತು ರಕ್ಷಣಾತ್ಮಕ ಬಟ್ಟೆಗಳನ್ನು ಧರಿಸುವುದರಿಂದ ಇದರ ಹರಡುವಿಕೆಯನ್ನು ತಡೆಯಬಹುದು ಎಂದು ಆರೋಗ್ಯ ತಜ್ಞ ಡಾ. ವಿಶ್ವನಾಥ್ ಸಿದ್ದರಾಮ ಹೇಳುತ್ತಾರೆ. ನಾವು ಕೋವಿಡ್ 19 ಸೋಂಕಿನ ಸಂದರ್ಭದಲ್ಲಿ ಹೇಗೆ ಸಾಮಾಜಿಕ ಅಂತರವನ್ನು ಕಾಯ್ದುಕೊಂಡೆವೋ ಅದೇ ರೀತಿಯಲ್ಲಿ ಮಂಕಿ ಪಾಕ್ಸ್ ವಿಚಾರದಲ್ಲಿ ಕೂಡ ಎಚ್ಚರ ವಹಿಸಬೇಕು.

ಈ ವೈರಸ್ ಗರ್ಭಿಣಿಯರ ಮೇಲೂ ಪರಿಣಾಮ ಬೀರಬಹುದು. ಮಹಿಳೆ ಗರ್ಭಿಣಿಯಾಗಿದ್ದರೆ ಮತ್ತು ಸೋಂಕಿಗೆ ಒಳಗಾದರೆ, ಈ ವೈರಸ್ ತಾಯಿಯಿಂದ ಹುಟ್ಟಲಿರುವ ಮಗುವಿಗೆ ಸಹ ಹರಡಬಹುದು ಎಂದು ಆರೋಗ್ಯ ತಜ್ಞ ಡಾ. ವಿಶ್ವನಾಥ್ ಸಿದ್ದರಾಮ ಹೇಳುತ್ತಾರೆ. ತಾಯಿಗೆ ಈ ವೈರಸ್ ಸೋಂಕು ತಗುಲಿರುವುದು ಕಂಡು ಬಂದರೆ, ಅವಳು ತಕ್ಷಣ ಆಸ್ಪತ್ರೆಗೆ ದಾಖಲಾಗಿ ಅಗತ್ಯವಿರುವ ಔಷಧಗಳನ್ನು ಪಡೆಯಬೇಕು ಏಕೆಂದರೆ ಈ ವೈರಸ್ ಮಗುವಿನ ಜೀವಕ್ಕೆ ಅಪಾಯವನ್ನುಂಟು ಮಾಡುತ್ತದೆ ಮತ್ತು ಮಗುವಿಗೆ ಹಾನಿ ಮಾಡಬಹುದು. ಗರ್ಭಿಣಿಯರಲ್ಲಿ ಈ ರೋಗ ಲಕ್ಷಣ ಕಾಣಿಸಿಕೊಂಡು ಅದು ದೃಢಪಟ್ಟರೆ ಗರ್ಭಪಾತವಾಗುವ ಭಯವಿರುತ್ತದೆ. ಆದ್ದರಿಂದ, ನೀವು ಯಾವುದೇ ರೀತಿಯ ರೋಗಲಕ್ಷಣಗಳನ್ನು ಗಮನಿಸಿದರೆ, ಮೊದಲು ವೈದ್ಯರ ಬಳಿ ಹೋಗಿ ಸರಿಯಾಗಿ ಪರೀಕ್ಷಿಸಿಕೊಳ್ಳಬೇಕು.

ರಾಜ್ಯದಲ್ಲಿ ಮಂಕಿಪಾಕ್ಸ್ ಆತಂಕ ಹೆಚ್ಚಾಗಿದ್ದು, ರಾಜ್ಯ ಆರೋಗ್ಯ ಇಲಾಖೆ ಕಟ್ಟೆಚ್ಚರ ವಹಿಸಲು ಮುಂದಾಗಿದೆ. ಆರಂಭದಲ್ಲಿಯೇ ವೈರಸ್ ನಿಯಂತ್ರಣಕ್ಕೆ ಕಠಿಣ ಕ್ರಮಕ್ಕೆ ಆರೋಗ್ಯ ಇಲಾಖೆ ಮುಂದಾಗಿದ್ದು, ರಾಜಧಾನಿಯಲ್ಲಿ ಮಂಕಿಪಾಕ್ಸ್ ಟೆಸ್ಟಿಂಗ್, ಟ್ರ್ಯಾಕಿಂಗ್ ಮತ್ತು ಸ್ಕ್ರೀನಿಂಗ್ ಶುರು ಮಾಡಲಾಗಿದೆ.

ಆರೋಗ್ಯ ಇಲಾಖೆ ಹೊರಡಿಸಿದ ಸುತ್ತೋಲೆಯಲ್ಲಿ ಮಂಗನ ಕಾಯಿಲೆಯ ಶಂಕಿತ ಪ್ರಕರಣಗಳ ಬಗ್ಗೆ ನಿಗಾ ಇಡಲು ಸೂಚಿಸಲಾಗಿದೆ. ವಿಮಾನ ನಿಲ್ದಾಣಗಳು, ಬಂದರು ಮತ್ತು ರಾಜ್ಯದ ಎಲ್ಲಾ ಕಡೆಗಳ ಪ್ರವೇಶ ಕೇಂದ್ರಗಳ ವ್ಯವಸ್ಥಾಪಕ ಅಧಿಕಾರಿಗಳಿಗೆ ಎಚ್ಚರ ವಹಿಸಲು ನಿರ್ದೇಶನ ನೀಡಿದ್ದಾರೆ. ಶಂಕಿತರನ್ನು ಗುರುತಿಸಿ ಸ್ಕ್ರೀನಿಂಗ್ ಮಾಡುವಂತೆ ಹಾಗೂ ಅಂತಾರಾಷ್ಟ್ರೀಯ ಪ್ರಯಾಣಿಕರ ಮೇಲೆ ನಿಗಾ ಇಡಲು ಸೂಚಿಸಲಾಗಿದೆ. ಅಲ್ಲದೆ, ಹೈರಿಸ್ಕ್ ದೇಶಗಳಿಂದ ಬರುವವರ ಮೇಲೆ ಎಚ್ಚರವಹಿಸಲು ಸೂಚನೆ ನೀಡಲಾಗಿದೆ. ಆದಾಗ್ಯೂ ಕೂಡ ನಾವು ಕೂಡ ಮಂಕಿಪಾಕ್ಸ್ ರೋಗ ತಡೆಯ ಮಾರ್ಗೋಪಾಯಗಳನ್ನು ಅಳವಡಿಕೊಳ್ಳುವ ಮೂಲಕ ಸಮಾಜದಲ್ಲಿ ರೋಗ ಹರಡುವುದನ್ನು ತಡೆಯಬೇಕು.

**ಮುಂಜಾಗ್ರತಾ ಮಾರ್ಗೋಪಾಯಗಳು**

- ಚರ್ಮದಲ್ಲಿ ದದ್ದು ಕಾಣಿಸಿಕೊಂಡವರಿಂದ ದೂರ ಇರುವುದು, ದದ್ದು ಮುಟ್ಟದಿರುವುದು.
- ಸೋಂಕಿತರನ್ನು ಆಲಂಗಿಸಿಕೊಳ್ಳಬಾರದು, ಲೈಂಗಿಕ ಸಂಪರ್ಕ ಮಾಡಬೇಡಿ.
- ಸೋಂಕಿತರೊಂದಿಗೆ ಆಹಾರ ಸೇವನೆ, ಬಟ್ಟಲು, ಲೋಟ ಇತ್ಯಾದಿ ವಸ್ತುಗಳನ್ನು ಹಂಚಿಕೊಳ್ಳದಿರುವುದು.
- ಸೋಂಕಿತರು ಬಳಸಿದ ಬಟ್ಟೆ, ಟವಲ್, ಹೊದಿಕೆ ಬಳಸದಿರುವುದು.
- ಸೋಂಕಿತ ಪ್ರಾಣಿಗಳನ್ನು ಮುಟ್ಟದಿರುವುದು.
- ಸೋಂಕಿತರಿಂದ ಪ್ರತ್ಯೇಕವಾಗಿ ಇರುವುದು.



# ಸರ್ಕಾರಿ ನೌಕರಿ ತ್ಯಜಿಸಿ ಕೃಷಿಯಲ್ಲಿ ಜೀವನ ಕಂಡುಕೊಂಡ

# ಶಿವಕುಮಾರ

**ಚಾಮರಾಜನಗರ ಜಿಲ್ಲೆಯ ಶಿವಕುಮಾರ ಅವರು ಸರ್ಕಾರಿ ನೌಕರಿಯನ್ನು ತ್ಯಜಿಸಿ ಕೃಷಿಯಲ್ಲೇ ಹೆಚ್ಚಿನ ಆದಾಯವನ್ನು ಪಡೆದು ಸಂತೃಪ್ತ ಜೀವನ ನಡೆಸುತ್ತಿದ್ದಾರೆ.**

ಗಣಪತಿ ಹಾಸ್ಪುರ

ಕೃಷಿ ಪ್ರಧಾನವಾದ ನಮ್ಮ ದೇಶದಲ್ಲಿ ಕೃಷಿ ಕಾಯಕದಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳಲು ಈಗಿನ ಕಾಲದಲ್ಲಿ ಕೃಷಿಕರ ಮಕ್ಕಳೇ ಹಿಂಜರಿಯುತ್ತಿದ್ದಾರೆ. ಆದ್ರೆ ಸಿಕ್ಕಿರುವ ಸರಕಾರಿ ನೌಕರಿಗೆ ವಿದಾಯ ಹೇಳಿ ಕೃಷಿಯಲ್ಲಿ ತೊಡಗಿಕೊಂಡು ನೆಮ್ಮದಿಯಿಂದ ಜೀವನ ನಡೆಸುತ್ತಿರುವ ಅಪರೂಪದ ಕೃಷಿಕರಲ್ಲಿ ಶಿವಕುಮಾರ ಸ್ವಾಮಿ ಸಹಾ ಕೂಡ ಒಬ್ಬರು.

ಇವರು ಚಾಮರಾಜನಗರ ಜಿಲ್ಲೆ ಸಂತೆಮಾರಹಳ್ಳಿಯ ಹೆಗ್ಗವಾಡಪುರದವರು. ಅಲ್ಲಿನ ಪ್ರಗತಿಪರ ಕೃಷಿಕರಲ್ಲಿ ಇವರದ್ದು ವಿಭಿನ್ನವಾದ ವ್ಯಕ್ತಿತ್ವ. ವಿಶಿಷ್ಟವಾದ ಕಲ್ಪನೆ, ತಮ್ಮದೇ ಇಷ್ಟದ ಕೃಷಿ ಬೆಳೆಗಳನ್ನು ಮಾಡುತ್ತಾ ಆ ಕ್ಷೇತ್ರದಲ್ಲಿ ಅದ್ಭುತವಾದ ಸಾಧನೆ ಮಾಡುತ್ತಿದ್ದಾರೆ.

ಶಿವಕುಮಾರ ಸ್ವಾಮಿ ಜನಿಸಿದ್ದೇ ವ್ಯವಸಾಯಗಾರ ಮನೆಯಲ್ಲಿ. ಇವರ ಅಪ್ಪ, ಅಜ್ಜ ಎಲ್ಲರೂ ಸಾಂಪ್ರದಾಯಿಕ ಪದ್ಧತಿಯಲ್ಲಿ ಸುಮಾರು 15 ಎಕರೆ ಪ್ರದೇಶದ ಭೂಮಿಯನ್ನು ಸಾಗುವಳಿ ಮಾಡುತ್ತಾ ಬಂದವರು. ಆಗೆಲ್ಲ ರೇಷ್ಮೆ, ಕಬ್ಬು ಹೇರಳವಾಗಿ ಬೆಳೆಯುತ್ತಿದ್ದರು. ಶಿವಕುಮಾರ ಸ್ವಾಮಿ ಟಿ.ಸಿ.ಎಚ್ ಶಿಕ್ಷಣ ಪೂರೈಸಿ ನೌಕರಿಯತ್ತ ಮುಖ ಮಾಡಿದರು. ಆದ್ರೆ, ಬೇರೆಯವರ ಕೈಕೆಳಗೆ ದುಡಿಯುವುದು, ಹಾಗೂ ಅವರ ಚೌಕಟ್ಟಿನಲ್ಲಿ ಕಾರ್ಯ ನಿರ್ವಹಿಸುವುದು ಇವರಿಗೆ ಇಷ್ಟವಾಗಲಿಲ್ಲ. ಹೀಗಾಗಿ ಕೇವಲ ಎರಡು ವರುಷದಲ್ಲಿ ಶಿಕ್ಷಕ ವೃತ್ತಿಗೆ ವಿದಾಯ ಹೇಳಿ ಪಿತ್ರಾರ್ಜಿತವಾಗಿ ಇರುವ ಕೃಷಿ ಭೂಮಿಯನ್ನು ಇನ್ನಷ್ಟು ಅಭಿವೃದ್ಧಿ ಮಾಡಲು ಹೆಗಲೊಡ್ಡಿದರು.

ಸ್ವಾಮಿ ಅವರ ಭೂಮಿಯಲ್ಲಿ ವೈವಿಧ್ಯಮಯ 40 ಬಗೆಯ ಹಣ್ಣಿನ ಗಿಡಗಳಿವೆ. ಅಂದರೆ ಹಲಸು, ಮಾವು, ಬೆಣ್ಣೆ ಹಣ್ಣು, ಸಪೋಟಾ, ಕಿತ್ತಲೆ, ಚಕೋತ, ಸೀಬೆ, ಹುಣಸೆ, ಹಿರಳೆಕಾಯಿ, ನಿಂಬೆ, ರಂಬೂಟನ್, ಫ್ಯಾಷನ್ ಫ್ರೂಟ್, ತೆಂಗು, ಮೆಕಾಡೋಮಿಯ, ಬ್ರಾಹ್ಮಚರಿ, ಸೂರ್ಯನಾಮ್ ಚರಿ, ಕೋಕಂ, ನೇರಳೆ, ಪನ್ನೇರಳೆ, ವಾಟರ್ ಆಪಲ್, ಕರಿಬೇವು, ನುಗ್ಗೆಕಾಯಿ, ನಕ್ಷತ್ರ ಹಣ್ಣು, ಪಿನೇಟ್ ಬಟಲ್, ರೋನಾಲ್ ಸಿತಾಫಲ, ಲಕ್ಷ್ಮಣಫಲ, ರಾಮಫಲ, ಹನುಮಫಲ, ಲಕೋಟೆ ಹಣ್ಣು, ಇಂಗು, ಅಮಟೆಕಾಯಿ, ಅಂಟುವಾಳ, ತೇಗದ ಮರ, ಹೆಬ್ಬೇವು.... ಮುಂತಾದ ಭಿನ್ನ ಭಿನ್ನವಾದ ಗಿಡಗಳಿವೆ. ಲೋಕಲ್ ಹಾಗೂ ನಗರಗಳಲ್ಲಿ ಮಾರಾಟದ ವ್ಯವಸ್ಥೆ ಕಂಡುಕೊಂಡಿರುವ ಶಿವಕುಮಾರ ಸ್ವಾಮಿ ವರುಷಕ್ಕೆ ಸರಾಸರಿ 15 ಲಕ್ಷ ಆದಾಯ ಸಿಗುತ್ತದೆ ಎಂದು ಹೆಮ್ಮೆಯಿಂದ ಹೇಳುತ್ತಾರೆ. ಅದ್ರಲ್ಲಿಯೂ ಮಾವು, ಸಪೋಟ, ಬೆಣ್ಣೆ ಹಣ್ಣುಗಳಿಂದ ಹೆಚ್ಚಿನ ಆದಾಯ ಲಭಿಸುತ್ತದೆ ಎನ್ನುತ್ತಾರೆ.

ಈ ಕೃಷಿ ಬದುಕಿನಲ್ಲಿ ನೆಮ್ಮದಿಯೂ ಇದೆ ಎಂದು ಪ್ರತಿಪಾದಿಸುವ ಶಿವಕುಮಾರ ಸ್ವಾಮಿ, ನನಗೆ ಕೃಷಿಯಿಂದ ಸ್ವಾವಲಂಬನೆ, ಸ್ವಾಭಿಮಾನ ಎಲ್ಲವೂ ಸಿಕ್ಕಿದೆ. ನನ್ನ ಅನುಭವವನ್ನು ಇನ್ನೊಬ್ಬರಿಗೆ ಹಂಚುವ ಕೆಲಸವನ್ನು ಸಂತೋಷದಿಂದ ನಿರ್ವಹಿಸುತ್ತಾ



ಇದ್ದೇನೆ ಎಂದು ತಮ್ಮ ಮನದ ಇಂಗಿತವನ್ನು ತೆರೆದಿಡುತ್ತಾರೆ.

ಶಿವಕುಮಾರ ಸ್ವಾಮಿ ಅವರು ಕೇವಲ ಎರಡು ವರುಷಗಳ ಕಾಲ ಶಿಕ್ಷಕ ವೃತ್ತಿಯಲ್ಲಿ ಇದ್ದರೂ 'ಇಂದಿನ ಶಿಕ್ಷಣ ವ್ಯವಸ್ಥೆ'ಯ ಬಗ್ಗೆ ಸಾಕಷ್ಟು ತಿಳಿದುಕೊಂಡವರು. ನಿಜವಾಗಿಯೂ ಶಿಕ್ಷಣವೆಂದರೆ ಆಂತರಿಕ ಚೈತನ್ಯವನ್ನು ಹೊರಗೆ ಹಾಕಿ, ವ್ಯಕ್ತಿಯನ್ನು ಸ್ವಾವಲಂಬಿಯಾಗಿ ಮಾಡುವುದು ಆಗಬೇಕಿತ್ತು. ಆದ್ರೆ ಈಗಿನ ಪಠ್ಯದ ವಿಷಯದಲ್ಲಿ ಸ್ವಾವಲಂಬಿತನವಾಗಲೀ, ಆಂತರಿಕ ಚೈತನ್ಯವಾಗಲೀ ಇಲ್ಲ. ಮಕ್ಕಳನ್ನು ಪರಾವಲಂಬಿಯನ್ನಾಗಿ ಮಾಡುತ್ತಿದ್ದೇವೆ. ಅದನ್ನು ಹೊರತು ಮತ್ತೇನನ್ನು ಮಾಡದೇ ಇರುವುದು ಬೇಸರ. ಏನನ್ನೇ ಓದಿದರೂ ಯಾವುದೋ ಒಂದು ಕಂಪನಿಯ ಕೆಲಸಗಾರ ಆಗುತ್ತಾನೆಯೇ ಹೊರತು, ಓನರ್ ಆಗಲು ಸಾಧ್ಯವಿಲ್ಲ. ಆದರೇ ಕೃಷಿಯಲ್ಲಿ ಮಾತ್ರ ಹಾಗಿಲ್ಲ ಎಂದು ಪ್ರತಿಪಾದಿಸುತ್ತಾರೆ.

ಕೃಷಿರಂಗದಲ್ಲಿ ವ್ಯಕ್ತಿಗೆ ಭೂಮಿ ಎಷ್ಟೇ ಇದ್ದರೂ ಅವನೇ ಓನರ್ ಆಗಿ ಮೆರೆಯಬಹುದು. ಸ್ವಾವಲಂಬಿತನ ಇರುವುದೇ ಕೃಷಿಯಲ್ಲಿ ಎಂದು ಆತ್ಮವಿಶ್ವಾಸದಿಂದ ದೃಢಪಡಿಸುವ ಶಿವಕುಮಾರ ಸ್ವಾಮಿ ಇಲ್ಲಿ ಕೃಷಿಕ ಕೇವಲ ಓನರ್ ಅಲ್ಲ..... ಪ್ರೊಡ್ಯೂಸರ್ (ಉತ್ಪಾದಕ) ಸಹಾ ಅವನೇ ಆಗಿರುತ್ತಾನೆ ಎಂದು ಹೇಳುತ್ತಾರೆ. ಶಿಕ್ಷಣದಲ್ಲಿ ಈ ರೀತಿಯಲ್ಲಿ ವ್ಯವಸ್ಥೆ ಇರಬೇಕಿತ್ತು. ಆದ್ರೆ ಹಾಗಿಲ್ಲದೇ ಇರುವುದು ನಮ್ಮ ದುರ್ದೈವ. ಇನ್ನು ಶಿಕ್ಷಕ ಹುದ್ದೆಯಲ್ಲಿ ಮೆದುಳಿಗೆ ಕೆಲಸವಿದೆಯೇ ಹೊರತು ಶರೀರಕ್ಕೆ ಇಲ್ಲ. ಅವೆರಡು ಒಟ್ಟಾಗಿ ಇರುವುದನ್ನು ಕೃಷಿಯಲ್ಲಿ ಕಾಣಬಹುದು. ಇಲ್ಲಿ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸಿದರೆ ಆರೋಗ್ಯವಾಗಿಯೂ ಇರಬಹುದು ಎಂದು ಶಿವಕುಮಾರ ಸ್ವಾಮಿ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ನಮ್ಮ ಭೂಮಿ ಹಾಗೂ ವಾತಾವರಣಕ್ಕೆ ಹೊಂದಿಕೆ ಆಗುವ ಕೃಷಿಯನ್ನು ಆಯ್ಕೆ ಮಾಡಿಕೊಂಡೇ ಹೆಜ್ಜೆ ಇಡಬೇಕು. ಈ ರಂಗದಲ್ಲಿ ಕೃಷಿ ವೆಚ್ಚವನ್ನು ತಗ್ಗಿಸಿಕೊಂಡು, ಉತ್ಪಾದನೆಯನ್ನು ಹೆಚ್ಚಿಸಿಕೊಂಡರೆ ಆರ್ಥಿಕ ಸಮತೋಲನವನ್ನು ಕಾಯ್ದುಕೊಂಡು ಸಂತೃಪ್ತಿಯ ಬದುಕನ್ನು ಕಟ್ಟಿಕೊಳ್ಳಲು ಸಾಕಷ್ಟು ಅವಕಾಶಗಳಿವೆ. ಇಷ್ಟಪಟ್ಟು ಕೆಲಸ ಮಾಡಿದರೆ ಅದು ಕಷ್ಟವಲ್ಲ ಎಂದು ಹೇಳುತ್ತಾರೆ.

ಶಿವಕುಮಾರ ಸ್ವಾಮಿ ಕೇವಲ ಕೃಷಿಕರಲ್ಲ. ಅವರು ದೊಡ್ಡ ಪ್ರಮಾಣದಲ್ಲಿ ನರ್ಸರಿಯನ್ನು ಮಾಡಿಕೊಂಡಿದ್ದಾರೆ. ಆ ಮೂಲಕ ವ್ಯಾಪಾರಿ ರಂಗದಲ್ಲಿಯೂ ಸೇವೆ ಸಲ್ಲಿಸುತ್ತಾ ಅದ್ರ ಒಳಾಂತರದ ವ್ಯವಸ್ಥೆಗಳನ್ನು ಸೂಕ್ಷ್ಮವಾಗಿ ಗ್ರಹಿಸಿದ್ದಾರೆ. ನಮ್ಮಲ್ಲಿ 'ಹಸಿರುಕ್ರಾಂತಿ' ಬಂದ್ಮೇಲೆ ಕಂಪನಿಗಳು ಉದ್ಧಾರ ಆಗಿದ್ದಾವೆಯೇ ಹೊರತು, ರೈತ ಉದ್ಧಾರ ಆಗಿಲ್ಲ ಎಂದು ತುಂಬಾ ಬೇಸರಿದಿಂದಲೇ ಹೇಳುತ್ತಾರೆ.

ನಮ್ಮಲ್ಲಿ ತಂತ್ರಜ್ಞಾನ, ವಿಜ್ಞಾನಗಳು ಕೈಗಾರಿಕೆಗಳ ಪರವಾಗಿ ಇದೆಯೇ ಹೊರತು ರೈತರ ಪರವಾಗಿಲ್ಲ. ಅವುಗಳನ್ನು ಕೃಷಿ ವ್ಯವಸ್ಥೆಯಲ್ಲಿ ಉಪಯೋಗ ಮಾಡುವಾಗ ರೈತನಿಗೆ ಆ ಮಟ್ಟದ ಬುದ್ಧಿಯೂ ಇರಬೇಕು. ಬೇಕಾಬಿಟ್ಟಿಯಾಗಿ ರಾಸಾಯನಿಕ ಗೊಬ್ಬರವನ್ನು, ಔಷಧಿಯನ್ನು ಹಾಕ್ತಾ ಇರುವುದರಿಂದ ಫಲವತ್ತಾದ ಭೂಮಿ ಹಾಳಾಗುತ್ತಿದೆ.

**ನರ್ಸರಿಯೂ ಉಂಟು**

ಹೆಗ್ಗವಾಡಪುರದಲ್ಲಿ ಕಡಿಮೆ ಮಳೆ ಬೀಳುವ ಕಾರಣ, ತಮ್ಮ ಪ್ರದೇಶದಲ್ಲಿ ಬೆಳೆಯಬಹುದಾದ ವಿಧವಿಧವಾದ ಹಣ್ಣಿನ ಕೃಷಿಯನ್ನು ಮಾಡುತ್ತಿದ್ದಾರೆ. ಒಂದು ದೃಷ್ಟಿಯಲ್ಲಿ ಬರಡು ಭೂಮಿಯನ್ನು ಹಸಿರಾಗಿಸಿಕೊಂಡು, ಅದ್ರಲ್ಲಿಯೇ ಆತ್ಮ ತೃಪ್ತಿ ಪಡೆದುಕೊಂಡ ಹೆಮ್ಮೆ ಅವರದ್ದು.

ಇವರು ಕೇವಲ ಹಣ್ಣಿನ ಕೃಷಿ ಒಂದನ್ನೇ ಮಾಡುತ್ತಿಲ್ಲ. ಬಹು ಬೇಡಿಕೆ ಉಳ್ಳ ಹಣ್ಣಿನ ಗಿಡಗಳ ನರ್ಸರಿಯನ್ನು ಮಾಡುತ್ತಿದ್ದಾರೆ. ಉತ್ತಮವಾದ ಗಿಡಗಳನ್ನು ತಯಾರು ಮಾಡಿದರೆ ಉತ್ತಮ ಬೇಡಿಕೆಯೂ ಇದೆ. ಯಾವುದೇ ಕೆಲಸವನ್ನು ಶ್ರದ್ಧೆ, ನಿಷ್ಠೆಯಿಂದ ಮಾಡಿದರೆ ಯೋಗ್ಯ ಫಲವೂ ಸಿಗುತ್ತದೆ



ಎನ್ನುತ್ತಾರೆ ಸ್ವಾಮಿ. ಈ ಪ್ರಗತಿಪರ ಕೃಷಿಕರು ನರ್ಸರಿ ಒಂದರಿಂದಲೇ ವರುಷಕ್ಕೆ ಮೂರು ಲಕ್ಷ ಗಳಿಸುತ್ತಿದ್ದಾರೆ. ಹಣ್ಣಿನ ಕೃಷಿಯಾಗಲೀ ಅಥವಾ ನರ್ಸರಿಯಾಗಲೀ ಆರಂಭದ ದಿನಗಳಲ್ಲಿ ಅದಕ್ಕೆ ಬೇಕಾಗುವ ವ್ಯವಸ್ಥೆ; ಮಾರ್ಗದರ್ಶನ ಪಡೆದುಕೊಂಡು ಕಾರ್ಯಾರಂಭ ಮಾಡಿದ್ರೆ ಶ್ರಮಕ್ಕೆ ತಕ್ಕ ಫಲ ಸಿಗುತ್ತದೆ ಎಂಬ ಕಿವಿ ಮಾತನ್ನು ಹೇಳುತ್ತಾರೆ.

ಶಿವಕುಮಾರ ಸ್ವಾಮಿ ಅವರು ಕೃಷಿಯ ಬಗ್ಗೆ ಸಾಕಷ್ಟು ತಿಳಿದುಕೊಂಡಿರುವುದರಿಂದ ಆಸಕ್ತರಿಗೆ ಕೃಷಿ ಪಾಠವನ್ನು ಮಾಡುವಷ್ಟು ಸಾಮರ್ಥ್ಯ ಹೊಂದಿದ್ದಾರೆ. ಹೊಸದಾಗಿ ಕೃಷಿ ಮಾಡುವವರಿಗೆ ನೂರೆಂಟು ಸಮಸ್ಯೆಗಳಿರುತ್ತವೆ. ಅಂತವರಿಗೆ ಸಲಹೆ ನೀಡುವುದು, ಉತ್ತಮ ಕೃಷಿಕರಿಗೆ ಇನ್ನಷ್ಟು ಕೃಷಿ ಮಾಡಲು ಪ್ರೇರಣೆ ನೀಡುವುದು, ಶಾಲೆಗಳಲ್ಲಿ ಪರಿಸರದ ಬಗ್ಗೆ ಅರಿವು ಮಾಡಿಸುವುದು, ಮನೆಗೆ ಬರುವ ಅತಿಥಿಗಳಿಗೆಲ್ಲ ಸಾವಯವ ಅಡುಗೆ ಮಾಡಿ ಬಡಿಸುವುದು, ಕೃಷಿಯಲ್ಲಿ ಹೊಸತನ ಅಳವಡಿಸುವುದು, ಕೃಷಿ ಬೆಳೆಗಳ ಪ್ರಚಾರ ಹಾಗೂ ಮಾರುಕಟ್ಟೆಯನ್ನು ಸೃಷ್ಟಿ ಮಾಡಿಕೊಳ್ಳುವುದು..... ಹೀಗೆ ವಿಭಿನ್ನವಾದ ಚಟುವಟಿಕೆಯಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಸ್ವಾಮಿ ಅವರ ವಿಚಾರಧಾರೆ ಹಾಗೂ ಹಣ್ಣಿನ ಕೃಷಿಯಲ್ಲಿ ಅವರ ಸಾಧನೆ ಆದರ್ಶವಾಗಿದೆ. ಅವರನ್ನು ಸಂಪರ್ಕಿಸಲು ಬಯಸುವವರು ಅವರ ಮೊಬೈಲ್ ಸಂಖ್ಯೆ 7899877940 ಕ್ಕೆ ಕರೆ ಮಾಡಬಹುದು. ■

# ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರವಾಸಿ ತಾಣಗಳು



ಶಿವಗಂಗೆ

ಎನ್. ಜಗನ್ನಾಥ ಪ್ರಕಾಶ

**ಬೆಂ**ಗಳೂರು ಗ್ರಾಮಾಂತರ ವಿಶೇಷವಾದ ಹಾಗೂ ವಿಶಿಷ್ಟ ಜಿಲ್ಲೆ. ಜಿಲ್ಲೆಯೊಂದರೊಳಗೊಂದು ಜಿಲ್ಲೆ ಅಂದರೂ ನಡೆದೀತು. ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಪುರಾತನ, ಇತಿಹಾಸ, ಆಧುನಿಕ ಪ್ರವಾಸಿ ತಾಣಗಳನ್ನು ತನ್ನಲ್ಲಿಟ್ಟುಕೊಂಡಿದೆ.

ಕರ್ನಾಟಕದ ರಾಜಧಾನಿ ಬೆಂಗಳೂರು ಎಲ್ಲೆಗಳನ್ನು ವಿಸ್ತರಿಸುತ್ತ ನಡೆದಾಗ ಆಡಳಿತದ ಅನುಕೂಲಕ್ಕಾಗಿ 1986ರಲ್ಲಿ ಉದಯಿಸಿದ್ದು ಬೆಂಗಳೂರು ಗ್ರಾಮಾಂತರ ಜಿಲ್ಲೆ. ಪೂರ್ವ ಘಟ್ಟ ಸಾಲಿನ ಪರ್ವತಗಳ ಮುಂದುವರೆದ ಭಾಗದಂತಿರುವ ಈ ಜಿಲ್ಲೆ ಬೆಂಗಳೂರಿನೊಡನೆ ಬೆರತು ಹೋಗಿದ್ದರೂ ಪ್ರತ್ಯೇಕ ಅಸ್ತಿತ್ವವನ್ನು ಹೊಂದಿರುವ ಪ್ರದೇಶ.

ಗಂಗರು, ಚೋಳರು, ರಾಷ್ಟ್ರಕೂಟರು ಆಳ್ವಿಕೆ ನಡೆಸಿರುವ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಭಾಗಗಳು ಬಹುತೇಕ ಬೇಸಾಯ ಆಧಾರಿತ



ಪ್ರದೇಶಗಳೇ. ಅರ್ಕಾವತಿ, ದಕ್ಷಿಣ ಪಿನಾಕಿನಿ ನದಿಗಳು ಮಳೆಗಾಲದಲ್ಲಿ ಮಾತ್ರ ಹರಿದರು ಕೂಡ ಮಳೆಯೇ ಕೃಷಿಗೆ ಆಧಾರ.

ದಕ್ಷಿಣದ ಕಾಶಿ ಎಂದೇ ಹೆಸರಾದ 'ಶಿವಗಂಗೆ' ಇರುವುದು ನೆಲಮಂಗಲ ತಾಲುಕಿನಲ್ಲಿ. ಸಮುದ್ರ ಮಟ್ಟದಿಂದ 4547 ಅಡಿ ಎತ್ತರದಲ್ಲಿರುವ ಬೆಟ್ಟದ ತುದಿಯಲ್ಲಿ ಗುಹಾಂತರ ಗುಡಿಯ ಶಿವನಿಗೆ ಗಂಗಾಧರೇಶ್ವರ ಎಂಬುದು ಇನ್ನೊಂದು ಹೆಸರು. ಹಲವು ಶಿವಲಿಂಗಗಳಿಂದ ಸರೋವರದ ಸುತ್ತ ಅನೇಕ ದೇವಾಲಯಗಳಿವೆ. ಆಸ್ತಿಕರಿಗೆ ಆಪ್ಯಾಯವೆನ್ನಿಸುವ ಶಿವಗಂಗೆಯಲ್ಲಿ ಬೆಂಗಳೂರು ನಿರ್ಮಿಸಿದ ಕೆಂಪೇಗೌಡರು ಅನೇಕ ಗುಡಿಗಳನ್ನು ನಿರ್ಮಿಸಿದರೆಂದು ಇತಿಹಾಸ ತಿಳಿಸುತ್ತದೆ.

ಈ ಉದ್ಭವ ಲಿಂಗದ ಮೇಲೆ ತುಪ್ಪ ಹಾಕಿದರೆ ಬೆಣ್ಣೆ ಆಗುವುದೆಂಬ ಕೌತುಕವೂ ಇಲ್ಲಿದೆ. ಅನೇಕ ದೇಗುಲಗಳಿರುವ ಶಿವಗಂಗೆಯಲ್ಲಿ ಹೊಯ್ಸಳೇಶ್ವರನ ಪತ್ನಿ ನಾಟ್ಯರಾಣಿ ಶಾಂತಲಾದೇವಿ ಕೆಲಕಾಲ ಇದ್ದರೆಂಬ ಉಲ್ಲೇಖಗಳೂ ಇವೆ.

ವಿಶಾಲವಾದ ಇಳಿಜಾರುಗಳು ವಿಶಿಷ್ಟ ಕೋಡುಗಲ್ಲುಗಳು, ಕಡಿದಾದ ಹೆಬ್ಬಂಡೆಗಳು ಸಾಹಸ ಪ್ರಿಯರನ್ನು ಮತ್ತು ಚಾರಣಿಗರನ್ನು ಆಕರ್ಷಿಸುವ ತಾಣ ಶಿವಗಂಗೆ. ಗಂಗರಾಜವಂಶದವರಿಗೆ ಕೆಲಸಮಯ ರಾಜಧಾನಿಯಾಗಿದ್ದ 'ಮಣ್ಣೆ' ಈಗ ಅವಶೇಷಗಳ ಬೀಡು. ಸಂಶೋಧಕರಿಗೆ, ಉತ್ಖನನ ಮಾಡುವವರಿಗೆ ನೆಚ್ಚಿನ ಸ್ಥಳ.

ಪ್ರಸಾಸಿ ದೃಷ್ಟಿಯಿಂದ ದೇವನಹಳ್ಳಿ ತಾಲೂಕಿನ ಹಲವು ಸ್ಥಳಗಳು ಮಹತ್ವ ಪೂರ್ಣವಾದವು. ಸೂಲಿಬೆಲೆ ರಸ್ತೆಯಲ್ಲಿರುವ ನಲ್ಲೂರಿನ ಪುರಾತನ ಹುಣಸೇ ಮರಗಳ ಗುಂಪು ನೂರಾರು ವರ್ಷಗಳಿಂದ ಉಳಿದು ನಿಂತಿದ್ದು, ಜೀವ ವೈವಿಧ್ಯ ತಾಣವೆನ್ನಿಸಿಕೊಂಡಿದೆ. 54 ಎಕರೆಗಳಲ್ಲಿ ಹಂಚಿಕೊಂಡಿರುವ 300 ವರ್ಷಗಳಿಗೂ ಹೆಚ್ಚಾಗಿರುವ ಈ ಹುಣಸೇ



ನಲ್ಲೂರಿನ ಹುಣಸೇ ಮರಗಳು




ತೋಪಿನಲ್ಲಿ 12 ಬಗೆಗಳಿವೆ. ಅರಣ್ಯ ಇಲಾಖೆ ಹಾಗೂ ಜೀವ ವೈವಿಧ್ಯ ಮಂಡಳಿ ನಲ್ಲೂರು ಹುಣಸೆ ಮರಗಳ ತೋಪನ್ನು ಪಾರಂಪರಿಕ ವೃಕ್ಷ ಸಮೂಹವೆಂದು ಗುರುತಿಸಿದೆ.

ಈಗೀಗ ಚಕ್ಕೋತ ಹಣ್ಣಿನ ತೋಟಗಳು ವಿರಳವಾಗಿದ್ದರೂ ಕೂಡ, ದೇವನಹಳ್ಳಿಯು ರುಚಿಕರವಾದ ಚಕ್ಕೋತ ಹಣ್ಣುಗಳಿಗಾಗಿ ಪ್ರಸಿದ್ಧಿ.

ಹಾಗೆಯೇ ದೇವನಹಳ್ಳಿ ಚಾರಿತ್ರಿಕವಾಗಿಯೂ ಹೆಸರುವಾಸಿ. ಇಲ್ಲಿರುವ ಕೋಟೆ ಹಲವು ಯುದ್ಧಗಳನ್ನು ಕಂಡರೂ, ಈಗಲೂ ಸದೃಢವಾಗಿ ನಿಂತಿದ್ದು, ಇದರ ಬದಿಯಲ್ಲಿ ಕರ್ನಾಟಕ ಇತಿಹಾಸದ ಪ್ರಮುಖ ವ್ಯಕ್ತಿಗಳಲ್ಲಿ ಒಬ್ಬರಾದ ಟಿಪ್ಪು ಸುಲ್ತಾನ್ ಜನ್ಮಸ್ಥಳದ ಸ್ಮಾರಕವೂ ಇದೆ. ಕೋಟೆಯಲ್ಲಿರುವ ವೇಣುಗೋಪಾಲ ಸ್ವಾಮಿ ದೇವಾಲಯ ಆಕರ್ಷಕವಾದ ಗುಡಿ.

ಉಜ್ಜನಿ ಬೆಟ್ಟ, ಶಿವಗಂಗೆ ಬೆಟ್ಟ, ಮಾಕಳಿ ಬೆಟ್ಟ ಸಾಲುಗಳಿರುವ ಬೆಂಗಳೂರು ಗ್ರಾಮಾಂತರ ಜಿಲ್ಲೆ ಗುಲಾಬಿ ತೋಟಗಳಿಗಾಗಿ ಬಹುಖ್ಯಾತಿ. ರಂಗುರಂಗಿನ ಗುಲಾಬಿಗಳನ್ನು ವರ್ಷದುದ್ದಕ್ಕೂ ಬೆಳೆಯುವ ಈ ಜಿಲ್ಲೆ, ಈಗ ಪ್ರೇಮಿಗಳ ದಿನದ (ಫೆ–14) ಸಂದರ್ಭದಲ್ಲಿ ಶೇ 70ಕ್ಕೂ ಅಧಿಕ ಮೋಹಕ ಗುಲಾಬಿಗಳನ್ನು ವಿದೇಶಕ್ಕೆ ರಫ್ತು ಮಾಡುವ ಮೂಲಕ ಪ್ರವಾಸಿಗರನ್ನು ಆಕರ್ಷಿಸುತ್ತಿದೆ.

ಹೊಸಕೋಟೆಯ ಅವಿಮುಕ್ತ ದೇಗುಲ ಪುರಾಣ ಪ್ರಸಿದ್ಧವಾದುದು. ದೂರದೂರದಿಂದ ಭಕ್ತರು ಈ ದೇಗುಲಕ್ಕೆ ಬರುವರು. ಅವಿಮುಕ್ತ ದೇಗುಲ ಶಿಲ್ಪ ಸೌಂದರ್ಯದ ದೃಷ್ಟಿಯಿಂದಲೂ ಆಕರ್ಷಕ. ನಾಡಿನ ಪ್ರಸಿದ್ಧ ಕರಗ ಉತ್ಸವಗಳಲ್ಲಿ ಹೊಸಕೋಟೆ ಕರಗ ಉತ್ಸವಕ್ಕೆ ಭಕ್ತ ಸಮೂಹ ಅಪಾರ.

ಕರ್ನಾಟಕದ ಸುಬ್ರಹ್ಮಣ್ಯ ಕ್ಷೇತ್ರಗಳಲ್ಲಿ ದೊಡ್ಡಬಳ್ಳಾಪುರ ಸಮೀಪದ ಘಾಟಿಯಲ್ಲಿರುವ ಸುಬ್ರಹ್ಮಣ್ಯ ದೇವಾಲಯವೂ ಒಂದು. ಅಪಾರ ಭಕ್ತರನ್ನು ಸೆಳೆಯುವ ಘಾಟಿ, ಎತ್ತುಗಳ ಜಾತ್ರೆಯಿಂದಲೂ ಮನೆಮಾತು.

ಜಗತ್ತಿನ ಆಕರ್ಷಕ ವಿಮಾನ ನಿಲ್ದಾಣಗಳಲ್ಲಿ ದೇವನಹಳ್ಳಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವೂ ಒಂದು. ಮಾಹಿತಿ ತಂತ್ರಜ್ಞಾನದ ವಿವಿಧ ಕೈಗಾರಿಕೆಗಳಿಂದ ಖ್ಯಾತವಾದ ಬೆಂಗಳೂರಿನ ವಿಮಾನ ಸಾರಿಗೆಯನ್ನು ನಿರ್ವಹಿಸುವ ಈ ವಿಮಾನ ನಿಲ್ದಾಣಕ್ಕೆ ಬೆಂಗಳೂರು ನಗರ ನಿರ್ಮಾಪಕ ಕೆಂಪೇಗೌಡರ ಆಳೆತ್ತರದ ಪ್ರತಿಮೆ ಈಗಿನ ಇನ್ನೊಂದು ಆಕರ್ಷಣೆ. ಕಲಾತ್ಮಕವಾಗಿ ನಿರ್ಮಾಣಗೊಂಡ ವಿಮಾನ ನಿಲ್ದಾಣ ಪ್ರಯಾಣಿಕರನ್ನು ಸೆಳೆಯುವ ತಾಣವಾಗಿದೆ.

ಬಣ್ಣ ಬಣ್ಣದ ಹೂಗಳು, ಹಲವು ಬಗೆಯ ತರಕಾರಿಗಳನ್ನು ಬೆಳೆಯುವ ಪ್ರದೇಶವಾಗಿರುವ ಬೆಂಗಳೂರು ಜಿಲ್ಲೆ ಪಶುಪಾಲನೆಗೆ ಪ್ರಸಿದ್ಧವಾದುದು. ರಾಜಧಾನಿಗೆ ಕೂಗಳತೆಯ ದೂರದಲ್ಲಿದ್ದು, ಅನೇಕ ವಾರಾಂತ್ಯ ಮನರಂಜನಾ ತಾಣಗಳನ್ನು ಹೊಂದಿದೆ. ಕನಸವಾಡಿಯ ಶನಿದೇವ ದೇಗುಲ, ದೇವನಹಳ್ಳಿಯ ಜೈನ ಮಂದಿರ,



ಘಾಟಿ ಸುಬ್ರಹ್ಮಣ್ಯ

ಶಿವಗಂಗೆ, ಘಾಟಿ ಸುಬ್ರಹ್ಮಣ್ಯ, ಮೊದಲಾದ ಧಾರ್ಮಿಕ ತಾಣಗಳ ಜೊತೆಗೆ ಕರ್ನಾಟಕದ ಪ್ರಸಿದ್ಧ ಪ್ರಕೃತಿ ಕಲಾವಿದರಾಗಿದ್ದ ರುಮಾಲೆ ಚೆನ್ನಬಸವಯ್ಯನವರ ಸುಂದರ ಪ್ರಕೃತಿ ಚಿತ್ರಗಳ ಗ್ಯಾಲರಿ ದೊಡ್ಡಬಳ್ಳಾಪುರದಲ್ಲಿದ್ದು, ಕಲಾವಿದರನ್ನು ತನ್ನತ್ತ ಸೆಳೆಯುತ್ತದೆ.

ಅಂತೆಯೇ ಹೆಸರಾಂತ ಶಿಲ್ಪಿ ಎ.ಸಿ. ಹನುಮಂತಾಚಾರ್ಯ ಅವರ ಶಿಲ್ಪಕಲಾ ಶಾಲೆಯು ದೇವನಹಳ್ಳಿಯಲ್ಲಿದ್ದು, ಅಲ್ಲಿ ಅಪೂರ್ವ ಶಿಲ್ಪಕೃತಿಗಳನ್ನು ನೋಡಬಹುದು.

ವಿ.ಸೀತಾರಾಮ್ಯಯ, ಡಾ. ಅನುಪಮಾ ನಿರಂಜನ, ಡಾ. ಕೆ.ಎಸ್. ನಿಸಾರ್ ಅಹಮದ್, ಡಿ.ಎಲ್.ನರಸಿಂಹಚಾರ್, ವಿಮರ್ಶಕ ಡಿ.ಆರ್. ನಾಗರಾಜ್, ಬರಹಗಾರ ಸಿ. ವೀರಣ್ಣ, ಕನ್ನಡ ವೈದ್ಯ ಪದಕೋಶ ರಚಿಸಿದ ಡಾ. ಡಿ.ಎಸ್.ಶಿವಪ್ಪ, ಶಿಕ್ಷಣ ತಜ್ಞ ಹಾಗೂ ಹಲವು ಶಿಕ್ಷಣ ಸಂಸ್ಥೆಗಳ ಸ್ಥಾಪಕ ಕೊಂಗಾಡಿಯಪ್ಪ, ಲೇಖಕ ಮಲ್ಲೇಪುರಂ ಜಿ.ವೆಂಕಟೇಶ್, ಇತಿಹಾಸಕಾರ ಎಚ್.ಎಸ್. ಗೋಪಾಲರಾವ್, ಕವಿ ವಿ. ಸೀತಾರಾಮಯ್ಯ ಇವರೆಲ್ಲರೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೇರಿದವರು. ಒಟ್ಟಿನಲ್ಲಿ ಬೆಂಗಳೂರಿನ ಜನರಿಗೆ ಒಂದು ದಿನದ ಪ್ರವಾಸ ಕೈಗೊಳ್ಳಲು ಬೆಂಗಳೂರು ಗ್ರಾಮಾಂತರ ಜಿಲ್ಲೆ ಸೂಕ್ತವಾಗಿದೆ.

# ಪದಬಂಧ-59



ವಿದ್ಯಾ ವಿ. ಹಾಲಭಾವಿ

## ಎಡದಿಂದ ಬಲಕ್ಕೆ

1. ಗಾಂಧೀಜಿಯವರನ್ನು ಹೀಗೂ ಸಂಬೋಧಿಸಲಾಗುತ್ತದೆ( 2)
4. ವಿಮೋಚನಾ ದಿನವನ್ನು ಆಚರಿಸಿಕೊಳ್ಳುವ ಜಿಲ್ಲೆಗಳಿಗೆ ಈ ಹೆಸರಿದೆ (7)
6. ಕಮ್ಮಾರ ಕೈಯಿದು (2)
8. ಕಲ್ಯಾಣ ಕರ್ನಾಟಕದ ಹರಿಕಾರ (8)
10. ಬಸವಣ್ಣನವರ ವಚನಾಂಕಿತ (8)
13. ಪಗಡೆದಾಳದಿಂದ ಸೂಚಿತವಾಗುವ ಸಂಖ್ಯೆಉಲ್ಟಾ ಆಗಿದೆ (2)
15. ದೈನಂದಿನ ಸಮಾಚಾರವನ್ನು ತಿಳಿಸುವ ಪತ್ರಿಕೆ (7)
17. ಮೈಸೂರು ದಸರಾದಲ್ಲಿ ಪ್ರಮುಖವಾದ ಕ್ರೀಡೆ (2)

## ಮೇಲಿಂದ ಕೆಳಕ್ಕೆ

1. ಬಾಲ ಹಿಡಿದುಕೊಂಡಿರುವ ಹುಡುಗ (3)
2. ಹಗರಣದಲ್ಲಿ ಸಿಕ್ಕಿರುವ ದುಡ್ಡು (2)
3. ಶುನಕದ ಹತ್ತಿರವಿರುವ ಗಿಳಿ (2)
5. ಅಗಲವಾದ ದುಂಡನೆಯ ಪಾತ್ರೆ (3)
7. ವರನಿಗೆ ಕೇಳಿಸಿದ ಧ್ವನಿ (2)
9. ಹೂವಿನ ದಂಡೆ (3)
11. ಸನ್ನಿಧಾನದಲ್ಲಿ ನಡೆದ ಒಪ್ಪಂದ (3)
12. ವಠಾರದಲ್ಲಿರುವ ಮದುವೆ ಗಂಡು (2)
14. ಕಿರಣ ಇಲ್ಲಿ ಕಾಣುತ್ತಿದೆ (3)
15. ಹನ್ನೆರಡು ತಿಂಗಳುಗಳ ಅವಧಿ (2)
16. ಪಯಣದಲ್ಲಿ ಕಟ್ಟಿದ ಬಾಜಿ (2)

## ಉತ್ತರ

**ಎಡದಿಂದ ಬಲಕ್ಕೆ**

1. ಬಾಪು 4. ಕಲ್ಯಾಣ ಕರ್ನಾಟಕ 6. ಕರ 8. ವಲ್ಲಭಬಾಯಿಪಟೇಲ್
10. ಕೂಡಲಸಂಗಮದೇವ 13. ರಗ 15. ವರ್ತಮಾನಪತ್ರಿಕೆ 17. ಕುಸ್ತಿ

**ಮೇಲಿಂದ ಕೆಳಕ್ಕೆ**

1. ಬಾಲಕ 2. ಹಣ 3. ಶುಕ 5. ಕಡಾಯಿ 7. ರವ
9. ಬಾಸಿಂಗ 11. ಸಂಧಾನ 12. ವರ 14. ಗಭಸ್ತಿ 15. ವರ್ಷ 16. ಪಣ

**–: ಸೂಚನೆ :–**

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ-ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Hemanth M Nimbalkar, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Lavanya Mudrana, #19, Vidyapeeta Circle, Banashankari 1st Stage, Bangalore-560050



ಸೆಪ್ಟೆಂಬರ್ 9 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೆಂಗಳೂರಿನ ಶಿವಾಜಿನಗರದ ಐತಿಹಾಸಿಕ ಬೆಸಿಲಿಕಾ ಚರ್ಚ್‌ನಲ್ಲಿ ಜರುಗಿದ ಸೇಂಟ್ ಮೇರಿ ಅಮ್ಮನವರ ಹುಟ್ಟುಹಬ್ಬದ ಆಚರಣೆಯನ್ನು ಉದ್ಘಾಟಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಶಾಸಕರಾದ ರಿಜ್ವಾನ್ ಅರ್ಷದ್, ಚರ್ಚ್‌ನ ಬಿಷಪ್ ಡಾ.ಪೀಟರ್ ಮಚಾಡೋ ಅವರು ಹಾಗೂ ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿಗಳಾದ ಗೋವಿಂದರಾಜು ಅವರು ಉಪಸ್ಥಿತರಿದ್ದರು.



ಸೆಪ್ಟೆಂಬರ್ 11 ರಂದು ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನದ ಅಂಗವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅರಣ್ಯ ಭವನದಲ್ಲಿರುವ ಹುತಾತ್ಮರ ಸ್ಮಾರಕಕ್ಕೆ ಪುಷ್ಪನಮನ ಸಲ್ಲಿಸಿದ ಸಂದರ್ಭ.

RNI No. KAR/KAN/2017/75029

Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26


